ಬುಧವಾರ, ಜುಲೈ 12, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರವಾಹ

ನವದೆಹಲಿಯ ಯಮುನಾ ನದಿಯ ಹಳೆ ಸೇತುವೆ ಬಳಿ ಮಂಗಳವಾರ ನೆರೆ ನೀರಲ್ಲಿ ಆಟವಾಡಿದ ಮಕ್ಕಳು



ಮಹಾಲೇಖಪಾಲರ ವರದಿಯಲ್ಲಿ ಬಹಿರಂಗ • 34 ಸಾರ್ವಜನಿಕ ಉದ್ಯಮಗಳ ಆಸ್ತಿ ಶೂನ್ಯ

ಅಪೂರ್ಣ ಕಾಮಗಾರಿಗೆ ₹4,087 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022ರ ಮಾರ್ಚ್ 31ಕ್ಕೆ ರಾಜ್ಯದ ವಿವಿಧ ಇಲಾಖೆಗಳಲ್ಲಿ 1,208 ಕಾಮಗಾರಿಗಳು ಅಪೂರ್ಣ ಸ್ಥಿತಿಯಲ್ಲಿದ್ದು, ಅವುಗಳ ಮೇಲೆ ₹4,087.51 ಕೋಟಿ ವೆಚ್ಚ ಮಾಡಲಾಗಿತ್ತು ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

2021ರ ಮಾರ್ಚ್ ಅಂತ್ಯಕ್ಕೆ 1,133 ಕಾಮಗಾರಿಗಳು ಅಪೂರ್ಣ ಸ್ಥಿತಿಯಲ್ಲಿದ್ದವು. 2022ರ ಮಾರ್ಚ್ ಅಂತ್ಯಕ್ಕೆ ಈ ಸಂಖ್ಯೆ 1,208ಕ್ಕೆ ಏರಿಕೆಯಾಗಿತ್ತು. ರಸ್ತೆ ಮತ್ತು ಸೇತುವೆ ನಿರ್ಮಾಣದ 928, ನೀರಾವರಿಗೆ ಸಂಬಂಧಿಸಿದ 215, ಕಟ್ಟಡ ನಿರ್ಮಾಣದ 25 ಹಾಗೂ ಇತರ 40 ಕಾಮಗಾರಿಗಳು ದೀರ್ಘ ಕಾಲದಿಂದ ಅಪೂರ್ಣ ಸ್ಥಿತಿಯಲ್ಲಿವೆ ಎಂಬ ಮಾಹಿತಿ ವರದಿಯಲ್ಲಿದೆ.

92 ಕಾಮಗಾರಿಗಳು ಐದು ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಅಪೂರ್ಣವಾಗಿವೆ. 938 ಕಾಮಗಾರಿಗಳು ಒಂದು ವರ್ಷಕ್ಕಿಂತಲೂ ಹೆಚ್ಚು ಅವಧಿಯಿಂದ ಅಪೂರ್ಣ ಸ್ಥಿತಿಯಲ್ಲಿವೆ. 178 ಕಾಮಗಾರಿಗಳು ಒಂದು ವರ್ಷಕ್ಕಿಂತ ಕಡಿಮೆ ಅವಧಿಯಿಂದ ಬಾಕಿ ಇವೆ. ಲೋಕೋಪಯೋಗಿ ಮತ್ತು ಜಲ ಸಂಪನ್ಮೂಲ ಇಲಾಖೆಗಳು ಈ ವಿಳಂಬಕ್ಕೆ ಸರಿಯಾದ ಕಾರಣ ನೀಡಿಲ್ಲ ಎಂದು ಸಿಎಜಿ ಆಕ್ಷೇಪಿಸಿದೆ.

ಪಿ.ಡಿ ಖಾತೆಯಲ್ಲಿ ಠೇವಣಿ ಹೆಚ್ಚಳ: ವಿವಿಧ ಉದ್ದೇಶಗಳಿಗಾಗಿ ಸರ್ಕಾರ ಬಿಡುಗಡೆ ಮಾಡುವ ಅನುದಾನವನ್ನು ಅಧಿಕಾರಿಗಳ ವೈಯಕ್ತಿಕ ಠೇವಣಿ (ಪಿ.ಡಿ) ಖಾತೆಗಳಲ್ಲಿ ಉಳಿಸಿಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿರುವುದು ಕಂಡುಬಂದಿದೆ. 2021ರ ಮಾರ್ಚ್ ಅಂತ್ಯಕ್ಕೆ ಪಿ.ಡಿ ಖಾತೆಗಳಲ್ಲಿ ₹3,989.23 ಕೋಟಿ ಠೇವಣಿ ಇತ್ತು. 2022ರ ಮಾರ್ಚ್ ಅಂತ್ಯಕ್ಕೆ ಪಿ.ಡಿ ಖಾತೆಗಳಲ್ಲಿನ ಠೇವಣಿ ಮೊತ್ತ ₹ 4,105.61 ಕೋಟಿಗೆ ಏರಿಕೆಯಾಗಿದೆ ಎಂಬುದು ವರದಿಯಲ್ಲಿದೆ.

2022ರ ಮಾರ್ಚ್ ಅಂತ್ಯದಲ್ಲಿ 25 ಪ್ರಕರಣಗಳಲ್ಲಿ ₹ 10,849.61 ಕೋಟಿ ಅನುದಾನ ಬಳಕೆಯಾಗದೇ ಉಳಿದಿತ್ತು. ಅದರಲ್ಲಿ ₹ 5,998.67 ಕೋಟಿಯನ್ನು ಮಾತ್ರ ಹಿಂದಿರುಗಿಸಲಾಗಿತ್ತು. ₹ 4,850.94 ಕೋಟಿಯನ್ನು ಹಿಂದಿರುಗಿಸಿರಲಿಲ್ಲ ಎಂದು ವರದಿ ಹೇಳಿದೆ.

34 ಸಂಸ್ಥೆಗಳ ಆಸ್ತಿ ಶೂನ್ಯ: ರಾಜ್ಯ ಸರ್ಕಾರಿ ಸ್ವಾಮ್ಯದ 125 ಸಾರ್ವಜನಿಕ ವಲಯದ ಉದ್ದಿಮೆಗಳ ಪೈಕಿ 34 ಸಂಸ್ಥೆಗಳ ನಿವ್ವಳ ಆಸ್ತಿ ಮೌಲ್ಯ ಮತ್ತು ಒಟ್ಟು ನಷ್ಟದ ಪ್ರಮಾಣ ಸಮಸ್ಥಿತಿಗೆ ಬಂದಿದೆ. 34 ಸಂಸ್ಥೆಗಳೂ ಶೂನ್ಯ ಆಸ್ತಿಯನ್ನು ಹೊಂದಿದ ಸ್ಥಿತಿಯಲ್ಲಿವೆ ಎಂಬ ಅಂಶ ವರದಿಯಲ್ಲಿದೆ.

ಕೋವಿಡ್ ನಿಯಂತ್ರಣಕ್ಕೆ ₹7,116 ಕೋಟಿ

2019-20ರಿಂದ 2021-22ರ ಅವಧಿಯಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ಆರೋಗ್ಯ, ವೈದ್ಯಕೀಯ ಶಿಕ್ಷಣ ಮತ್ತು ಕಂದಾಯ ಇಲಾಖೆಗಳು ₹ 7,116.75 ಕೋಟಿ ವೆಚ್ಚ ಮಾಡಿವೆ ಎಂದು ಸಿಎಜಿ ತಿಳಿಸಿದೆ.

ಮೂರೂ ಇಲಾಖೆಗಳು ಕೋವಿಡ್ ನಿಯಂತ್ರಣಕ್ಕಾಗಿ ₹ 7,638.5 ಕೋಟಿ ಬಿಡುಗಡೆ ಮಾಡಿದ್ದವು. ಅದರಲ್ಲಿ ₹ 521.75 ಕೋಟಿ ಬಳಕೆಯಾಗದೆ ಉಳಿದಿದೆ ಎಂದು ವರದಿ ಹೇಳಿದೆ.

ಹೆಚ್ಚು ಅನುದಾನ ಉಳಿಸಿಕೊಂಡ ಇಲಾಖೆಗಳು (₹ಕೋಟಿಗಳಲ್ಲಿ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್	2,782.83
ಆರೋಗ್ಯ ಮತ್ತು ಕುಟುಂಬ ಕಲ್ಯಾಣ	976.3
ಕಂದಾಯ	952.49
ಗೃಹ ಮತ್ತು ಸಾರಿಗೆ	878.09
ನಗರಾಭಿವೃದ್ಧಿ	597.15
ಶಿಕ್ಷಣ	538.93
ಕೃಷಿ ಮತ್ತು ತೋಟಗಾರಿಕೆ	443.27
ಸಮಾಜ ಕಲ್ಯಾಣ	300

ಭೂಸ್ವಾಧೀನಕ್ಕೆ ಹಣವಿಲ್ಲ: ಡಿಕೆಶಿ

ಬೆಂಗಳೂರು: ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತಕ್ಕಾಗಿ ಆಲಮಟ್ಟಿ ಜಲಾಶಯದಿಂದ ಭೂಮಿ ಕಳೆದುಕೊಳ್ಳಲಿರುವ ಸಂತ್ರಸ್ತರಿಗೆ ಪರಿಹಾರ ನೀಡಲು ಪ್ರಸಕ್ತ ಬಜೆಟ್‌ನಲ್ಲಿ ಹಣವಿಲ್ಲ. ಈ ಕುರಿತು ಅಧಿವೇಶನ ಮುಗಿಯುವುದರ ಒಳಗೆ ಆ ಭಾಗದ ಮುಖಂಡರ ಸಭೆ ಕರೆದು ಚರ್ಚಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಪರಿಷತ್‌ನಲ್ಲಿ ಬಿಜೆಪಿಯ ಹಣಮಂತ ನಿರಾಣಿ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, '1.33 ಲಕ್ಷ ಎಕರೆ ಭೂಮಿಯ ಸ್ವಾಧೀನ ಮಾಡಬೇಕಾಗಿದೆ. ಪ್ರಸ್ತುತ 27 ಸಾವಿರ ಎಕರೆ ವಶಪಡಿಸಿಕೊಳ್ಳಲಾಗಿದೆ. ಬೊಮ್ಮಾಯಿ ಅವರು ಮಂಡಿಸಿದ್ದ ಬಜೆಟನ್ನೇ ಸ್ವಲ್ಪ ಮಾರ್ಪಾಡು ಮಾಡಿದ್ದೇವೆ. ಹಾಗಾಗಿ, ಉಳಿದ ಭೂಸ್ವಾಧೀನಕ್ಕೆ ಹಣ ನೀಡಲು ಸಾಧ್ಯವಿಲ್ಲ. ಬಾಕಿ ಇರುವ ಅಧಿಸೂಚನೆ ಹೊರಡಿಸಲು ಕೇಂದ್ರವನ್ನು ಕೋರಿದ್ದೇವೆ' ಎಂದರು.

31ರೊಳಗೆ ಯಶಸ್ವಿನಿ ಕಾರ್ಡ್: ಸಚಿವ ರಾಜಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸಹಕಾರಿಗಳಿಗೆ ನಗದುರಹಿತ ಚಿಕಿತ್ಸೆ ಒದಗಿಸುವ 'ಯಶಸ್ವಿನಿ' ಯೋಜನೆಯಡಿ ಕಾರ್ಡ್ ಸಿಗದೇ ಇರುವ ಅರ್ಹ ಸದಸ್ಯರಿಗೆ ಇದೇ 31ರ ಒಳಗೆ ಕಾರ್ಡ್‌ಗಳನ್ನು ವಿತರಿಸಲಾಗುವುದು ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಪ್ರತಾಪ್ ಸಿಂಹ ನಾಯಕ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಪರಿಷ್ಕೃತ ಯಶಸ್ವಿನಿ ಯೋಜನೆಯಡಿ 30 ಲಕ್ಷ ಸದಸ್ಯರನ್ನು ನೋಂದಾಯಿಸಿಕೊಳ್ಳುವ ಗುರಿ ನಿಗದಿಪಡಿಸಲಾಗಿತ್ತು. ಇದೇ ಮಾರ್ಚ್ ಅಂತ್ಯಕ್ಕೆ 45.80 ಸದಸ್ಯರು ನೋಂದಾಯಿಸಿಕೊಂಡಿದ್ದಾರೆ' ಎಂದರು.

'ಸರ್ಕಾರ ನಿಗದಿಪಡಿಸಿರುವ ಚಿಕಿತ್ಸಾ ಶುಲ್ಕ ಕಡಿಮೆ ಇರುವುದರಿಂದ ಖಾಸಗಿ ಆಸ್ಪತ್ರೆಗಳು ಈ ಯೋಜನೆಯಡಿ ಚಿಕಿತ್ಸೆ ನೀಡಲು ಹಿಂದೇಟು ಹಾಕುತ್ತಿವೆ. ಶುಲ್ಕ ಪರಿಷ್ಕರಿಸಲು ಚಿಂತನೆ ನಡೆಸಲಾಗಿದೆ' ಎಂದೂ ವಿವರಿಸಿದರು.

ಆದೇಶ ವಾಪಸ್‌ಗೆ ಪರಿಶೀಲನೆ: 'ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯನ್ನು ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ಒಂದು ವಿಭಾಗವಾಗಿ ವಿಲೀನಗೊಳಿಸಿ ಆದೇಶ ಹೊರಡಿಸಿರುವುದನ್ನು ವಾಪಸ್ ಪಡೆಯಲು ಪರಿಶೀಲಿಸಲಾಗುತ್ತಿದೆ' ಎಂದು ಕೆ.ಎನ್. ರಾಜಣ್ಣ ತಿಳಿಸಿದರು.

ಬಿಜೆಪಿಯ ಭಾರತಿ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, '6ನೇ ವೇತನ ಆಯೋಗದ ಶಿಫಾರಸ್ಸಿನಂತೆ ವಿಲೀನಗೊಳಿಸಲಾಗಿತ್ತು. ಕೆಲಸದ ಒತ್ತಡ ಕಡಿಮೆ ಎಂಬ ಕಾರಣಕ್ಕೆ ಆಯೋಗ ಈ ಶಿಫಾರಸು ಮಾಡಿತ್ತು. ಆದರೆ, ಸಹಕಾರ ಇಲಾಖೆಯಲ್ಲಿ ಹಣ ದುರುಪಯೋಗದ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯನ್ನು ಪ್ರತ್ಯೇಕಿಸುವ ಉದ್ದೇಶವಿದೆ' ಎಂದರು.

ದರ ಕಡಿತ ಮಾಡಿದರೆ ವಿದ್ಯುತ್ ಖರೀದಿ: 'ಪವನ ವಿದ್ಯುತ್ ಉತ್ಪಾದನಾ ಘಟಕಗಳು ಪ್ರತಿ ಯೂನಿಟ್ ವಿದ್ಯುತ್ ಅನ್ನು ₹3ಗೆ ನೀಡುತ್ತಿವೆ. ಆದರೆ, ಸಕ್ಕರೆ ಕಾರ್ಖಾನೆಗಳು ₹ 6 ನಿಗದಿಪಡಿಸಿವೆ. ಹೀಗಾಗಿ, ಸರ್ಕಾರ ಸಕ್ಕರೆ ಕಾರ್ಖಾನೆಗಳಿಂದ ಉತ್ಪತ್ತಿಯಾಗುವ ವಿದ್ಯುತ್ ಖರೀದಿ ಮಾಡುತ್ತಿಲ್ಲ. ದರ ಕಡಿಮೆ ಮಾಡಿದರೆ ಖರೀದಿಸಲಾಗುವುದು' ಎಂದು ಎಪಿಎಂಸಿ ಸಚಿವ ಶಿವಾನಂದ ಪಾಟೀಲ ಹೇಳಿದರು. ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಹನುಮಂತ ನಿರಾಣಿ ಪ್ರಶ್ನೆಗೆ ಸಚಿವರು ಉತ್ತರಿಸಿದರು.

ಭೂ ಸ್ವಾಧೀನ ಅಕ್ರಮ- ಸಿಐಡಿ ತನಿಖೆ: 'ಕೆಐಎಡಿಬಿ ಧಾರವಾಡ ವಲಯ ಕಚೇರಿ ವ್ಯಾಪ್ತಿಯಲ್ಲಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಎರಡು ಬಾರಿ ಹೆಚ್ಚಿನ ಪರಿಹಾರ ನೀಡಿದ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿದ್ದು, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ ಮಾತನಾಡಿ, 'ಕೆಐಎಡಿಬಿ ಧಾರವಾಡ ವಲಯ ಕಚೇರಿ ವ್ಯಾಪ್ತಿಯಲ್ಲಿ 2022-23 ಸಾಲಿನಲ್ಲಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಎರಡು ಬಾರಿ ಹೆಚ್ಚಿನ ಪರಿಹಾರ ನೀಡಲಾಗಿದೆ. ಅಲ್ಲದೆ, ಖಾತೆದಾರರಿಗೆ ಬದಲಾಗಿ ಬೇರೆಯವರಿಗೆ ಹಣ ವಿತರಿಸಲಾಗಿದೆ. ಇದರಲ್ಲಿ ನಾಲ್ವರು ಅಧಿಕಾರಿಗಳ ಕೈವಾಡವಿದೆ. ಅವರನ್ನು ತಕ್ಷಣ ವರ್ಗಾವಣೆ ಮಾಡಬೇಕು' ಎಂದು ಆಗ್ರಹಿಸಿದರು.

ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿ ಅಕ್ರಮ ತನಿಖೆ: ಎಂ.ಬಿ. ಪಾಟೀಲ

'ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿ ದರ ಪರಿಷ್ಕರಣೆ ಮಾಡಿದ್ದು, ಅದರ ಬಗ್ಗೆ ಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದುಕೊಂಡು ಪರಿಶೀಲಿಸಲಾಗುತ್ತದೆ. ಅವ್ಯವಹಾರ ಆರೋಪದ ಬಗ್ಗೆ ತನಿಖೆ ನಡೆಸಲಾಗುವುದು' ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಕಾಂಗ್ರೆಸ್ಸಿನ ಮಂಜುನಾಥ್ ಭಂಡಾರಿ, 'ಶಿವಮೊಗ್ಗ ವಿಮಾನ ನಿಲ್ದಾಣದ ಹೊಸ ರನ್ ವೇಗೆ ಸಾಕಷ್ಟು ಹಣ ಖರ್ಚು ಮಾಡಿದ್ದಾರೆ. ರನ್ ವೇ ನಿರ್ಮಾಣದಲ್ಲಿ ದೊಡ್ಡ ಅಕ್ರಮ ಆಗಿದೆ. ಈ ಬಗ್ಗೆ ಸರ್ಕಾರ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.

ವೇಣುಗೋಪಾಲ ನಾಯಕ್ ಹತ್ಯೆ ಪ್ರಕರಣ

ಪೊಲೀಸರ ವಿರುದ್ಧ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಿ. ನರಸೀಪುರದಲ್ಲಿ ಹನುಮ ಜಯಂತಿ ದಿನವೇ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ ನಾಯಕ್ ಮತ್ತು ಆತನನ್ನು ಕೊಲೆ ಮಾಡಿರುವ ಆರೋಪಿಗಳ ಮಧ್ಯೆ ಘರ್ಷಣೆ ನಡೆದಿತ್ತು. ಪೊಲೀಸರು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದಿದ್ದ ಕಾರಣದಿಂದ ಮರುದಿನ ಕೊಲೆ ನಡೆದಿದೆ' ಎಂದು ಬಸವರಾಜ ಬೊಮ್ಮಾಯಿ ಅವರು ಆರೋಪಿಸಿದರು.

ಬೊಮ್ಮಾಯಿ ಆರೋಪ ನಿರಾಕರಿಸಿದ ಗೃಹ ಸಚಿವ ಜಿ. ಪರಮೇಶ್ವರ, 'ಹನುಮ ಜಯಂತಿ ದಿನ ಜಗಳವಾಗಿ, ಅದೇ ದ್ವೇಷದಿಂದ ವೇಣುಗೋಪಾಲ ನಾಯಕ್ ಕೊಲೆ ನಡೆದಿದೆ. ಹಲವು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಯಾವ ಲೋಪವೂ ಆಗಿಲ್ಲ' ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, 'ಯಾವುದೇ ಅಪರಾಧ ಪ್ರಕರಣ ನಡೆದರೂ ಮುಲಾಜಿಲ್ಲದೆ ಕ್ರಮ ಜರುಗಲಿದೆ. ಈ ಪ್ರಕರಣದಲ್ಲಿ ಪೊಲೀಸರು ಕರ್ತವ್ಯಲೋಪ ಎಸಗಿದ್ದರೆ, ಅವರ ವಿರುದ್ಧವೂ ಕ್ರಮ ಜರುಗಿಸುತ್ತೇವೆ' ಎಂದು ಅವರು ಹೇಳಿದರು.

ರಾಜ್ಯಪಾಲರಿಗೆ ಇಂದು ಮನವಿ

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಇದರ ವಿರುದ್ಧ ಬಿಜೆಪಿಯಿಂದ ಬುಧವಾರ ಪ್ರತಿಭಟನೆ ನಡೆಸಿ, ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯದಲ್ಲಿ ಅಪರಾಧ ಕೃತ್ಯಗಳು ಸರಣಿಯೋಪಾದಿಯಲ್ಲಿ ನಡೆಯುತ್ತಿವೆ. ಹಿರಿಯ ಪೊಲೀಸ್ ಅಧಿಕಾರಿಗಳೇ ಹಫ್ತಾ ವಸೂಲಿಗೆ ಒತ್ತಡ ಹೇರುತ್ತಿದ್ದಾರೆ. ಕಾನೂನು ಸುವ್ಯವಸ್ಥೆ ಕಾಪಾಡಲು ಸರ್ಕಾರಕ್ಕೆ ಸೂಚಿಸುವಂತೆ ರಾಜ್ಯಪಾಲರಿಗೆ ಮನವಿ ಮಾಡುತ್ತೇವೆ' ಎಂದರು.



ವಾಗ್ವಾದ

ವರ್ಗಾವಣೆ ವಿಷಯದಲ್ಲಿ ಆಡಳಿತ ಹಾಗೂ ಪ್ರತಿಪಕ್ಷಗಳ ಸದಸ್ಯರ ನಡುವೆ ವಿಧಾನಸಭೆಯಲ್ಲಿ ಮಂಗಳವಾರ ವಾಗ್ವಾದ ಉಂಟಾಯಿತು

ಸಚಿವರ ಜಿಲ್ಲೆಯಲ್ಲೇ 52 ಶಾಲೆಗಳಿಗೆ ಶಿಕ್ಷಕರಿಲ್ಲ!

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸರ್ಕಾರಿ ಶಾಲೆಗಳ ಪ್ರಸಕ್ತ ಸ್ಥಿತಿಗತಿ ತೆರೆದಿಟ್ಟ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, ತಮ್ಮ ತವರು ಜಿಲ್ಲೆ ಶಿವಮೊಗ್ಗದಲ್ಲೇ 52 ಶಾಲೆಗಳಲ್ಲಿ ಕಾಯಂ ಶಿಕ್ಷಕರು ಇರಲಿಲ್ಲ. ರಾಜ್ಯದ ಇತರೆ ಜಿಲ್ಲೆಗಳ ಮಾಹಿತಿ ಕೇಳಿರುವೆ. ಎಲ್ಲ ಶಾಲೆಗಳಿಗೂ ಅಗತ್ಯ ಶಿಕ್ಷಕರನ್ನು ನೇಮಿಸಲು ಕಾಲಮಿತಿಯ ಒಳಗೆ ಕ್ರಮ ಕೈಗೊಳ್ಳಲಾಗುವುದು. ಕೋರ್ಟ್ ಪ್ರಕರಣವನ್ನು ಶೀಘ್ರ ಇತ್ಯರ್ಥಪಡಿಸಿಕೊಂಡು ಅಂತಿಮ ಪಟ್ಟಿಯಲ್ಲಿರುವ 13 ಸಾವಿರಕ್ಕೂ ಹೆಚ್ಚು ಶಿಕ್ಷಕರಿಗೆ ನೇಮಕಾತಿ ಆದೇಶ ನೀಡಲಾಗುವುದು ಎಂದರು.

ಎಸ್ಕಾಂಗಳಿಗೆ ಪಾವತಿಯಾಗದ ಶುಲ್ಕ • ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಿಂತನೆ

'ಮೀನು ಮಾರಿ ವಿದ್ಯುತ್ ಬಿಲ್ ಪಾವತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆರೆಗಳಲ್ಲಿ ಮೀನುಗಾರಿಕೆ ಮಾಡಿ, ಮೀನು ಫಸಲನ್ನು ಹರಾಜು ಹಾಕಿ ಅದರಿಂದ ಬರುವ ಆದಾಯದಿಂದ ವಿದ್ಯುತ್ ಶುಲ್ಕ ಪಾವತಿ ಮಾಡುವ ಬಗ್ಗೆ ಚಿಂತನೆ ನಡೆಸಲಾಗಿದೆ' ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಏತ ನೀರಾವರಿಗಳಿಗೆ ಸಂಬಂಧಿಸಿದಂತೆ ವಿವಿಧ ಎಸ್ಕಾಂಗಳಿಗೆ ಜಲಸಂಪನ್ಮೂಲ ಇಲಾಖೆಯಿಂದ ವಿದ್ಯುತ್ ಶುಲ್ಕ ಪಾವತಿ ಆಗಿಲ್ಲ. ಸುಮಾರು ₹4,000 ಕೋಟಿಗೂ ಹೆಚ್ಚು ಮೊತ್ತ ಇಂಧನ ಇಲಾಖೆಗೆ ಪಾವತಿ ಮಾಡಬೇಕಾಗಿದೆ ಎಂದು ಅವರು ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಸುರೇಶ್‌ಗೌಡರ ಪ್ರಶ್ನೆಗೆ ಉತ್ತರಿಸಿದರು.

'ಹಿಂದೆಲ್ಲ ನೀರಾವರಿ ಸಹಕಾರಿ ಸಂಘಗಳು ಇದ್ದವು, ಅವು ಶುಲ್ಕ ಪಾವತಿ ಮಾಡುತ್ತಿದ್ದವು. ಈಗ ಏನೂ ಇಲ್ಲ. ಯಾರೂ ಕಟ್ಟೋದಿಲ್ಲ. ನಾವೂ ಹಣ ನೀಡದೇ ಇದ್ದರೆ ಇಂಧನ ಇಲಾಖೆಯವರು ವಿದ್ಯುತ್ ಪೂರೈಕೆ ಮಾಡಲು ಸಾಧ್ಯವಾ? ಎಷ್ಟು ದಿನ ಅಂತ ಪಾವತಿ ಮಾಡದೇ ಇರಲು ಸಾಧ್ಯ' ಎಂದು ಪ್ರಶ್ನಿಸಿದರು.

'ಯಾರಾದರೂ ಸರಿ ವಿದ್ಯುತ್ ಶುಲ್ಕ ಪಾವತಿ ಮಾಡಲೇಬೇಕಲ್ಲ. ಅದಕ್ಕಾಗಿ ಕೆರೆಗಳಲ್ಲಿ ಮೀನುಗಾರಿಕೆ ಮಾಡಿಸಿ, ಮೀನುಗಳನ್ನು ಹರಾಜು ಹಾಕಿ ಅದರಿಂದ ಬರುವ ಹಣವನ್ನು ವಿದ್ಯುತ್ ಶುಲ್ಕ ಪಾವತಿಗೆ ಬಳಸಲಾಗುವುದು. ಈ ಕುರಿತು ಪ್ರಸ್ತಾವನೆ ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಶಿವಕುಮಾರ್ ಹೇಳಿದರು.

ಏತ ನೀರಾವರಿ ಯೋಜನೆಗಳ ಮೂಲಕ ಕೆರೆಗಳಿಗೆ ನೀರು ತುಂಬಿಸುವ ಸಂದರ್ಭದಲ್ಲಿ ಒಂದೆರಡು ವರ್ಷ ಬಿಲ್ ಪಾವತಿ ಜವಾಬ್ದಾರಿ ತೆಗೆದುಕೊಳ್ಳಬಹುದು, ನಿರಂತರವಾಗಿ ಹೊರೆ ಹೊತ್ತುಕೊಳ್ಳುವುದು ಕಷ್ಟ. ಕೆರೆ ತುಂಬಿಸುವುದರಿಂದ ಇಲಾಖೆಗೆ ಆದಾಯ ಬರುತ್ತಿಲ್ಲ ಎಂದು ತಿಳಿಸಿದರು.

ಈ ವಿಚಾರವಾಗಿ ಮೀನುಗಾರಿಕೆ ಇಲಾಖೆ ಮತ್ತು ಇಂಧನ ಇಲಾಖೆ ಜತೆ ಮಾತುಕತೆ ನಡೆಸಲಾಗುವುದು ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು. 200 ಯೂನಿಟ್‌ವರೆಗಿನ ಉಚಿತ ವಿದ್ಯುತ್ ಮಾದರಿಯಲ್ಲಿ ಎಲ್ಲ ಏತ ನೀರಾವರಿಗಳಿಗೂ ಉಚಿತ ವಿದ್ಯುತ್ ಪೂರೈಕೆ ಮಾಡಿ ಎಂದು ಬಿಜೆಪಿ ಸದಸ್ಯರು ಶಿವಕುಮಾರ್ ಕಾಲೆಳೆದರು.

ಆಗ ಮಧ್ಯ ಪ್ರವೇಶಿಸಿ ಮಾತನಾಡಿದ ಇಂಧನ ಸಚಿವ ಕೆ.ಜೆ.ಜಾರ್ಜ್, ಏತ ನೀರಾವರಿ ಮತ್ತು ಕೆರೆಗಳನ್ನು ತುಂಬಿಸುವ ಉದ್ದೇಶಕ್ಕೆ ಸೌರ ವಿದ್ಯುತ್ ಪೂರೈಕೆ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದೆ. 15–20 ಮೆಗಾ ವ್ಯಾಟ್ ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸಿ ಅವುಗಳನ್ನು ಫೀಡರ್‌ಗೆ ಸಂಪರ್ಕ ಕಲ್ಪಿಸುವ ಮೂಲಕ ವಿದ್ಯುತ್ ಹೊರೆ ಕಡಿಮೆ ಮಾಡಿಕೊಳ್ಳಬಹುದು. ಇದಕ್ಕಾಗಿ ಒಂದು ನೀತಿ ರೂಪಿಸಲಾಗುವುದು ಎಂದರು.

ನಾನು ಇಲಾಖಾ ಮುಖ್ಯಸ್ಥ, ಶಿಖಾ ಅಲ್ಲ: ಸಿ.ಎಂ ಗರಂ

'ನಾನು ವಾಣಿಜ್ಯ ತೆರಿಗೆ ಇಲಾಖೆ ಮುಖ್ಯಸ್ಥ. ಇಲ್ಲಿ ಉತ್ತರ ಕೊಡಬೇಕಾದವನು ನಾನು, ಶಿಖಾ ಅಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮದೇ ಪಕ್ಷದ ಸದಸ್ಯ ಯಶವಂತರಾಯ ಗೌಡ ವಿಠಲಗೌಡ ಪಾಟೀಲರ ಮೇಲೆ ರೇಗಿದರು.

ಇದಕ್ಕೆ ಕಾರಣವಿಷ್ಟೇ, ಪ್ರಶ್ನೋತ್ತರ ಅವಧಿಯಲ್ಲಿ ಪ್ರಶ್ನೆ ಕೇಳಿದ ಪಾಟೀಲರು, ತಮ್ಮ ಮತ ಕ್ಷೇತ್ರದಲ್ಲಿ (ಇಂಡಿ) ವಾಣಿಜ್ಯ ತೆರಿಗೆ ಇಲಾಖೆಯ ಸಹಾಯಕ ಆಯುಕ್ತರ ಕಚೇರಿ ತೆರೆಯುವ ವಿಚಾರವಾಗಿ ಇಲಾಖೆ ಆಯುಕ್ತೆ ಶಿಖಾ ಅವರ ಜತೆ ಮಾತನಾಡಿದ್ದೇನೆ. ಪರಿಶೀಲಿಸುವುದಾಗಿ ಅವರು ಹೇಳಿದ್ದಾರೆ, ಮಾಡಿಸಿಕೊಡಿ ಎಂದರು.

ಇದರಿಂದ ಕಿರಿಕಿರಿಗೊಳಾದ ಸಿದ್ದರಾಮಯ್ಯ, 'ಶಿಖಾ ಜತೆ ಮಾತನಾಡಬೇಕಾದ ಅಗತ್ಯವಿಲ್ಲ. ನಾನೇ ಇಲಾಖೆ ಮುಖ್ಯಸ್ಥ. ಶಿಖಾ ಅವರು ಹೇಳಿದರೆ ಕೇಳಬೇಕೆಂದಿಲ್ಲ' ಎಂದು ಖಾರವಾಗಿ ಪ್ರತಿಕ್ರಿಯಿಸಿದರು.

'ಸಹಾಯಕ ಆಯುಕ್ತರ ಕಚೇರಿ ಆರಂಭಿಸಲು ಒಂದು ನಿಯಮ ಮಾಡಿಕೊಂಡಿದ್ದೇವೆ. ನೋಂದಾಯಿತ ವಾಣಿಜ್ಯೋದ್ಯಮಿಗಳು ಎಲ್ಲಿ 5,000ಕ್ಕೂ ಹೆಚ್ಚಿದ್ದಾರೋ, ಅಲ್ಲಿ ಸಹಾಯಕ ಆಯುಕ್ತರು ಇರಬೇಕೆಂದಿದೆ. ಇಂಡಿಯಲ್ಲಿ 1,725 ಟ್ರೇಡರ್‌ಗಳು ಮಾತ್ರ ಇದ್ದಾರೆ. ಆದ್ದರಿಂದ ಮಾಡಿಲ್ಲ. ಮುಂದೆ ಪರಿಶೀಲನೆ ಮಾಡುತ್ತೇವೆ' ಎಂದರು.



ಕಲಾಪ ವೀಕ್ಷಣೆ

ಬೆಂಗಳೂರಿನ ವಿಧಾನಸೌಧದಲ್ಲಿ ಮಂಗಳವಾರ ನಡೆದ ವಿಧಾನ ಪರಿಷತ್ ಕಲಾಪವನ್ನುಕುತೂಹಲದಿಂದ ವೀಕ್ಷಣೆ ಮಾಡಿದ ಶಾಲಾ ವಿದ್ಯಾರ್ಥಿಗಳು
–ಪ್ರಜಾವಾಣಿ ಚಿತ್ರ: ರಂಜು ಪಿ

ಮೊದಲು ಯೋಜನಾ ಇಲಾಖೆಗೆ, ಈಗ ಅಭಿವೃದ್ಧಿ ಆಯುಕ್ತರಿಗೆ ಹೊಣೆ

'ಕಲ್ಯಾಣ' ಅಕ್ರಮ: 2ನೇ ಬಾರಿ ತನಿಖೆ!

• ರಾಜೇಶ್ ರೈ ಚಟ್ಲ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಹಾಗೂ ಕಲ್ಯಾಣ ಕರ್ನಾಟಕ ಕೃಷಿ ಹಾಗೂ ಸಾಂಸ್ಕೃತಿಕ ಸಂಘದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶದಂತೆ ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಿದ್ಧಪಡಿಸಿದ್ದ ಬೆನ್ನಲ್ಲೆ, ಮತ್ತೊಂದು ತನಿಖೆ ನಡೆಸುವಂತೆ ಅಭಿವೃದ್ಧಿ ಆಯುಕ್ತರಿಗೆ ಸರ್ಕಾರ ಸೂಚಿಸಿದೆ.

ಮುಖ್ಯಮಂತ್ರಿ ಆದೇಶದ ಅನುಸಾರ ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್, ಇಲಾಖೆಯ ಎಡಿಬಿ ವಿಭಾಗದ ನಿರ್ದೇಶಕ ಡಿ. ಚಂದ್ರಶೇಖರಯ್ಯ ನೇತೃತ್ವದ ತನಿಖಾ ತಂಡ ರಚಿಸಿದ್ದರು. ತಂಡದ ವರದಿ ಆಧರಿಸಿ, ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ನೀಡಿದ್ದ ವರದಿ ಮುಖ್ಯಮಂತ್ರಿ ಕೈಸೇರಿತ್ತು. ಅದನ್ನು ಪರಿಶೀಲಿಸಿದ್ದ ಸಿದ್ದರಾಮಯ್ಯ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಜೂನ್ 30ರಂದು ನಿರ್ದೇಶನ ನೀಡಿದ್ದರು. ಇದಕ್ಕೆ ಅನುಗುಣವಾಗಿ, ದೋಷಾರೋಪ ಪಟ್ಟಿ ಸಿದ್ಧಪಡಿಸಲು ಯೋಜನಾ ಇಲಾಖೆ ಮುಂದಾಗಿತ್ತು.

ಈ ಮಧ್ಯೆ, ಅದೇ ದೂರುಗಳ ಕುರಿತು ಸಮಗ್ರ ತನಿಖೆ ನಡೆಸಿ 15 ದಿನಗಳ ಒಳಗೆ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಮತ್ತೊಮ್ಮೆ ಆದೇಶಿಸಿದ್ದಾರೆ.

2022–23ನೇ ಸಾಲಿನಲ್ಲಿ ಕೆಕೆಆರ್‌ಡಿಬಿಗೆ ನಿಗದಿಪಡಿಸಿದ್ದ ₹3,000 ಕೋಟಿಯಲ್ಲಿ ₹1,500 ಕೋಟಿಗೆ ಮಂಡಳಿಯಿಂದ, ಉಳಿದ ₹1,500 ಕೋಟಿಗೆ ಮುಖ್ಯಮಂತ್ರಿಯ ವಿವೇಚನಾ ಕೋಟಾದಡಿ ಕ್ರಿಯಾಯೋಜನೆ ರೂಪಿಸಲಾಗಿತ್ತು. ಮಂಡಳಿಯಲ್ಲಾದ ಅನುದಾನ ಬಳಕೆ, ಅಧಿಕಾರ ದುರುಪಯೋಗ ಮತ್ತು ಕಳಪೆ ಕಾಮಗಾರಿಗಳ ಕುರಿತು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಯನ್ನು ಕೋರಿದ್ದರು. ಸಾಂಸ್ಕೃತಿಕ ಸಂಘಕ್ಕೆ ಬಿಡುಗಡೆಯಾದ ₹300 ಕೋಟಿ ಅನುದಾನವನ್ನೂ ಅಕ್ರಮವಾಗಿ ವೆಚ್ಚ ಮಾಡಿರುವ ಬಗ್ಗೆ ತನಿಖೆ ನಡೆಸುವಂತೆ ಕೋರಿದ್ದರು.

ಪ್ರಿಯಾಂಕ್ ಮನವಿ ಪರಿಗಣಿಸಿದ್ದ ಮುಖ್ಯಮಂತ್ರಿ, 15 ದಿನಗಳಲ್ಲಿ ವರದಿ ಸಲ್ಲಿಸುವಂತೆ ಮೇ 30ರಂದೇ ಸೂಚಿಸಿದ್ದರು. ತನಿಖಾ ತಂಡದ ವರದಿ ಮುಖ್ಯಮಂತ್ರಿ ಕೈಸೇರಿದ ಬಳಿಕ ಮತ್ತೊಂದು ಮನವಿ ಮಾಡಿದ್ದ ಪ್ರಿಯಾಂಕ್, ಎಲ್ಲ ಆರೋಪಗಳ ಕುರಿತು ಹಿರಿಯ ಅಧಿಕಾರಿಯಿಂದ ನಿಷ್ಪಕ್ಷಪಾತ ತನಿಖೆ ಕೈಗೊಳ್ಳುವಂತೆ ಕೋರಿದ್ದರು. ಹೀಗಾಗಿ, ಮತ್ತೊಂದು ತನಿಖೆ ನಡೆಯಲಿದೆ.

'ಕಲ್ಯಾಣ' ಉತ್ಸವಕ್ಕೆ ₹11.54 ಕೋಟಿ ವೆಚ್ಚ?

'ಕೆಕೆಆರ್‌ಡಿಬಿ ಅನುದಾನಕ್ಕೆ ಸ್ವೀಕೃತವಾದ ಬಡ್ಡಿಯನ್ನು ಆರ್ಥಿಕ ಇಲಾಖೆಯ ಸುತ್ತೋಲೆಯಂತೆ ಜಮೆ ಮಾಡದೆ, ಆ ಹಣದಲ್ಲಿ ₹4 ಕೋಟಿಯನ್ನು 'ಕಲ್ಯಾಣ ಕರ್ನಾಟಕ' ಉತ್ಸವಕ್ಕೆ ಇದೇ ಫೆಬ್ರುವರಿಯಲ್ಲಿ ಮಂಜೂರು ಮಾಡಿಕೊಳ್ಳಲಾಗಿದೆ. ಇದಕ್ಕೆ ಸರ್ಕಾರದಿಂದ ಅನುಮತಿ ಪಡೆದಿಲ್ಲ. ಆದರೆ, ಉತ್ಸವಕ್ಕೆ ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ₹11.54 ಕೋಟಿ ವೆಚ್ಚ ಮಾಡಲಾಗಿದೆ ಎಂದು ಯೋಜನಾ ಇಲಾಖೆ ಸಲ್ಲಿಸಿದ್ದ ತನಿಖಾ ವರದಿಯಲ್ಲಿದೆ' ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಸುಲಭ ಕಲಿಕೆಯ ಶಿಕ್ಷಣ ನೀತಿ ಶೀಘ್ರ ಸಮಿತಿ– ಮಧು ಬಂಗಾರಪ್ಪ

ಬೆಂಗಳೂರು: ಮಕ್ಕಳ ಸುಲಭ ಹಾಗೂ ಪರಿಣಾಮಕಾರಿ ಕಲಿಕೆಗೆ ಪೂರಕವಾಗಿ ಪಠ್ಯಪುಸ್ತಕ ರಚಿಸಬೇಕಿದೆ. ಅದಕ್ಕಾಗಿ ರಾಜ್ಯ ಶಿಕ್ಷಣ ನೀತಿ ಸಿದ್ಧಪಡಿಸಲು ಶೀಘ್ರ ಸಮಿತಿ ರಚಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ಹಿಂದಿನ ಸರ್ಕಾರ ತಿದ್ದುಪಡಿ ಮಾಡಿದ್ದ ಎಲ್ಲ ಪಾಠಗಳನ್ನು ವಾಪಸ್ ಪಡೆದು, ಬರಗೂರು ರಾಮಚಂದ್ರಪ್ಪ ಸಮಿತಿ ರೂಪಿಸಿದ್ದ ಹಳೆಯ ಪಠ್ಯಗಳನ್ನೇ ಪ್ರಸಕ್ತ ಶೈಕ್ಷಣಿಕ ವರ್ಷಕ್ಕೂ ಮುಂದುವರಿಸಲಾಗಿದೆ. ತಿದ್ದುಪಡಿ ಪ್ರತಿಗಳು ಎಲ್ಲ ಶಾಲೆಗಳನ್ನು ತಲುಪಿವೆ. ಮುಂದಿನ ದಿನಗಳಲ್ಲಿ ಮಕ್ಕಳು ಸರಳವಾಗಿ, ಒತ್ತಡಮುಕ್ತವಾಗಿ ಕಲಿಯಲು ಅನುಕೂಲವಾಗುವಂತೆ ಸಂವಿಧಾನದ ಆಶಯಗಳಿಗೆ ಪೂರಕವಾಗಿ ಪಠ್ಯಕ್ರಮ ಚೌಕಟ್ಟು ಸಿದ್ಧಗೊಳಿಸಲಾಗುವುದು, ಬ್ಯಾಗ್ ಹೊರೆ ತಗ್ಗಿಸಲಾಗುವುದು ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜತೆಗೆ ವಾರಕ್ಕೆ ಒಂದು ಮೊಟ್ಟೆಯಂತೆ ವರ್ಷಕ್ಕೆ 46 ಮೊಟ್ಟೆ ನೀಡಲಾಗುತ್ತಿತ್ತು, ಅದನ್ನು 84 ದಿನಗಳಿಗೆ ವಿಸ್ತರಿಸಲಾಗಿದೆ. 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೂ ನೀಡಲಾಗುವುದು. ಅದಕ್ಕಾಗಿ ಬಜೆಟ್‌ನಲ್ಲಿ ₹ 208 ಕೋಟಿ ಮೀಸಲಿಡಲಾಗಿದೆ. ಶೂ, ಸಮವಸ್ತ್ರಗಳನ್ನು ಪೂರೈಸಲಾಗಿದೆ. ಶೌಚಾಲಯ ಸೇರಿದಂತೆ ಶಾಲಾ ನಿರ್ವಹಣೆಗೆ ₹ 150 ಕೋಟಿ ಮೀಸಲಿಡಲಾಗಿದೆ ಎಂದರು.



ಹೆಚ್ಚುವರಿ ಶಿಕ್ಷಕರ ಸ್ಥಳ ನಿಯೋಜನೆ ಪೂರ್ಣಗೊಂಡಿದೆ. ವರ್ಗಾವಣಾ ಪ್ರಕ್ರಿಯೆ ಜುಲೈ ಅಂತ್ಯದ ಒಳಗೆ ಪೂರ್ಣಗೊಳ್ಳಲಿದೆ. ಅನಧಿಕೃತ ಶಾಲೆಗಳ ವಿರುದ್ಧ ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುವುದು ಎಂದು ವಿವರ ನೀಡಿದರು.

'ಹಾಲು ಖರೀದಿ ದರ ಶೀಘ್ರ ಹೆಚ್ಚಳ'

ಬೆಂಗಳೂರು: ಉತ್ಪಾದಕರಿಂದ ಖರೀದಿಸುವ ಹಾಲಿನ ದರ ಹೆಚ್ಚಿಸಲಾಗುವುದು. ಚರ್ಚೆಯ ನಂತರ ಪರಿಷ್ಕೃತ ದರ ನಿಗದಿ ಮಾಡಲಾಗುವುದು ಎಂದು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಹೇಳಿದರು.

ವಿಧಾನಪರಿಷತ್ತಿನಲ್ಲಿ ಜೆಡಿಎಸ್‌ನ ಕೆ.ಎ.ತಿಪ್ಪೇಸ್ವಾಮಿ, ಎಸ್.ಎಲ್. ಭೋಜೇಗೌಡ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, ಪ್ರತಿ ಲೀಟರ್ ಹಾಲಿಗೆ ಒಕ್ಕೂಟಗಳು ₹ 28 ನೀಡಿದರೆ, ಸರ್ಕಾರ ₹ 5 ಪ್ರೋತ್ಸಾಹ ಧನ ನೀಡುತ್ತಿದೆ. ಹಾಲಿನ ಕೊರತೆ ಇರುವ ಭಾಗಗಳಲ್ಲಿ ಖಾಸಗಿಯವರು ರೈತರಿಂದ ಅಧಿಕ ದರ ನೀಡಿ ಹಾಲು ಖರೀದಿಸುತ್ತಿದ್ದಾರೆ. ಹಾಲು ಒಕ್ಕೂಟಗಳು ಹೆಚ್ಚಿನ ದರ ನೀಡಿ ಹಾಲು ಖರೀದಿಸಿದರೆ ಖಾಸಗಿ ಪೈಪೋಟಿ ಎದುರಿಸಬಹುದು. ಅಲ್ಲದೇ, ಬೆಲೆ ಏರಿಕೆಯ ಈ ದಿನಗಳಲ್ಲಿ ಹಸು, ಎಮ್ಮೆ ಸಾಕಲು ಸಾಕಷ್ಟು ಖರ್ಚು ಬರುತ್ತದೆ. ಹಾಗಾಗಿ, ದರ ಹೆಚ್ಚಳ ಖಚಿತ ಎಂದರು.

ಫೆಬ್ರುವರಿಯವರೆಗೆ ಪ್ರೋತ್ಸಾಹ ಧನ ಬಾಕಿ ಇತ್ಯರ್ಥವಾಗಿದೆ. ಪರಿಶಿಷ್ಟ ಜಾತಿ, ಪಂಗಡಕ್ಕೆ ಸೇರಿದ ಹಾಲು ಉತ್ಪಾದಕರಿಗೆ ಏಪ್ರಿಲ್‌ವರೆಗೆ ನೀಡಲಾಗಿದೆ. ಉಳಿದ ಬಾಕಿ ಶೀಘ್ರ ಬಿಡುಗಡೆ ಮಾಡಲಾಗುವುದು ಎಂದರು.

'ಏಪ್ರಿಲ್‌ವರೆಗಿನ ಬಾಕಿ ಪರಿಶಿಷ್ಟರಿಗೆ ಮಾತ್ರ ಕೊಟ್ಟಿದ್ದು ಏಕೆ?. ಉಳಿದವರು ಏನು ಮಾಡಿದ್ದಾರೆ' ಎಂಬ ಬಿಜೆಪಿ ಸದಸ್ಯ ವೈ.ಎ.ನಾರಾಯಣಸ್ವಾಮಿ ಪ್ರಶ್ನೆಗೆ ಕಾಂಗ್ರೆಸ್ ಸದಸ್ಯರು ಕೆರಳಿದರು. ಪದವನ್ನು ಕಡತದಿಂದ ತೆಗೆಯುವಂತೆ ಆಗ್ರಹಿಸಿದರು. ಆದರೆ, ತೆಗೆಯಲು ಸಭಾಪತಿ ಸಮ್ಮತಿ ನೀಡಲಿಲ್ಲ.

'ಬೆಂಗಳೂರು–ಮೈಸೂರು ಹೆದ್ದಾರಿ ವೇಗದ ಚಾಲನೆ ತಡೆಗೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಅಪಘಾತಗಳನ್ನು ತಡೆಗಟ್ಟಲು ಮತ್ತು ವಾಹನಗಳ ವೇಗದ ಚಾಲನೆಗೆ ಕಡಿವಾಣ ಹಾಕಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಹೇಳಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಎಸ್. ಸುರೇಶ್‌ಕುಮಾರ್ ಪ್ರಶ್ನೆಗೆ ಉತ್ತರಿಸಿ ಸರ್ಕಾರ ಕೈಗೊಂಡ ಕ್ರಮಗಳನ್ನು ವಿವರಿಸಿದರು. ಈ ಹೆದ್ದಾರಿಯಲ್ಲಿ ಹೆದ್ದಾರಿ ಗಸ್ತು ವಾಹನಗಳನ್ನು ನಿಯೋಜಿಸಲಾಗಿದೆ. ಯಾವುದೇ ವಾಹನಗಳು ಮಾರ್ಗ ಮಧ್ಯದಲ್ಲಿ ನಿಲ್ಲದಂತೆ ಹೆದ್ದಾರಿ ಗಸ್ತು ವಾಹನಗಳ ಮೂಲಕ ತೆರವುಗೊಳಿಸಲಾಗುತ್ತಿದೆ ಎಂದರು.

ಹೆದ್ದಾರಿಯ ಉದ್ದಕ್ಕೂ ಅಗತ್ಯ ಸ್ಥಳಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ. ವಾಹನಗಳು ಮಾರ್ಗ ಶಿಸ್ತನ್ನು ಅನುಸರಿಸುವಂತೆ ಕ್ರಮಕೈಗೊಳ್ಳಲಾಗುತ್ತಿದೆ. ಪಾದಚಾರಿಗಳು ಅಡ್ಡ ಬರದಂತೆ ತಂತಿಬೇಲಿಗಳನ್ನು ನಿರ್ಮಾಣ ಮಾಡಲಾಗಿದ್ದು, ರಸ್ತೆ ದಾಟುವ ಸಲುವಾಗಿ ಹಳ್ಳಿ ಜನರು ಅಲ್ಲಲ್ಲಿ ತಂತಿ ಬೇಲಿ ಕಿತ್ತುಹಾಕಿದ್ದಾರೆ. ಅದನ್ನು ಸರಿಪಡಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನು ಕೋರಲಾಗಿದೆ ಎಂದು ಪರಮೇಶ್ವ ರ ಹೇಳಿದರು.

ಆರ್‌ಟಿಒಗಳು ಸರಿಯಾಗಿ ಪರೀಕ್ಷೆ ನಡೆಸದೇ ಲೈಸೆನ್ಸ್ ನೀಡುತ್ತಾರೆ. ಟ್ರಾಕ್ಟರ್ ಓಡಿಸಿದವನಿಗೆ ಯಾವುದೇ ಪರೀಕ್ಷೆ ಮಾಡದೇ ಲೈಸೆನ್ಸ್ ನೀಡುತ್ತಾರೆ. ಇವರಿಗೆ ರಸ್ತೆಯಲ್ಲಿ ಬೇರೆ ವಾಹನ ಓಡಿಸಲು ಗೊತ್ತಿರಬೇಕಲ್ಲ ಎಂದೂ ತಿಳಿಸಿದರು.

ಕಳೆದ ನಾಲ್ಕು ತಿಂಗಳಲ್ಲಿ ಈ ರಸ್ತೆಯಲ್ಲಿ ನಡೆದ ಅಪಘಾತದಲ್ಲಿ 100 ಜನ ಸತ್ತಿದ್ದಾರೆ ಎಂದು ಸರ್ಕಾರ ಹೇಳಿದೆ. ನನಗಿರುವ ಮಾಹಿತಿ ಪ್ರಕಾರ 132 ಮಂದಿ ಸತ್ತಿದ್ದಾರೆ. ಅಪಘಾತಗಳನ್ನು ತಡೆಯಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮುಖ್ಯವಾಗಿ ಮಾರ್ಗ ಶಿಸ್ತು, ವೇಗ ನಿಯಂತ್ರಣ ಮತ್ತು ತಿರುವುಗಳಲ್ಲಿ ನಿಧಾನವಾಗಿ ಚಲಾಯಿಸುವ ಬಗ್ಗೆ ಅರಿವು ಮೂಡಿಸುವಂತೆ ಸುರೇಶ್‌ಕುಮಾರ್ ಸಲಹೆ ನೀಡಿದರು.

ಕರಾವಳಿಯಲ್ಲಿ 1 ವಾರ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿಯ ಬಹುತೇಕ ಕಡೆ ಮುಂದಿನ ಒಂದು ವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯ ಬಹುತೇಕ ಕಡೆ, ದಕ್ಷಿಣ ಒಳನಾಡಿನ ಹಲವು ಕಡೆ ಹಾಗೂ ಉತ್ತರ ಒಳನಾಡಿನ ಕೆಲವು ಕಡೆ ಬುಧವಾರವೂ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದ್ದು, ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡಕ್ಕೆ 'ಯೆಲ್ಲೋ ಅಲರ್ಟ್' ಘೋಷಿಸಿದೆ.

ಗುರುವಾರ ಹಾಗೂ ಶುಕ್ರವಾರ ಕರಾವಳಿಯ ಮೂರು ಜಿಲ್ಲೆಗಳ ಜತೆಗೆ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗೂ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ.

ಮುಂದಿನ ಒಂದು ವಾರ ದಕ್ಷಿಣ ಒಳನಾಡಿನ ಹಲವೆಡೆ ಹಾಗೂ ಉತ್ತರ ಒಳನಾಡಿನ ಕೆಲವೆಡೆ ಮಳೆ ಮುಂದುವರಿಯಲಿದೆ. ಇದೇ 16ರ ಬಳಿಕ ದಕ್ಷಿಣ ಹಾಗೂ ಉತ್ತರ ಒಳನಾಡಿನಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಲಿದೆ ಎಂದು ಇಲಾಖೆ ಹೇಳಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಒಂದೆರಡು ಬಾರಿ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	106	8,271	15,986
ಹಾರಂಗಿ	2,859	2,855.91	1,382	1,691
ಕಬಿನಿ	2284.00	2,279.09	4,250	4,000
ಹೇಮಾವತಿ	2,922	2,908.33	2,197	6,725
ಲಿಂಗನಮಕ್ಕಿ	1,819	1,751.9	12,327	1,903
ಸೂಪಾ (ಮೀ)	564	527.28	4,818.48	4,151.42
ಮಾಣಿ	595	573.02	1,283	-
ತುಂಗಭದ್ರಾ	1,633	1,581.82	13,842	265
ಮಲಪ್ರಭಾ	2079.50	2,043.16	00	194
ಘಟಪ್ರಭಾ	2175	2,085.03	6,905	87
ಭದ್ರಾ	186	140.1	823	163
ಆಲಮಟ್ಟಿ (ಮೀ)	519.60	507.290	00	561
ನಾರಾಯಣಪುರ (ಮೀ)	492.25	488.88	3600	00

* ನೆಲಮಟ್ಟದಿಂದ


ಬುಧವಾರ, ಜುಲೈ 12, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 192 | ಪುಟ 14

● www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ತಂತ್ರಜ್ಞಾನ ನಮ್ಮ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯ ಕಾಪಾಡುವಲ್ಲಿ ಬ್ಯಾಕ್ಟೀರಿಯಾಗಳ ಪಾತ್ರ ಹಿರಿದು

ಆಳ-ಅಗಲ: ಬಹುತ್ವ, ಸಾಂಸ್ಕೃತಿಕ ವೈವಿಧ್ಯ ಉಳಿಸಿ

ಮಳೆ: ಹಿಮಾಚಲ ಪ್ರದೇಶ ಹೆಚ್ಚು ಬಾಧಿತ 9

ಪಂಚಾಯಿತಿ ಚುನಾವಣೆ, ಟಿಎಂಸಿ ಮುನ್ನಡೆ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,617 ▲	19,439 ▲	₹60,550 (ಬೆಂಗಳೂರು) ▼	₹73,000 (ಬೆಂಗಳೂರು) ▲	82.41 ▲

‘ನವಿಲಗದ್ದೆ’ಯಲ್ಲಿ ಧರೆಗಿಳಿವ ‘ತಾರೆಗಳ ತೋಟ’

● ಸಿದ್ದು ಆರ್.ಜಿ.ಹಳ್ಳಿ

ಪ್ರಜಾವಾಣಿ ವಿಶೇಷ

ಹಾವೇರಿ: ಆಕಾಶದಲ್ಲಿ ಮಿನುಗುವ ನಕ್ಷತ್ರಗಳನ್ನು ಕುತೂಹಲದಿಂದ ನೋಡುತ್ತ ನಿದ್ದೆಗೆ ಜಾರುತ್ತಿದ್ದ ರೈತನ ಮಗ ನಿರಂಜನಗೌಡ ಖಾನಗೌಡ್ರ, ರಾಜ್ಯದ ಮೊದಲ ‘ಇಂಟರ್ ಸ್ಟೆಲ್ಲರ್ ಆಸ್ಟ್ರೊ ಫಾರ್ಮ್’ ಸ್ಥಾಪಿಸಿ ಬಾಲ್ಯದ ಕನಸನ್ನು ನನಸಾಗಿಸಿಕೊಂಡಿದ್ದಾರೆ.

ಶಿಗ್ಗಾವಿ ತಾಲ್ಲೂಕಿನ ಕುನ್ನೂರು ಗ್ರಾಮದ ನಿರಂಜನಗೌಡ ಅವರು ದುಂಡಶಿ ಅರಣ್ಯ ವಲಯದ ಅಂಚಿನಲ್ಲಿರುವ ಹಳೇ ತರ್ಲಘಟ್ಟ ಸಮೀಪದ ‘ನವಿಲಗದ್ದೆ’ ಗುಡ್ಡದಲ್ಲಿರುವ 60 ಎಕರೆ ಜಮೀನಿನಲ್ಲಿ ಆಸ್ಟ್ರೊ ಫಾರ್ಮ್ ನಿರ್ಮಿಸುವ ಮೂಲಕ ₹40 ಲಕ್ಷ ವೆಚ್ಚದಲ್ಲಿ ‘ಖಗೋಳ ಪ್ರವಾಸೋದ್ಯಮ ಕೇಂದ್ರ’ ತೆರೆದಿದ್ದಾರೆ. ‘ನವಿಲಗದ್ದೆ’ ಗುಡ್ಡವು ಹುಬ್ಬಳ್ಳಿಯಿಂದ 40 ಕಿ.ಮೀ ಮತ್ತು ಮುಂಡಗೋಡದಿಂದ 10 ಕಿ.ಮೀ ಅಂತರದಲ್ಲಿದೆ.



ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಹಳೇ ತರ್ಲಘಟ್ಟ ಸಮೀಪದ ನವಿಲಗದ್ದೆಯ ‘ಆಸ್ಟ್ರೊ ಫಾರ್ಮ್’ನಲ್ಲಿ ದೂರದರ್ಶಕ ಉಪಕರಣಗಳು

ಹೈದರಾಬಾದ್‌ನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಎಂ.ಎಸ್ಸಿ (ಆಸ್ಟ್ರೊಫಿಸಿಕ್ಸ್) ಪೂರ್ಣಗೊಳಿಸಿರುವ ನಿರಂಜನಗೌಡ ಅವರು ನಕ್ಷತ್ರ ವೀಕ್ಷಣೆಗೆ ಬೆಳಕಿನ ಮಾಲಿನ್ಯ ಕಡಿಮೆ ಇರುವ ‘ನವಿಲಗದ್ದೆ’ ಸ್ಥಳ ಆಯ್ಕೆ ಮಾಡಿದ್ದಾರೆ. ಜನರಿಗೆ ತಾರೆಗಳ ಲೋಕ ಪರಿಚಯಿಸಲು 6 ದೂರದರ್ಶಕ ಉಪಕರಣಗಳು, ಮಸೂರಗಳು, ನೇತ್ರಕಗಳನ್ನು (ಐ ಪೀಸ್) ಖರೀದಿಸಿ ‘ಆಸ್ಟ್ರೊ ಫಾರ್ಮ್’ ಆರಂಭಿಸಿದ್ದಾರೆ.

ಬಾರ್ಟಲ್ 2 ವಲಯ: ಅತಿಯಾದ ಕೃತಕ ಬೆಳಕು ಮತ್ತು ಹೊಗೆ, ದೂಳಿನಿಂದ ಉಂಟಾಗುವ ವಾಯು ಮಾಲಿನ್ಯದಿಂದ ‘ಬೆಳಕಿನ ಮಾಲಿನ್ಯ’ ಆಗುತ್ತದೆ. ಬೆಳಕಿನ ಮಾಲಿನ್ಯ ಅಳೆಯುವ ಮಾಪಕ ‘ಬಾರ್ಟಲ್’ ಪ್ರಕಾರ, ಬೆಂಗಳೂರಿನಲ್ಲಿ ಅತಿ ಹೆಚ್ಚು ಬೆಳಕು ಮತ್ತು ವಾಯುಮಾಲಿನ್ಯವಿದ್ದು ಬಾರ್ಟಲ್ 7ರಿಂದ 8ರ ವಲಯದಲ್ಲಿ ಬರುತ್ತದೆ.



ತಾರಾಲಯಗಳಲ್ಲಿ ಬಹುತೇಕ ಸಲ ಕೃತಕ ಮತ್ತು ಸಂಗ್ರಹಿಸಿದ ದೃಶ್ಯಗಳನ್ನು ತೋರಿಸಲಾಗುತ್ತದೆ. ಆದರೆ, ಇಲ್ಲಿನ ದೂರದರ್ಶಕಗಳ ಮೂಲಕ ನೇರವಾಗಿ ಆಕಾಶಕಾಯಗಳನ್ನು ವೀಕ್ಷಿಸಬಹುದು

ನಿರಂಜನಗೌಡ ಖಾನಗೌಡ್ರ

‘ಅರಣ್ಯ ಮತ್ತು ಸ್ವಚ್ಛ ಪರಿಸರವುಳ್ಳ ‘ನವಿಲಗದ್ದೆ’ಯು ಬಾರ್ಟಲ್–2 ವಲಯದಲ್ಲಿ ಬರುತ್ತದೆ. ರಾತ್ರಿ ವೇಳೆ ಆಕಾಶ ವೀಕ್ಷಣೆಗೆ ಪ್ರಶಸ್ತ ಸ್ಥಳ. ದೂರದರ್ಶಕ ಯಂತ್ರಗಳ ಮೂಲಕ ತಾರಾ ಮಂಡಲ, ಗ್ರಹಗಳು, ಚಂದ್ರ, ಕ್ಷುದ್ರಗ್ರಹಗಳು, ಧೂಮಕೇತು, ನಿಹಾರಿಕೆಗಳನ್ನು ಸ್ಪಷ್ಟವಾಗಿ ನೋಡಬಹುದು’ ಎಂದು ನಿರಂಜನಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

ಖಗೋಳ ಪ್ರವಾಸೋದ್ಯಮ: ‘ಕೇಂದ್ರ ಸರ್ಕಾರ ಉತ್ತರಾಖಂಡದಲ್ಲಿ ಮೊದಲ ‘ಆಸ್ಟ್ರೊ ವಿಲೇಜ್’ ಸ್ಥಾಪಿಸಿದೆ. ಉತ್ತರ ಭಾರತದಲ್ಲಿ ಖಾಸಗಿ ಸಂಸ್ಥೆಯವರು ‘ನಕ್ಷತ್ರ ವೀಕ್ಷಣೆ’ (ಸ್ಟಾರ್ ಗೇಜಿಂಗ್) ಕಾರ್ಯಕ್ರಮ ಆಯೋಜಿಸುತ್ತಾರೆ. ರಾಜ್ಯದಲ್ಲಿ ‘ಖಗೋಳ ಪ್ರವಾಸೋದ್ಯಮ’ ದೊಡ್ಡ ಮಟ್ಟದಲ್ಲಿ ಬೆಳೆಯಬೇಕು ಎಂಬುದು ನನ್ನ ಕನಸು. ಇಲ್ಲಿನ ಆಸ್ಟ್ರೊ ಫಾರ್ಮ್‌ನಲ್ಲಿ ಇನ್ನಷ್ಟು ಉನ್ನತ ಮಟ್ಟದ ಟೆಲಿಸ್ಕೋಪ್ ಮತ್ತು ಮೌಂಟ್ಸ್‌ಗಳನ್ನು ಹಂತ–ಹಂತವಾಗಿ ಅಳವಡಿಸುವ ಉದ್ದೇಶವಿದೆ’ ಎಂದು ಹೇಳಿದರು.

ನಕ್ಷತ್ರ ವೀಕ್ಷಣೆ ಜೊತೆ ತಂಗಲು ವ್ಯವಸ್ಥೆ

ಆಸ್ಟ್ರೊ ಫಾರ್ಮ್ ಮೂಲಕ ನಕ್ಷತ್ರ ಮತ್ತು ಖಗೋಳ ವಿಸ್ಮಯಗಳನ್ನು ನೋಡಲು ಅಕ್ಟೋಬರ್‌ನಿಂದ ಮೇ ತಿಂಗಳು ಸೂಕ್ತ ಸಮಯ. ಮಳೆಗಾಲದಲ್ಲಿ ಮೋಡ ಮುಸುಕಿರುತ್ತದೆ. ನಕ್ಷತ್ರಗಳ ವೀಕ್ಷಣೆ ಆಗದು. ಸಂಜೆ 5.30ಕ್ಕೆ ಬರುವ ವೀಕ್ಷಕರಿಗೆ ಲಘು ಉಪಾಹಾರದ ವ್ಯವಸ್ಥೆ ಇರುತ್ತದೆ. ಸಂಜೆ 7ರಿಂದ ನಕ್ಷತ್ರ ವೀಕ್ಷಿಸಬಹುದು. ರಾತ್ರಿ ಗುಡ್ಡದಲ್ಲೇ ತಂಗಲು 40 ಕ್ಯಾಂಪಿಂಗ್ ಟೆಂಟ್ ಮತ್ತು 8 ಶೆಲ್ಟರ್‌ಗಳಿವೆ. ರಾತ್ರಿ ಊಟ ಇರುತ್ತದೆ. ಆರಂಭಿಕ ದಿನಗಳಲ್ಲಿ ಉಚಿತ ಪ್ರವೇಶವಿತ್ತು. ಈಗ ಟಿಕೆಟ್ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದೆ.

ಇ.ಡಿ. ಮುಖ್ಯಸ್ಥ ಮಿಶ್ರಾ ಅವಧಿ ವಿಸ್ತರಣೆ ಅಸಿಂಧು ಎಂದ ನ್ಯಾಯಪೀಠ

ಕೇಂದ್ರಕ್ಕೆ ‘ಸುಪ್ರೀಂ’ ತಪರಾಕಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾರಿ ನಿರ್ದೇಶನಾಲಯದ (ಇ.ಡಿ) ಮುಖ್ಯಸ್ಥ ಸಂಜಯ್ ಕುಮಾರ್ ಮಿಶ್ರಾ ಅವರ ಅವಧಿಯನ್ನು ತಲಾ ಒಂದು ವರ್ಷದ ಅವಧಿಗೆ ಎರಡು ಬಾರಿ ವಿಸ್ತರಿಸಿರುವುದು ಕಾನೂನು ಬಾಹಿರ ಹಾಗೂ ಅಸಿಂಧು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ತೀರ್ಪು ನೀಡಿದೆ.



ಮಿಶ್ರಾ

ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಮಿಶ್ರಾ ಅವರು ಈ ತಿಂಗಳ ಅಂತ್ಯದವರೆಗೆ ಈ ಹುದ್ದೆಯಲ್ಲಿ ಮುಂದುವರಿಯಬಹುದು. ಆಗಸ್ಟ್ 1ರೊಳಗೆ ನಿರ್ದೇಶನಾಲಯಕ್ಕೆ ಹೊಸ ಮುಖ್ಯಸ್ಥರನ್ನು ನೇಮಿಸಬೇಕು ಎಂದು ನ್ಯಾಯಪೀಠವು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಮಿಶ್ರಾ ಅವರ ಅಧಿಕಾರದ ಅವಧಿ ಈ ವರ್ಷದ ನವೆಂಬರ್ 18ರ ವರೆಗೆ ಇತ್ತು. ಸುಪ್ರೀಂ ಕೋರ್ಟ್ ತೀರ್ಪಿನಿಂದ ಕೇಂದ್ರ ಸರ್ಕಾರಕ್ಕೆ ಮುಖಭಂಗವಾಗಿದೆ.


ಆದರೆ, ಕೇಂದ್ರ ಜಾಗೃತ ಆಯೋಗ (ತಿದ್ದುಪಡಿ) ಕಾಯ್ದೆ 2021 ಹಾಗೂ ದೆಹಲಿ ವಿಶೇಷ ಪೊಲೀಸ್ ಸ್ಥಾಪನೆ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ವಿಕ್ರಮನಾಥ್ ಹಾಗೂ ಸಂಜಯ್ ಕರೋಲ್ ಅವರನ್ನು ಒಳಗೊಂಡ ಪೀಠವು ತಿರಸ್ಕರಿಸಿದೆ. ಈ ಕಾಯ್ದೆಯು ಜಾರಿ ನಿರ್ದೇಶನಾಲಯ ಹಾಗೂ ಸಿಬಿಐ ಮುಖ್ಯಸ್ಥರ ಅವಧಿಯನ್ನು ಐದು ವರ್ಷಗಳವರೆಗೆ ವಿಸ್ತರಿಸಲು ಅವಕಾಶ ಮಾಡಿಕೊಟ್ಟಿದೆ. ಶಾಸನಗಳಿಗೆ ತಿದ್ದುಪಡಿ ತರಲು ಶಾಸಕಾಂಗವು ಸಮರ್ಥವಾಗಿದೆ ಎಂದು ನ್ಯಾಯಪೀಠ ಹೇಳಿದೆ. ಈ ಕ್ರಮದಲ್ಲಿ ಯಾವುದೇ ಅನಿಯಂತ್ರಿತತೆ ಹಾಗೂ ಮೂಲಭೂತ ಹಕ್ಕುಗಳ ಉಲ್ಲಂಘನೆಯೂ ಕಂಡುಬಂದಿಲ್ಲ ಎಂದೂ 103 ಪುಟಗಳ ತೀರ್ಪಿನಲ್ಲಿ ಪೀಠ ಹೇಳಿದೆ.

ಮಿಶ್ರಾ ಅವರ ಅವಧಿಯನ್ನು ಒಂದು ವರ್ಷ ವಿಸ್ತರಿಸಿ 2021ರ ನವೆಂಬರ್ 17ರಂದು ಆದೇಶ ಹೊರಡಿಸಲಾಗಿತ್ತು. ಇದನ್ನು ನ್ಯಾಯಾಲಯ ಎತ್ತಿ ಹಿಡಿದಿತ್ತು. ಆದರೆ, ನಿವೃತ್ತಿ ನಂತರ ಯಾವುದೇ ಅಧಿಕಾರಿಯ ಸೇವೆಯನ್ನು ವಿಸ್ತರಿಸಲು ಅಪರೂಪದ ಪ್ರಕರಣಗಳಲ್ಲಿ ಮಾತ್ರ ಅವಕಾಶ ಇದೆ ಎಂದು ಸ್ಪಷ್ಟಪಡಿಸಿತ್ತು. ನಂತರ 2022ರ ನವೆಂಬರ್ 17 ರಂದು ಮಿಶ್ರಾ ಅವರ ಅವಧಿಯನ್ನು ಮತ್ತೊಮ್ಮೆ ವಿಸ್ತರಿಸಿ ಸರ್ಕಾರ ಆದೇಶ ಹೊರಡಿಸಿತ್ತು. ಈ ಆದೇಶ ಕಾನೂನುಬಾಹಿರ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಕಾಯ್ದೆಯ ತಿದ್ದುಪಡಿಗಳು ಸರ್ಕಾರಕ್ಕೆ ಇ.ಡಿ. ಮತ್ತು ಸಿಬಿಐ ನಿರ್ದೇಶಕರ ಅಧಿಕಾರವನ್ನು ವಿಸ್ತರಿಸಲು ಅನಿಯಂತ್ರಿತ ಅಧಿಕಾರ ನೀಡುತ್ತದೆ. ಆದರೆ, ಇದನ್ನು ಕೇವಲ ಸರ್ಕಾರದ ಇಚ್ಛೆಯಂತೆ ಮಾಡುವುದು ಸಾಧ್ಯವಿಲ್ಲ. ಈ ನಿರ್ಧಾರವನ್ನು ಈ ಅಧಿಕಾರಿಗಳ ನೇಮಕಕ್ಕೆ ರಚನೆಯಾಗಿರುವ ಸಮಿತಿಗಳ ಶಿಫಾರಸುಗಳ ಆಧಾರದ ಮೇಲೆ ಮಾತ್ರ ಮಾಡಬಹುದು. ಅದೂ ಕೂಡಾ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರಬೇಕು ಹಾಗೂ ಕಾರಣಗಳು ಲಿಖಿತವಾಗಿ ದಾಖಲಾಗಿರಬೇಕು ಎಂದು ನ್ಯಾಯಪೀಠ ಹೇಳಿದೆ.

ವಿಚಾರಣೆಯ ವೇಳೆ, ಕೇಂದ್ರ ಸರ್ಕಾರವು ಫೈನಾನ್ಶಿಯಲ್ ಆ್ಯಕ್ಷನ್ ಟಾಸ್ಕ್‌ಫೋರ್ಸ್ (ಎಫ್‌ಎಟಿಎಫ್) ಈ ವರ್ಷದ ಹಣಕಾಸಿನ ಪರಿಶೀಲನೆ ನಡೆಸುತ್ತಿರುವ ಬಗ್ಗೆ ನ್ಯಾಯಪೀಠ ಗಮನ ಸೆಳೆಯಿತು. ಇದನ್ನು ಪರಿಗಣಿಸಿದ ನ್ಯಾಯಪೀಠ, ಇ.ಡಿ.ಯ ಹೊಸ ನಿರ್ದೇಶಕರ ನೇಮಕಾತಿ ಪ್ರಕ್ರಿಯೆಗೆ ಸ್ವಲ್ಪ ಸಮಯ ಬೇಕಾಗುವುದರಿಂದ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿ ಇರಿಸಿಕೊಂಡು ಜುಲೈ 31ರ ವರೆಗೆ ಮಿಶ್ರಾ ಅವರಿಗೆ ತಮ್ಮ ಹುದ್ದೆಯಲ್ಲಿ ಮುಂದುವರಿಯಲು ಅನುಮತಿ ನೀಡಲಾಗುವುದು ಎಂದು ತಿಳಿಸಿತು.

ಇ.ಡಿ. ಮುಖ್ಯಸ್ಥರ ಅಧಿಕಾರ ಅವಧಿಯನ್ನು ವಿಸ್ತರಿಸಿರುವುದನ್ನು ಪ್ರಶ್ನಿಸಿ ಕಾಂಗ್ರೆಸ್ ಮುಖಂಡರಾದ ಜಯಾ ಠಾಕೂರ್, ರಣದೀಪ್ ಸಿಂಗ್ ಸುರ್ಜೆವಾಲಾ, ಟಿಎಂಸಿ ಮುಖಂಡರಾದ ಸಾಕೇತ್ ಗೋಖಲೆ, ಮಹುವಾ ಮೊಯಿತ್ರಾ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಪೀಠ ಈ ತೀರ್ಪು ನೀಡಿದೆ.



ಸುಪ್ರೀಂ ಕೋರ್ಟ್‌ನ ನಿರ್ಧಾರಕ್ಕೆ ಸಂತಸ ಪಡುತ್ತಿರುವವರು ಒಂದು ರೀತಿಯಲ್ಲಿ ಭ್ರಮೆಯಲ್ಲಿ ಇದ್ದಾರೆ. ಏಕೆಂದರೆ, ಸಂಸತ್ ಇತ್ತೀಚೆಗೆ ಜಾರಿಗೊಳಿಸಿದ್ದ ಸಿವಿಸಿ ಕಾಯ್ದೆಯ ತಿದ್ದುಪಡಿಯನ್ನು ನ್ಯಾಯಾಲಯ ಎತ್ತಿ ಹಿಡಿದಿದೆ. ಭ್ರಷ್ಟರು ಮತ್ತು ತಪ್ಪು ಕೆಲಸ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವ ನಿರ್ದೇಶನಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಯಾವುದೇ ವ್ಯತ್ಯಾಸ ಆಗಿಲ್ಲ. ಇ.ಡಿ. ಒಂದು ಸಂಸ್ಥೆಯಾಗಿದ್ದು, ಅದು ಯಾವುದೇ ಒಬ್ಬ ವ್ಯಕ್ತಿಗೆ ಸೀಮಿತವಾಗಿಲ್ಲ ಮತ್ತು ತನ್ನ ಮೂಲ ಉದ್ದೇಶದತ್ತ ಗಮನ ಕೇಂದ್ರೀಕರಿಸಿದೆ.

ಅಮಿತ್ ಶಾ, ಕೇಂದ್ರ ಗೃಹ ಸಚಿವ



ಇದು ನ್ಯಾಯದ ಗೆಲುವು. ಇ.ಡಿ.ಯನ್ನು ರಾಜಕೀಯ ಉದ್ದೇಶಕ್ಕೆ ಕೇಂದ್ರ ಸರ್ಕಾರ ಬಳಸಿಕೊಳ್ಳುತ್ತಿದೆ ಎಂದು ನಮ್ಮ ಪಕ್ಷ ಮೊದಲಿನಿಂದಲೂ ಆರೋಪಿಸುತ್ತಿತ್ತು. ಸುಪ್ರೀಂ ಕೋರ್ಟ್ ತೀರ್ಪಿನಿಂದ ಅದು ಈಗ ಸ್ಪಷ್ಟವಾಗಿದೆ. ಮಿಶ್ರಾ ಅವರ ಅವಧಿ ಮೂರನೇ ಬಾರಿಗೆ ವಿಸ್ತರಣೆಯಾದ ಬಳಿಕ (2021ರ ನವೆಂಬರ್ 17) ನಿರ್ದೇಶನಾಲಯವು ಕೈಗೊಂಡ ಎಲ್ಲ ಕ್ರಮಗಳ ಪರಿಶೀಲನೆಗೆ ಸ್ವತಂತ್ರ ತನಿಖೆ ನಡೆಸಬೇಕು

ರಣದೀಪ್ ಸಿಂಗ್ ಸುರ್ಜೆವಾಲಾ, ಪ್ರಧಾನ ಕಾರ್ಯದರ್ಶಿ, ಕಾಂಗ್ರೆಸ್

ಆನ್‌ಲೈನ್ ಆಟಕ್ಕೆ 28% ತೆರಿಗೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯು ಆನ್‌ಲೈನ್ ಆಟಗಳನ್ನು ಒದಗಿಸುವ ಕಂಪನಿಗಳಿಗೆ, ಕುದುರೆ ರೇಸ್‌ಗೆ ಹಾಗೂ ಕ್ಯಾಸಿನೊಗೆ ಅವುಗಳ ಒಟ್ಟು ವಹಿವಾಟಿನ ಮೊತ್ತದ ಮೇಲೆ ಶೇಕಡ 28ರಷ್ಟು ತೆರಿಗೆ ವಿಧಿಸಲು ಮಂಗಳವಾರ ತೀರ್ಮಾನಿಸಿದೆ.



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೇತೃತ್ವದ ಸಮಿತಿಯು ಸಚಿವರ ಗುಂಪಿನ ಶಿಫಾರಸು ಆಧರಿಸಿ, ಈ ಪ್ರಮಾಣದ ತೆರಿಗೆ ವಿಧಿಸಲು ತೀರ್ಮಾನ ಕೈಗೊಂಡಿದೆ. ಜಿಎಸ್‌ಟಿ ಮಂಡಳಿಯಲ್ಲಿ ಎಲ್ಲ ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳು ಇರುತ್ತಾರೆ.

ಸಿನಿಮಾ ಮಂದಿರಗಳಲ್ಲಿ ಮಾರಾಟ ಮಾಡುವ ಆಹಾರ ಮತ್ತು ಪಾನೀಯಗಳಿಗೆ ಶೇಕಡ 5ರಷ್ಟು ತೆರಿಗೆ ನಿಗದಿ ಮಾಡಲು ಮಂಡಳಿ ನಿರ್ಧರಿಸಿದೆ. ಇದು ರೆಸ್ಟೋರೆಂಟ್‌ಗಳಲ್ಲಿ ವಿಧಿಸುವ ತೆರಿಗೆ ಪ್ರಮಾಣಕ್ಕೆ ಸಮ. ಸಿನಿಮಾ ಮಂದಿರಗಳಲ್ಲಿ ಈಗ ಶೇ 18ರಷ್ಟು ತೆರಿಗೆ ವಿಧಿಸಲಾಗುತ್ತಿದೆ.

8ನೇ ಪುಟ ನೋಡಿ

ಎಸ್‌ಯುವಿ ವ್ಯಾಖ್ಯಾನದಲ್ಲಿ ಬದಲಾವಣೆ

ಸೆಸ್ ವಿಧಿಸಲು ಈಗಿರುವ ವ್ಯಾಖ್ಯಾನದ ಪ್ರಕಾರ ವಾಹನವೊಂದು ‘ಎಸ್‌ಯುವಿ’ ಅನ್ನಿಸಿಕೊಳ್ಳಬೇಕು ಎಂದಾದರೆ ನಾಲ್ಕು ಮಾನದಂಡಗಳನ್ನು ಅದು ಪೂರೈಸಬೇಕು. ಆ ವಾಹನವು ಎಸ್‌ಯುವಿ ಎಂಬ ಜನಪ್ರಿಯತೆ ಪಡೆದಿರಬೇಕು, ಅದು 4 ಮೀಟರ್ ಅಥವಾ ಅದಕ್ಕಿಂತ ಹೆಚ್ಚು ಉದ್ದವಾಗಿರಬೇಕು, ಎಂಜಿನ್ ಸಾಮರ್ಥ್ಯವು 1,500 ಸಿಸಿ ಅಥವಾ ಅದಕ್ಕಿಂತ ಜಾಸ್ತಿ ಇರಬೇಕು ಮತ್ತು ವಾಹನವು ಖಾಲಿ ಇದ್ದಾಗ ಅದರ ಗ್ರೌಂಡ್ ಕ್ಲಿಯರೆನ್ಸ್ 170 ಎಂಎಂ ಇರಬೇಕು. ಇನ್ನು ಮುಂದೆ ಎಸ್‌ಯುವಿ ವ್ಯಾಖ್ಯಾನವು ವಾಹನದ ಉದ್ದ (4 ಮೀಟರ್ ಅಥವಾ ಅದಕ್ಕಿಂತ ಹೆಚ್ಚು), ಎಂಜಿನ್ ಸಾಮರ್ಥ್ಯ (1,500 ಸಿಸಿ ಮತ್ತು ಅದಕ್ಕಿಂತ ಹೆಚ್ಚು) ಹಾಗೂ ಗ್ರೌಂಡ್ ಕ್ಲಿಯರೆನ್ಸ್ (ವಾಹನವು ಖಾಲಿ ಇದ್ದಾಗ 170 ಎಂಎಂ ಅಥವಾ ಅದಕ್ಕಿಂತ ಹೆಚ್ಚು) ಮಾನದಂಡಗಳನ್ನು ಮಾತ್ರ ಒಳಗೊಳ್ಳಲಿದೆ ಎಂದು ನಿರ್ಮಲಾ ಸೀತಾರಾಮನ್ ಅವರು ತಿಳಿಸಿದರು.

ಮುಖ್ಯ ಆರೋಪಿ ಫೆಲಿಕ್ಸ್ ಕಂಪನಿಯ ಮಾಜಿ ಉದ್ಯೋಗಿ, ‘ಟಿಕ್‌ಟಾಕ್ ಸ್ಟಾರ್’

‘ಏರೋನಿಕ್ಸ್’ ಎಂ.ಡಿ, ಸಿಇಒ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರೋನಿಕ್ಸ್ ಇಂಟರ್‌ನೆಟ್ ಕಂಪನಿ (ಏರೋನಿಕ್ಸ್ ಮೀಡಿಯಾ ಸಂಸ್ಥೆ) ವ್ಯವಸ್ಥಾಪಕ ನಿರ್ದೇಶಕ, ಕೆ.ಆರ್.ಪುರದ ನಿವಾಸಿ ಫಣೀಂದ್ರ ಸುಬ್ರಹ್ಮಣ್ಯ ಹಾಗೂ ಸಿಇಒ ವಿನುಕುಮಾರ್ ಅವರನ್ನು ಮಂಗಳವಾರ ತಲ್ವಾರ್‌ನಿಂದ ಕೊಚ್ಚಿ ಕೊಲೆ ಮಾಡಲಾಗಿದೆ.

ಅಮೃತಹಳ್ಳಿಯ ಪಂಪ ಬಡಾವಣೆಯ 6ನೇ ಅಡ್ಡ ರಸ್ತೆಯಲ್ಲಿರುವ ಸಂಸ್ಥೆಯ ಕಚೇರಿಗೆ ಸಂಜೆ 4ರ ವೇಳೆ ನುಗ್ಗಿದ ಮೂವರು ದುಷ್ಕರ್ಮಿಗಳು ತಲ್ವಾರ್‌ನಿಂದ ಕೊಚ್ಚಿ ಕೊಲೆ ಮಾಡಿದ್ದಾರೆ. ಕಂಪನಿಯ ಮಾಜಿ ಉದ್ಯೋಗಿ ಫೆಲಿಕ್ಸ್ ಸೇರಿದಂತೆ ಮೂವರು ಕೃತ್ಯ ಎಸಗಿ ಪರಾರಿಯಾಗಿದ್ದಾರೆ ಎಂದು ಪೊಲೀಸ್ ಮೂಲಗಳು ಹೇಳಿವೆ. ಫೆಲಿಕ್ಸ್ ಟಿಕ್‌ಟಾಕ್ ಸ್ಟಾರ್ ಜೋಕರ್ ಆಗಿದ್ದಾನೆ.



ವಿನುಕುಮಾರ್ ಫಣೀಂದ್ರ ಫೆಲಿಕ್ಸ್

ಕಳೆದ ನವೆಂಬರ್ 22ರಂದು ಫಣೀಂದ್ರ ಅವರು ಕಂಪನಿ ಸ್ಥಾಪಿಸಿದ್ದರು. ವಿನುಕುಮಾರ್ ಪಾಲುದಾರರು. ಮಂಗಳವಾರ ಸಂಜೆ ಕಚೇರಿಯಲ್ಲಿ 10 ಮಂದಿ ಕೆಲಸ ಮಾಡುತ್ತಿದ್ದರು. ಫಣೀಂದ್ರ ಕ್ಯಾಬಿನ್‌ನಲ್ಲಿದ್ದರು. ಆಗ ಕಚೇರಿಗೆ ಬಂದ ಆರೋಪಿಗಳು ಫಣೀಂದ್ರ ಜೊತೆಗೆ 20 ನಿಮಿಷಗಳ ಕಾಲ ಚರ್ಚಿಸಿದ್ದಾರೆ. ಅದಾದ ಮೇಲೆ ಅವರ ಮೇಲೆ ಏಕಾಏಕಿ ತಲ್ವಾರ್‌ನಿಂದ ಹಲ್ಲೆ ನಡೆಸಿದ್ದಾರೆ. ಅವರನ್ನು ಬಿಡಿಸಲು ಮುಂದಾದ ವಿನುಕುಮಾರ್ ಮೇಲೂ ತಲ್ವಾರ್ ಬೀಸಿದ್ದಾರೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಇಬ್ಬರನ್ನು ಸಿಬ್ಬಂದಿಯೇ ಆಸ್ಪತ್ರೆಗೆ ಸಾಗಿಸಿದ್ದರು. ಅಷ್ಟರಲ್ಲಿ ಅವರು ಮೃತಪಟ್ಟಿದ್ದರು ಎಂದು ಪೊಲೀಸರು ಹೇಳಿದರು.

‘ಕೃತ್ಯ ಎಸಗಿ ಆರೋಪಿಗಳು ಕಚೇರಿಯ ಹಿಂದಿನ ಬಾಗಿಲಿಂದ ಓಡಿ ಹೋಗಿದ್ದಾರೆ. ಇಡೀ ಘಟನೆಯು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇಬ್ಬರು ಆರೋಪಿಗಳ ಸುಳಿವು ಪತ್ತೆಯಾಗಿದೆ. ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

3B ಪುಟ ನೋಡಿ

ವಿಧಾನಸಭೆಯಲ್ಲಿ ಗದ್ದಲ, ಬಿಜೆಪಿ ಸದಸ್ಯರಿಂದ ಧರಣಿ ● ಕಲಾಪಕ್ಕೆ ಅಡ್ಡಿ

ವರ್ಗ ‘ವ್ಯಾಪಾರ’: ಮಾತಿಗೆ ಕಿಚ್ಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೀವು ಹೇಳಿದಿರಿ ಅಂತ ಆಫೀಸರ್ ಬದಲಾವಣೆ ಮಾಡಲ್ಲ, ಏನ್ ಮಾಡ್ತೀರಿ ಮಾಡ್ಕೊಳ್ಳಿ’ ... ಹೀಗೆಂದು ಅಬ್ಬರಿಸಿದ್ದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್.

‘ನಿನ್ನ ನಾಲಿಗೆ ಮೇಲೆ ಹಿಡಿತ ಇರಲಿ. ನನ್ನಂತಹವನು ಆಗಿದ್ದರೆ ನಿನ್ನ ಪಕ್ಷದಿಂದ 24 ಗಂಟೆಯಲ್ಲಿ ಉಚ್ಚಾಟನೆ ಮಾಡುತ್ತಿದ್ದೆ. ಏಯ್ ಕುತ್ಕೊಳಯ್ಯ...’ ಎಂದು ಏಕವಚನದಲ್ಲಿ ಗದರಿದ್ದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್.

ಇವರಿಬ್ಬರು ಮಾತಿನ ಪ್ರಹಾರ ನಡೆಸಿದ್ದು, ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ. ವಿಧಾನಸಭೆಯಲ್ಲಿ ಮಂಗಳವಾರ ಶೂನ್ಯವೇಳೆಯಲ್ಲಿ ಯತ್ನಾಳ ಅವರು, ವಿಜಯಪುರ ಮಹಾನಗರ ಪಾಲಿಕೆ ಆಯುಕ್ತ ಹುದ್ದೆಗೆ ಅರ್ಹತೆ ಇಲ್ಲದವರನ್ನು ನೇಮಿಸಲಾಗಿದೆ. ವರ್ಗಾವಣೆಯಲ್ಲಿ ವ್ಯಾಪಾರ ನಡೆದಿದೆ ಎಂದು ಹೇಳಿದ್ದು, ಭಾರಿ ಗದ್ದಲಕ್ಕೆ ಕಾರಣವಾಯಿತು. ಬೈರತಿ ಸುರೇಶ್ ಮತ್ತು ಡಿ.ಕೆ.ಶಿವಕುಮಾರ್ ಅವರ ಮಾತುಗಳಿಂದ ಕೆರಳಿದ ಬಿಜೆಪಿ ಸದಸ್ಯರು ಧರಣಿಗಿಳಿದು ಸರ್ಕಾರ ವಿರುದ್ಧ ಘೋಷಣೆ ಕೂಗಿದರು. ಎರಡು ಬಾರಿ ಕಲಾಪ ಮುಂದೂಡಿಕೆಯಾಯಿತು.



ಡಿ.ಕೆ.ಶಿವಕುಮಾರ್ ಅವರು ಬಿಜೆಪಿ ಶಾಸಕರ ವಿರುದ್ಧ ವಾಕ್ಸಮರ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಇದ್ದರು

ಯತ್ನಾಳ ಹೇಳಿದ್ದೇನು?: ‘ಹೊಸ ಸರ್ಕಾರ ಬಂದಾಗ ವರ್ಗಾವಣೆಗಳು ಸಹಜ. ಆದರೆ, ಐಎಎಸ್, ಕೆಎಎಸ್ ಕೇಡರ್ ಬಿಟ್ಟು ಕೆಳಗಿನ ಹಂತದ ಅಧಿಕಾರಿಯೊಬ್ಬರನ್ನು ಆಯುಕ್ತರನ್ನಾಗಿ ನೇಮಿಸಲಾಗಿದೆ. ಇದು ನಿಯಮಕ್ಕೆ ವಿರುದ್ಧ. ನೀವು ಯಾರನ್ನು ಬೇಕಾದರೂ, ನಿಮ್ಮ ಸಮುದಾಯದವರನ್ನೇ ಹಾಕಿ. ಆದರೆ, ಅರ್ಹರನ್ನು ಹಾಕಿ. ಅರ್ಹತೆ ಇಲ್ಲದ ಕಾರಕೂನನನ್ನು ಹಾಕಿದ್ದೀರಿ’ ಎಂದು ಯತ್ನಾಳ ಟೀಕಿಸಿದರು.

ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡ ಬೈರತಿ ಸುರೇಶ್, ‘ನಾವು ಪೌರಸೇವೆ ಅಧಿಕಾರಿಯನ್ನೇ ಹಾಕಿದ್ದೇವೆ. ಅಧಿಕಾರಿಗಳನ್ನು ನೇಮಿಸುವಾಗ ಜಾತಿ ನೋಡಿಕೊಂಡು ಹಾಕುವುದಿಲ್ಲ’ ಎಂದು ಹೇಳಿದರು.

8ನೇ ಪುಟ ನೋಡಿ

ಟೊಮೆಟೊಗೆ ದಾಖಲೆ ಬೆಲೆ

ಪ್ರಜಾವಾಣಿ ವಾರ್ತೆ

ಕೋಲಾರ: ಏಷ್ಯಾದ ಎರಡನೇ ಅತಿ ದೊಡ್ಡ ಟೊಮೆಟೊ ಮಾರುಕಟ್ಟೆ ಕೋಲಾರ ಎಪಿಎಂಸಿಯಲ್ಲಿ ಮಂಗಳವಾರ ಟೊಮೆಟೊ ದರ ಸಾರ್ವಕಾಲಿಕ ದಾಖಲೆ ಕಂಡಿದೆ.

ಚಿಂತಾಮಣಿ ತಾಲ್ಲೂಕಿನ ವೈಜಕೂರು ಗ್ರಾಮದ ರೈತ ಅಶ್ವಂತ್, ಕೆ.ಆರ್.ಸುಧಾಕರಗೌಡ ಅವರ ಮಂಡಿಗೆ ತಂದಿದ್ದ 15 ಕೆ.ಜಿ ಟೊಮೆಟೊ ಬಾಕ್ಸ್ ಹರಾಜಿನಲ್ಲಿ ₹2,200ಕ್ಕೆ ಮಾರಾಟವಾಗಿದೆ. ಅವರು 36 ಬಾಕ್ಸ್ ತಂದಿದ್ದರು. ಅವರಿಗೆ ಒಂದು ಕೆ.ಜಿಗೆ ಸರಾಸರಿ ₹147 ಲಭಿಸಿದಂತಾಗಿದೆ.

ದರ ಏರಿಕೆ ಇನ್ನೂ 20 ದಿನ ಇದೇ ರೀತಿ ಮುಂದುವರಿಯಲಿದೆ ಎಂದು ಎಪಿಎಂಸಿ ಕಾರ್ಯದರ್ಶಿ ವಿಜಯಲಕ್ಷ್ಮಿ ತಿಳಿಸಿದರು.

ಒಳ ಪುಟ

ವೇಣುಗೋಪಾಲ್ ಹತ್ಯೆ: 6 ಮಂದಿ ಸೆರೆ 5

ಚಿನಕುರಳಿ

ಪ್ರಕಾಶ್ ಶೆಟ್ಟಿ



15 ವರ್ಷಗಳಲ್ಲಿ ಬಡತನದಿಂದ ಹೊರಬಂದ 41 ಕೋಟಿ ಮಂದಿ

ಬಡತನ ನಿವಾರಣೆ: ಭಾರತ ಮುಂದು

ವಿಶ್ವಸಂಸ್ಥೆ (ಪಿಟಿಐ): ಭಾರತದಲ್ಲಿ 15 ವರ್ಷಗಳ ಅವಧಿಯಲ್ಲಿ 41.5 ಕೋಟಿ ಮಂದಿ ಬಡತನದಿಂದ ಹೊರಬಂದಿದ್ದಾರೆ ಎಂದು ವಿಶ್ವಸಂಸ್ಥೆ ಮಂಗಳವಾರ ಹೇಳಿದೆ. ಅಲ್ಲದೆ ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತದ ಬಹುದೊಡ್ಡ ಸಾಧನೆ ಇದು ಎಂದು ಬಣ್ಣಿಸಿದೆ.

ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್ (ಯುಎನ್‌ಡಿಪಿ) ಮತ್ತು ‘ಆಕ್ಸ್‌ಫರ್ಡ್ ಪಾವರ್ಟಿ ಆ್ಯಂಡ್ ಹ್ಯೂಮನ್ ಡೆವಲಪ್‌ಮೆಂಟ್ ಇನಿಷಿಯೇಟಿವ್ ಜಂಟಿಯಾಗಿ ಸಿದ್ಧಪಡಿಸಿರುವ ‘ಜಾಗತಿಕ ಬಹುಆಯಾಮ ಬಡತನ ಸೂಚ್ಯಂಕ (ಎಂಪಿಐ)’ ವರದಿಯನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಬಿಡುಗಡೆ ಮಾಡಲಾಗಿದೆ.

ಭಾರತ ಸೇರಿದಂತೆ 25 ದೇಶಗಳು ಜಾಗತಿಕ ಎಂಪಿಐ ಸೂಚ್ಯಂಕವನ್ನು 15 ವರ್ಷಗಳಲ್ಲಿ ಯಶಸ್ವಿಯಾಗಿ ಅರ್ಧದಷ್ಟು ಇಳಿಸಿವೆ. ತ್ವರಿತವಾಗಿ ಅಭಿವೃದ್ಧಿ ಸಾಧಿಸಬಹುದು ಎಂಬುದಕ್ಕೆ ಇದು ಸಾಕ್ಷಿಯಾಗಿದೆ ಎಂದು ವಿಶ್ವಸಂಸ್ಥೆ ಅಭಿಪ್ರಾಯಪಟ್ಟಿದೆ. ಚೀನಾ, ಕಾಂಬೋಡಿಯಾ, ಕಾಂಗೋ, ಇಂಡೋನೇಷ್ಯಾ, ಮೊರಾಕೊ, ಸೆರ್ಬಿಯಾ ಮತ್ತು ವಿಯೆಟ್ನಾಂ ಸಹ 25 ದೇಶಗಳ ಪಟ್ಟಿಯಲ್ಲಿವೆ.

ಆದರೆ, ಕೋವಿಡ್ ಸಾಂಕ್ರಾಮಿಕ ನಂತರದ ದತ್ತಾಂಶದ ಕೊರತೆಯು ಬಡತನದ ಮೇಲೆ ಸಾಂಕ್ರಾಮಿಕವು ಉಂಟುಮಾಡಿದ ಪರಿಣಾಮಗಳ ಬಗ್ಗೆ ತಿಳಿಯಲು ತೊಡಕಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ವರದಿಯ ಪ್ರಕಾರ ವಿಶ್ವದ 110 ದೇಶಗಳಲ್ಲಿ 110 ಕೋಟಿ ಮಂದಿ ಬಹು ಆಯಾಮದ ಬಡತನದಲ್ಲಿ ಸಿಲುಕಿದ್ದಾರೆ. ವಿಶ್ವದ ಪ್ರತಿ 6 ಮಂದಿ ಬಡವರ ಪೈಕಿ ಆಫ್ರಿಕಾದ ಸಹರಾ ಉಪ ಖಂಡ (53.4 ಕೋಟಿ) ಮತ್ತು ದಕ್ಷಿಣ ಏಷ್ಯಾದ (38.9 ಕೋಟಿ) ಐವರಿದ್ದಾರೆ ಎಂದು ಮಾಹಿತಿ ನೀಡಲಾಗಿದೆ.

ಭಾರತವು ಕಳೆದ ಏಪ್ರಿಲ್‌ನಲ್ಲಿ 142.86 ಕೋಟಿ ಜನಸಂಖ್ಯೆಯನ್ನು ಹೊಂದುವ ಮೂಲಕ ಚೀನಾವನ್ನು ಮೀರಿಸಿ, ವಿಶ್ವದಲ್ಲೇ ಅತಿಹೆಚ್ಚು ಜನಸಂಖ್ಯೆಯ ರಾಷ್ಟ್ರವಾಗಿ ಹೊರಹೊಮ್ಮಿದೆ.

ಅಡುಗೆ ಅನಿಲ ವಂಚಿತರ ಪ್ರಮಾಣ ಇಳಿಕೆ



ಭಾರತದಲ್ಲಿ 2005-06ರಿಂದ 2019-21ರ ಅವಧಿಯಲ್ಲಿ 41.5 ಕೋಟಿ ಜನ ಬಹುಆಯಾಮ (ಮನೆ, ವಿದ್ಯುತ್, ಶಿಕ್ಷಣ, ನೈರ್ಮಲ್ಯ, ಪೌಷ್ಟಿಕ ಆಹಾರ ಇತ್ಯಾದಿ) ಬಡತನದಿಂದ ಹೊರಬಂದಿದ್ದಾರೆ. 2005-06ರಲ್ಲಿ ಭಾರತದಲ್ಲಿ ಸುಮಾರು 64.5 ಕೋಟಿ ಮಂದಿ ಬಹುಆಯಾಮದ ಬಡತನದಲ್ಲಿದ್ದರು.

ವರದಿಯ ಪ್ರಕಾರ, ಭಾರತದಲ್ಲಿ ಬಹುಆಯಾಮದ ಬಡವರು ಮತ್ತು ಪೌಷ್ಟಿಕಾಂಶದ ಸೂಚ್ಯಂಕದಲ್ಲಿ ಕೆಳಮಟ್ಟದಲ್ಲಿದ್ದವರ ಪ್ರಮಾಣ 2005–06 ರಿಂದ 2019–21ರ ಅವಧಿಯಲ್ಲಿ ಶೇ 44.3 ರಿಂದ ಶೇ 11.8ಕ್ಕೆ ಇಳಿಕೆಯಾಗಿದೆ. ಮಕ್ಕಳ ಮರಣ ಪ್ರಮಾಣ ಶೇಕಡ 4.5ರಿಂದ ಶೇಕಡ 1.5ಕ್ಕೆ ಇಳಿದಿದೆ. ಅಡುಗೆ ಅನಿಲ ವಂಚಿತರ ಪ್ರಮಾಣ 2021ರ ಹೊತ್ತಿಗೆ ಶೇಕಡ 52.9ರಿಂದ ಶೇಕಡ 13.9ಕ್ಕೆ ಕುಸಿದಿದೆ. ನೈರ್ಮಲ್ಯದ ಸಮಸ್ಯೆ ಎದುರಿಸುತ್ತಿದ್ದವರ ಪ್ರಮಾಣ ಶೇಕಡ 50.4 ರಿಂದ 11.3ಕ್ಕೆ ಇಳಿದಿದೆ ಎಂದು ಎಂಪಿಐ ವರದಿಯಲ್ಲಿ ತಿಳಿಸಲಾಗಿದೆ. ಶುದ್ಧ ಕುಡಿಯುವ ನೀರಿನ ಕೊರತೆ ಎದುರಿಸುತ್ತಿದ್ದರ ಪ್ರಮಾಣ ಹದಿನೈದು ವರ್ಷದಲ್ಲಿ ಶೇಕಡ 16.4ರಿಂದ ಶೇಕಡ 2.7ಕ್ಕೆ, ವಸತಿ ರಹಿತರ ಪ್ರಮಾಣ ಶೇಕಡ 44.9ರಿಂದ ಶೇಕಡ 13.6ಕ್ಕೆ ಇಳಿದಿದೆ.

ತಂತ್ರಜ್ಞಾನ ಪುರವಣಿ ಓದಿರಿ

ಕಾಂಕ್ರೀಟ್ ಪನೋರಮಾ ಡೆಮಿನಾರ್ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್‌ನಿಂದ ಇದೇ 13 ಮತ್ತು 14ರಂದು 'ಕಾಂಕ್ರೀಟ್ ಪನೋರಮಾ ಡೆಮಿನಾರ್-2023' ಅನ್ನು ಪ್ರೆಸ್ಟೀಜ್ ಶ್ರೀಹರಿ ಖೋಡೆ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ ಹಮ್ಮಿಕೊಂಡಿದೆ.

'ಕಾರ್ಯಕ್ರಮದಲ್ಲಿ ನಿರ್ಮಾಣ ಉದ್ಯಮದ ಮರುರೂಪಿಸುವ ನವೀನ ತಂತ್ರಜ್ಞಾನಗಳು ಮತ್ತು ವಿಧಾನಗಳನ್ನು ನೇರ ಪ್ರದರ್ಶನ ಏರ್ಪಡಿಸಲಾಗಿದೆ. ಕಟ್ಟಡ, ಉತ್ಪನ್ನ ಪರಿಕಲ್ಪನೆಯ ಎಂಎಸ್‌ಎಂಎಲ್ ವಲಯಕ್ಕೆ ನಿರ್ದಿಷ್ಟ ನಿರ್ಮಾಣ ವಿಧಾನಗಳು, ಸುಧಾರಿತ ನಿರ್ಮಾಣ ಸಾಮಗ್ರಿಗಳು ಮತ್ತು ಆಧುನಿಕ ನಿರ್ಮಾಣ ಅಭ್ಯಾಸಗಳಲ್ಲಿ ಸಮರ್ಥನೀಯತೆ ಮತ್ತು ಅನುಸರಣೆಯ ಪ್ರಾಮುಖ್ಯತೆಯನ್ನು ಪ್ರಸ್ತುತ ಪಡಿಸಲಾಗುತ್ತದೆ' ಎಂದು ಇನ್‌ಸ್ಟಿಟ್ಯೂಟ್‌ನ ಪ್ರಧಾನ ಕಾರ್ಯದರ್ಶಿ ಗಿರೀಶ್ ಅವರು ತಿಳಿಸಿದರು.

ಪತಂಜಲಿ ಯೋಗ ಶಿಕ್ಷಣ ಸಮಿತಿ ಉಚಿತ ಯೋಗ ಶಿಬಿರ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಇದೇ 12ರಿಂದ 16ರವರೆಗೆ ಐದು ದಿನಗಳ ಕಾಲ ಉಚಿತ ಯೋಗ ಶಿಬಿರವನ್ನು ರಾಜರಾಜೇಶ್ವರಿನಗರದ ಮೀನಾಕ್ಷಿ ಹಾಗೂ ಪದ್ಮಾವತಿ ಅವಳಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ.

ರಾಜ್ಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಯೋಗ ಶಿಕ್ಷಕರಿಂದ ಉಚಿತ ತರಬೇತಿ ನೀಡಲಾಗುತ್ತದೆ. ಜುಲೈ 12ರಂದು ಶಿಬಿರ ಉದ್ಘಾಟನೆಯಾಗಲಿದ್ದು, 13ರಂದು ವಿಷ್ಣು ಸಹಸ್ರನಾಮ ಪಾರಾಯಣ, ಸತ್ಸಂಗ, ಭಜನೆ, 14ರಂದು ಲಲಿತ ಸಹಸ್ರನಾಮ ಪಾರಾಯಣ, 15ರಂದು ಆರೋಗ್ಯದೆಡೆಗೆ ಯೋಗ ನಡಿಗೆ, 16ರಂದು ಸಮಾರೋಪ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಎರಡು ತಿಂಗಳಾದರೂ ಸರ್ಕಾರಕ್ಕೆ ಸಲ್ಲಿಕೆಯಾಗದ ಟೆಂಡರ್


ಈಜಿಪುರ ಮೇಲ್ಸೇತುವೆ ಈಡೇರದ ಸಚಿವರ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಭರವಸೆ ನೀಡಿದಂತೆ ಈಜಿಪುರ ಮೇಲ್ಸೇತುವೆಯ ಬಾಕಿ ಕಾಮಗಾರಿ ಇನ್ನೂ ಆರಂಭವಾಗಿಲ್ಲ. ಇದಕ್ಕೆ ಬಿಬಿಎಂಪಿ ಅಧಿಕಾರಿಗಳು ಕಾರಣರಾಗಿದ್ದು, ಸಚಿವ ರಾಮಲಿಂಗಾರೆಡ್ಡಿ ಅವರ ಸೂಚನೆಗೂ ಕಿಮ್ಮತ್ತು ನೀಡುತ್ತಿಲ್ಲ.

ನಾಲ್ಕನೇ ಬಾರಿಗೆ ಕರೆದಿರುವ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುವ ಬಿಬಿಎಂಪಿ ಎಂಜಿನಿಯರ್‌ಗಳು ಗುತ್ತಿಗೆದಾರರೊಂದಿಗೆ ಗುತ್ತಿಗೆ ಮೊತ್ತವನ್ನು ಕಡಿತಗೊಳಿಸುವ ಕೆಲಸವನ್ನೇ ಎರಡು ತಿಂಗಳಿಂದ ಮಾಡುತ್ತಿದ್ದಾರೆ. ಇದರಿಂದ ರಾಮಲಿಂಗಾರೆಡ್ಡಿ ಅಸಮಾಧಾನಗೊಂಡಿದ್ದಾರೆ.

'ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ನಮ್ಮ ಸರ್ಕಾರ ಬಂದ ಕೂಡಲೇ ಕಾಮಗಾರಿ ಆರಂಭಿಸಲಾಗುತ್ತದೆ' ಎಂದು ರಾಮಲಿಂಗಾರೆಡ್ಡಿ ಭರವಸೆ ನೀಡಿದ್ದರು. ಆದರೆ ಈವರೆಗೆ ಟೆಂಡರ್‌ಗೆ ಅನುಮೋದನೆಯೇ ದೊರೆತಿಲ್ಲ. ಹೀಗಾಗಿ, ಸಚಿವರು ಆಕ್ರೋಶಗೊಂಡಿದ್ದು, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಈಜಿಪುರ ಮೇಲ್ಸೇತುವೆಯ ಸ್ಥಿತಿ

ಈಜಿಪುರ ಮೇಲ್ಸೇತುವೆ ಬಾಕಿ ಕಾಮಗಾರಿಗೆ ನಾಲ್ಕನೇ ಬಾರಿಗೆ ಮಾರ್ಚ್ 1ರಂದು ಟೆಂಡರ್ ಆಹ್ವಾನಿಸಲಾಗಿತ್ತು. 17ರಂದು ತಾಂತ್ರಿಕ ಬಿಡ್ ತೆರೆದು, ಏಕೈಕ ಅರ್ಹ ಬಿಡ್‌ದಾರರೊಂದಿಗೆ ಮಾತುಕತೆ ನಡೆಸಲಾಗಿತ್ತು. ಹಿಂದೆ ನೀಡಲಾಗಿದ್ದ ಹೆಚ್ಚು ಮೊತ್ತಕ್ಕೆ ಅಂದರೆ ಶೇ 19.52ರಷ್ಟು ಹೆಚ್ಚಿನ ಮೊತ್ತಕ್ಕೆ ಒಪ್ಪಿ-ಕೊಳ್ಳುವಂತೆ ಗುತ್ತಿಗೆದಾರರಿಗೆ ಜುಲೈ 3ರಂದು ಪತ್ರವನ್ನೂ ಎಂಜಿನಿಯರ್‌ಗಳು ಬರೆದಿದ್ದಾರೆ. ಅದಕ್ಕೆ ಗುತ್ತಿಗೆದಾರರು ಸಮ್ಮತಿಸಿದ್ದರೂ ಸರ್ಕಾರಕ್ಕೆ ಟೆಂಡರ್ ಅನುಮೋದನೆ ಕಳುಹಿಸಲಾಗಿಲ್ಲ.

'2017ರಲ್ಲಿ ಆರಂಭವಾಗಿದ್ದ ಈಜಿಪುರ ಮೇಲ್ಸೇತುವೆ ಕಾಮಗಾರಿ ವಿಳಂಬದಿಂದ ಹೈಕೋರ್ಟ್ ಮೆಟ್ಟಿಲೇರಿತು. ಗುತ್ತಿಗೆಯನ್ನು 2022ರ ಮಾರ್ಚ್ 9ರಂದು ರದ್ದುಪಡಿಸಲಾಗಿತ್ತು. ಹೈಕೋರ್ಟ್ ಮೂರು ತಿಂಗಳಲ್ಲಿ ಮರು ಟೆಂಡರ್ ಕರೆದು ಕಾಮಗಾರಿ ಆರಂಭಿಸಬೇಕು ಎಂದು ಬಿಬಿಎಂಪಿಗೆ ತಾಕೀತು ಮಾಡಿತ್ತಾದರೂ, ಈವರೆಗೆ ಟೆಂಡರ್ ಪ್ರಕ್ರಿಯೆಯೇ ಪೂರ್ಣಗೊಂಡಿಲ್ಲ. ಇಷ್ಟುದಿನ ಬಿಜೆಪಿ ಸರ್ಕಾರದ ಮೇಲೆ ಕಾಂಗ್ರೆಸ್ ಶಾಸಕರು ದೂರುತ್ತಿದ್ದರು. ಆದರೆ, ಇದೀಗ ಅವರದ್ದೇ ಸರ್ಕಾರವಿ-ದ್ದರೂ ಕಾಮಗಾರಿ ಏಕೆ ಆರಂಭವಾಗಿಲ್ಲ' ಎಂದು ನಾಗರಿಕರು ಪ್ರಶ್ನಿಸುತ್ತಿದ್ದಾರೆ.

'ಈಜಿಪುರ ಮೇಲ್ಸೇತುವೆ ಬಾಕಿ ಕಾಮಗಾರಿಯನ್ನು ಮುಗಿಸಲು ರಾಮಲಿಂಗಾರೆಡ್ಡಿ ನಮ್ಮೊಂದಿಗೆ ಪ್ರತಿ-ಭಟನೆಯನ್ನೂ ಮಾಡಿದ್ದರು. ಇದೀಗ ಅವರು ಸಚಿವರಾಗಿದ್ದರೂ ಕಾಮಗಾರಿ ಇನ್ನೂ ಆರಂಭವಾಗಿಲ್ಲ' ಎಂದು ಕೋರಮಂಗಲ ಎಸ್‌ಟಿ ಬೆಡ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ದೂರಿದರು.

'ಈಜಿಪುರ ಮೇಲ್ಸೇತುವೆಯ ಟೆಂಡರ್ ಪ್ರಕ್ರಿಯೆ ಬಹುತೇಕ ಮುಗಿದಿದೆ. ಟರ್ನ್‌ಕೀ ಆಧಾರದ ಈ ಕಾಮಗಾರಿಯ ಬಿಡ್ ಮೊತ್ತ ಕಡಿಮೆ ಮಾಡಿಕೊಳ್ಳಲು ಗುತ್ತಿಗೆದಾರರೂ ಒಪ್ಪಿದ್ದಾರೆ. ಮುಖ್ಯ ಆಯುಕ್ತರು ಸಹಿ ಹಾಕಿದ ಕೂಡಲೇ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ' ಎಂದು ಬಿಬಿಎಂಪಿ ಎಂಜಿನಿಯರ್‌ಗಳೂ ತಿಳಿಸಿದರು.

ಸದ್ಯವೇ ಅನುಮೋದನೆ: ರಾಮಲಿಂಗಾರೆಡ್ಡಿ

'ಈಜಿಪುರ ಮೇಲ್ಸೇತುವೆಯನ್ನು ನಿರ್ಮಿಸಲು ನಾವು ಬದ್ಧರಾಗಿದ್ದೇವೆ. ನಾಲ್ಕನೇ ಬಾರಿಗೆ ಟೆಂಡರ್ ಕರೆಯಲಾಗಿದೆ. ಗುತ್ತಿಗೆದಾರರೊಂದಿಗೆ ಚೌಕಸಿ ಕೂಡ ಮುಗಿದಿದೆ. ಬಿಬಿಎಂಪಿ ಹಿರಿಯ ಅಧಿಕಾರಿಗಳು ಟೆಂಡರ್ ಅನ್ನು ಅನುಮೋದನೆಗೆ ಸರ್ಕಾರಕ್ಕೆ ಕಳುಹಿಸಲು ವಿಳಂಬ ಮಾಡುತ್ತಿದ್ದಾರೆ. ಈ ಬಗ್ಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಟೆಂಡರ್ ಅನುಮೋದನೆ ಕಡತವನ್ನು ಶೀಘ್ರವೇ ಸಲ್ಲಿಸುವುದಾಗಿ ತಿಳಿಸಿದ್ದಾರೆ. ಮುಂದಿನ ಸಚಿವ ಸಂಪುಟದ ಮುಂದೆ ಈ ವಿಚಾರ ಬರಲಿದ್ದು, ತೀರ್ಮಾನ ಕೈಗೊಳ್ಳ-ಲಿದ್ದೇವೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ವ್ಯಾಸೆಕ್ಟಮಿ: ಪ್ರೋತ್ಸಾಹಧನ ಹೆಚ್ಚಳ ಅಗತ್ಯ


ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ, ವಿಶ್ವ ಜನಸಂಖ್ಯಾ ದಿನಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಪುರುಷರು ಆಸಕ್ತಿ ತೋರುತ್ತಿಲ್ಲ. ಆದ್ದರಿಂದ ಈ ಶಸ್ತ್ರ-ಚಿಕಿತ್ಸೆಗೆ ಪುರುಷರಿಗೆ ನೀಡುವ ₹1,200 ಪ್ರೋತ್ಸಾಹ ಧನವನ್ನು, ₹ 10 ಸಾವಿರಕ್ಕೆ ಹೆಚ್ಚಿಸುವ ಅಗತ್ಯವಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ವಿಶ್ವ ಜನಸಂಖ್ಯಾ ದಿನದ ಪ್ರಯುಕ್ತ ಆರೋಗ್ಯ ಇಲಾಖೆ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ಜನಸಂಖ್ಯೆಯಲ್ಲಿ ಭಾರತ ವಿಶ್ವದಲ್ಲಿಯೇ ಮುಂಚೂಣಿಯಲ್ಲಿದೆ. ಇದು ಭವಿಷ್ಯದ ಮೇಲೆ ಭಾರಿ ಪರಿಣಾಮ ಬೀರಲಿದೆ. ಜನಸಂಖ್ಯೆ ಹೆಚ್ಚಾದಂತೆ ಮೂಲಸೌಕರ್ಯ ಸೇರಿ ವಿವಿಧ ವ್ಯವಸ್ಥೆಯನ್ನು ಕಲ್ಪಿಸಲು ಕಷ್ಟವಾಗುತ್ತದೆ. ಆದ್ದರಿಂದ, ಜನಸಂಖ್ಯೆ ನಿಯಂತ್ರಣಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಕುಟುಂಬ ಯೋಜನೆಯಲ್ಲಿ ಪುರುಷರ ಸಹಭಾಗಿತ್ವವನ್ನು ಬಲಪಡಿಸಬೇಕು. ಸಂತಾನ ಶಕ್ತಿ ಹರಣ ಚಿಕಿತ್ಸೆಗೆ ಪುರುಷರು ಆಸಕ್ತಿ ತಾಳುವಂತಾಗಲು ಪ್ರೋತ್ಸಾಹಧನ ಹೆಚ್ಚಿಸಬೇಕು' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಜಾಗೃತಿ ವಿಡಿಯೊವನ್ನು ಅಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರ ಜತೆಗೆ ದಿನೇಶ್ ಗುಂಡೂರಾವ್ ವೀಕ್ಷಿಸಿದರು.

'ದೇಶದಲ್ಲಿ ಫಲವಂತಿಕೆ ದರ ಶೇ 2.3ರಷ್ಟಿದೆ. ರಾಜ್ಯದಲ್ಲಿ ಈ ದರ ಶೇ 1.7 ರಷ್ಟಿದ್ದು, ದೇಶಕ್ಕೆ ಹೋಲಿಸಿದಲ್ಲಿ ತೀರಾ ಕಡಿಮೆ ಇದೆ. ಸೂಕ್ತ ವಯಸ್ಸಿನಲ್ಲಿ ವಿವಾಹ, ಮಕ್ಕಳ ಜನನದ ನಡುವಿನ ಅಂತರ ಸೇರಿ ವಿವಿಧ ಸಂಗತಿಗಳ ಬಗ್ಗೆ ಜಾಗೃತಿ ಮೂಡಿಸಬೇಕು' ಎಂದರು.

ಮಾತ್ರೆ ವಿತರಣೆ: 'ಜನಸಂಖ್ಯೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ. ಲಿಂಗ ಸಮಾನತೆ, ಮಹಿಳಾ ಸಬಲೀಕರಣ-ಕ್ಕೆ ಉತ್ತೇಜನ ನೀಡಬೇಕು. ಕುಟುಂಬ ಯೋಜನೆಗಳಡಿ ಪ್ರತಿವರ್ಷ ಸರಾಸರಿ 2.50 ಲಕ್ಷ ಮಹಿಳೆಯರಿಗೆ ಹಾಗೂ 1 ಸಾವಿರ ಪುರುಷರಿಗೆ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ. ಸುಮಾರು 3 ಲಕ್ಷ ಐಯುಸಿಡಿ ಸಾಧನ ಅಳವಡಿಕೆ, 1.25 ಲಕ್ಷ ಅಂತರಾ ಚುಚ್ಚುಮದ್ದು, 4 ಲಕ್ಷ ಮಾಲಾ-ಎನ್ ಮಾತ್ರೆ, 6.50 ಲಕ್ಷ ನಿರೋಧ್ ಹಾಗೂ 55 ಸಾವಿರ ಛಾಯಾ ಮಾತ್ರೆಗಳನ್ನು ಫಲಾನುಭವಿಗಳಿಗೆ ವಿತರಿಸಲಾಗುತ್ತದೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಆರೋಗ್ಯ ಇಲಾಖೆ ಕಾರ್ಯದರ್ಶಿ ಅನಿಲ್ ಕುಮಾರ್ ಟಿ.ಕೆ., ಆಯುಕ್ತ ಡಿ. ರಂದೀಪ್, ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ಡಾ. ನವೀನ್ ಭಟ್ ವೈ., ಇಲಾಖೆ ನಿರ್ದೇಶಕಿ ಡಾ.ಎಂ. ಇಂದುಮತಿ ಇದ್ದರು.

ಕುಟುಂಬ ಯೋಜನೆಯಡಿ ನೀಡಲಾದ ಸೇವೆ

ವಿಧಾನ	2020–21ರಿಂದ 2022–23
ಪುರುಷ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆ	2,168
ಮಹಿಳಾ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆ	9,02,545
ನಿರೋಧ್ ವಿತರಣೆ	6,60,023
ಮಾಲಾ–ಎನ್ ಮಾತ್ರೆ ವಿತರಣೆ	3,96,126
ಛಾಯಾ ಮಾತ್ರೆ ವಿತರಣೆ	99,798
ಅಂತರ ಚುಚ್ಚುಮದ್ದು ವಿತರಣೆ	2,39,292
ಗರ್ಭಧಾರಣಾ ಪರೀಕ್ಷೆ ಕಿಟ್‌ಗಳ ವಿತರಣೆ	25,91,809

'ಸಂವಹನದ ದಿಕ್ಕು ಬದಲಿಸಿದ ಸಮೂಹ ಮಾಧ್ಯಮಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮೂಹ ಮಾಧ್ಯಮಗಳು ಇಂದು ಸಂವಹನದ ದಿಕ್ಕು ಬದಲಿಸಿದರೆ, ಸಾಮಾಜಿಕ ಮಾಧ್ಯಮಗಳು ಜಗತ್ತನ್ನೇ ಆಳುತ್ತಿವೆ' ಎಂದು ಕೊಪ್ಪಳ ವಿಶ್ವವಿದ್ಯಾ-ಲಯದ ಕುಲಪತಿ ಬಿ.ಕೆ. ರವಿ ಹೇಳಿದರು.

ಜಯನಗರದ ನ್ಯಾಷನಲ್ ಕಾಲೇಜಿನ ಪತ್ರಿಕೋದ್ಯಮ ವಿಭಾಗವು ಮಂಗಳವಾರ ಆಯೋಜಿಸಿದ್ದ ಕಾರ್ಯ-ಕ್ರಮದಲ್ಲಿ 'ಸಾಮಾಜಿಕ ಮಾಧ್ಯಮ ಮತ್ತು ಸಾಂಸ್ಕೃತಿಕ ನೀತಿ ಬದಲಾವಣೆ' ಎಂಬ ವಿಷಯದ ಕುರಿತು ಅವರು ಮಾತನಾಡಿದರು.

'ಅಂತರ್ಜಾಲವಿಲ್ಲದ ಬದುಕನ್ನು ಇಂದು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲಿ ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡು ಅಂಶಗಳಿವೆ. ಆದರೆ, ವಿದ್ಯಾರ್ಥಿಗಳು ಸಕಾರಾತ್ಮಕ ಅಂಶಗಳನ್ನು ತೆಗೆದುಕೊಳ್ಳಬೇಕು' ಎಂದು ಅವರು ಸಲಹೆ ನೀಡಿದರು.



ಪತ್ರಿಕೋದ್ಯಮ ವಿದ್ಯಾರ್ಥಿಗಳು ಹೊರತಂದಿರುವ 'ಎನ್‌ಸಿಜೆ ಟೈಮ್ಸ್' ಮತ್ತು 'ಸ್ಪೆಕ್ಟ್ರಮ್' ಪತ್ರಿಕೆಗಳನ್ನು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ. ರವಿ ಬಿಡುಗಡೆಗೊಳಿಸಿದರು. ನ್ಯಾಷನಲ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ. ಎಚ್‌.ಎನ್‌. ಸುಬ್ರಹ್ಮಣ್ಯ, ಪ್ರಾಂಶುಪಾಲ ಡಾ. ಬಿ. ಸುರೇಶ್, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎಸ್. ಜಯಸಿಂಹ, ಎಚ್‌.ಬಿ. ವೈಶಾಲಿ ಇದ್ದಾರೆ.

ಪತ್ರಿಕೋದ್ಯಮ ವಿದ್ಯಾರ್ಥಿಗಳು ಹೊರತಂದಿರುವ ಎನ್.ಸಿ.ಜೆ. ಟೈಮ್ಸ್ ಮತ್ತು ಸ್ಪೆಕ್ಟ್ರಮ್ ಪತ್ರಿಕೆಗಳನ್ನು ಬಿಡುಗಡೆ ಮಾಡಲಾಯಿತು.

15ಕ್ಕೆ ಉಚಿತ ಆನ್‌ಲೈನ್ ಕಾರ್ಯಾಗಾರ

ಬೆಂಗಳೂರು: ಏಕಲವ್ಯ ಯೂನಿವರ್ಸೆಸ್ ಸಂಸ್ಥೆ ಇದೇ 15ರಂದು ಪೈಥಾನ್, ಜಾವಾ ಮತ್ತು ಸಿ ಲ್ಯಾಂಗ್ವೇಜಸ್ ಕುರಿತು 5 ಗಂಟೆಗಳ ಉಚಿತ ಆನ್‌ಲೈನ್ ಕಾರ್ಯಾಗಾರ ಹಮ್ಮಿಕೊಂಡಿದೆ.

ಪ್ರಾರಂಭಿಕ ಕಲಿಕೆಯಲ್ಲಿ ಇರುವವರಿಗೆ ಈ ಕಾರ್ಯಕ್ರಮ-ವಾಗಿದೆ. ಇದರಲ್ಲಿ ಪಾಲ್ಗೊಳ್ಳಲು 'ಪ್ರೋಗ್ರಾಮಿಂಗ್' ಹಿನ್ನೆಲೆ ಅಗತ್ಯವಿಲ್ಲ. ವಿವರಕ್ಕೆ www.ekalavyauniversys.comಗೆ ವೀಕ್ಷಿಸಬಹುದು ಎಂದು ಏಕಲವ್ಯ ಯೂನಿವರ್ಸೆಸ್ ಸಂಸ್ಥಾಪಕ ಮತ್ತು ನಿರ್ದೇಶಕ ರವೀಂದ್ರ ಕೆ. ತಿಳಿಸಿದ್ದಾರೆ.

ನೋಂದಣಿ ಹಾಗೂ ಸಂಪರ್ಕಕ್ಕೆ: 86180 80286 ಅಥವಾ 92422 06020.

'ಆಗಸ್ಟ್ ಅಂತ್ಯಕ್ಕೆ ತಿಂಡಿ ಬೀದಿ ಸಿದ್ಧ'

ಮಡಿವಾಳ ಮಾರುಕಟ್ಟೆಯಲ್ಲಿ ಒಣತ್ಯಾಜ್ಯ ವಿಲೇವಾರಿ ಘಟಕ ಸ್ಥಾಪನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿ.ವಿ ಪುರದ ಫುಡ್ ಸ್ಟ್ರೀಟ್‌ಗೆ ಹೊಸ ರೂಪ ನೀಡುವ ಬಿಬಿಎಂಪಿ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಆಗಸ್ಟ್ ಅಂತ್ಯಕ್ಕೆ 'ತಿಂಡಿ ಬೀದಿ' ಸಿದ್ಧಗೊಳ್ಳಲಿದೆ.

ಸುಮಾರು ₹ 5 ಕೋಟಿ ವೆಚ್ಚದಲ್ಲಿ ಆಧುನಿಕ ಸೌಲಭ್ಯ ಹಾಗೂ ಆಕರ್ಷಕ ವಿನ್ಯಾಸದೊಂದಿಗೆ 'ತಿಂಡಿ ಬೀದಿ' ನಿರ್ಮಾಣವಾಗುತ್ತಿದೆ. ಮೂಲಸೌಕರ್ಯಗಳನ್ನು ಒದಗಿಸುವ ಜೊತೆಗೆ ಸಜ್ಜನ್ ರಾವ್ ವೃತ್ತ ಮತ್ತು ಮಿನರ್ವ ವೃತ್ತದ ನಡುವಿನ ಸುಮಾರು 200 ಮೀಟರ್ ಉದ್ದದ ರಸ್ತೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಬಿಬಿಎಂಪಿ ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ತಿಳಿಸಿದರು.

ಶಾಸಕ ಉದಯ್ ಬಿ. ಗರುಡಾಚಾರ್ ಅವರೊಂದಿಗೆ ಕಾಮಗಾರಿಯನ್ನು ಮಂಗಳವಾರ ಪರಿಶೀಲಿಸಿ ಅವರು ಮಾತನಾಡಿದರು.

ತಿಂಡಿ ಬೀದಿಯಲ್ಲಿ ಎಲ್ಲಾ ವ್ಯಾಪಾರಿಗಳ ಸಹಯೋಗದೊಂದಿಗೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಸ್ಥಳದಲ್ಲಿದ್ದ ಸಮಸ್ಯೆಗಳನ್ನೆಲ್ಲ ಬಗೆಹರಿಸಿಕೊಳ್ಳಲಾಗಿದೆ. ಇನ್ನೊಂದು ತಿಂಗಳಲ್ಲಿ ನವೀಕರಣ ಕಾರ್ಯ ಪೂರ್ಣ-ಗೊಳ್ಳಲಿದೆ ಎಂದು ಶಾಸಕ ಉದಯ್ ಬಿ. ಗರುಡಾಚಾರ್ ತಿಳಿಸಿದರು.



ವಿವಿ ಪುರದಲ್ಲಿ 'ತಿಂಡಿ ಬೀದಿ' ಕಾಮಗಾರಿಯನ್ನು ಶಾಸಕ ಉದಯ್ ಗರುಡಾಚಾರ್, ಬಿಬಿಎಂಪಿ ದಕ್ಷಿಣ ವಲಯ ಆಯುಕ್ತ ಜಯರಾಂ ರಾಯಪುರ ಮಂಗಳವಾರ ಪರಿಶೀಲಿಸಿದರು.

ಒಳಚರಂಡಿ ಸಂಪರ್ಕ, ನೀರು ಸರಬರಾಜು ಸಂಪರ್ಕ, ಮಳೆನೀರು ಗಾಲುವೆ ಸಂಪರ್ಕ, ಕೇಬಲ್‌ಗಳ ಲೈನ್ ಡಕ್ಟ್ ಹಾಗೂ ಕೇಬಲ್ ಚೇಂಬರ್‌ಗೆ ಸಂಬಂಧಿಸಿದ ಕಾಮಗಾರಿ ಮುಕ್ತಾಯಗೊಂಡಿದೆ. ರಸ್ತೆಗೆ ಅನುಗುಣವಾಗಿ ಬೆಡ್ ಕಾಂಕ್ರೀಟ್ ಹಾಕಲಾಗಿದೆ ಎಂದು ಮಾಹಿತಿ ನೀಡಿದರು.

ಕ್ಯಾರೇಜ್ ವೇಯಲ್ಲಿ ವರ್ಣರಂಜಿತ ಬಣ್ಣದ ಕಾಂಕ್ರೀಟ್, ಕರ್ಬ್ ಸ್ಟೋನ್‌ಗಳ ಅಳವಡಿಕೆ, ಪಾದಚಾರಿ ಮಾರ್ಗ, ಎಚ್‌ಡಿಡಿ ಕೇಬಲ್‌ಗಳೊಂದಿಗೆ ಬೀದಿ ದೀಪ, ಅಂಗಡಿಗಳಿಗೆ ಕೆನೋಪಿ, ಪ್ರವೇಶ ಪ್ಲಾಜಾದ ಕಾಮಗಾರಿಗಳು ನಡೆಯುತ್ತಿವೆ ಎಂದರು.

ಮಾರುಕಟ್ಟೆಗೆ ಭೇಟಿ: ಮಡಿವಾಳ ಮಾರುಕಟ್ಟೆಯಲ್ಲಿ ತ್ಯಾಜ್ಯ ವಿಂಗಡಣೆಯ ಪ್ರಕ್ರಿಯೆಯನ್ನು ಮತ್ತಷ್ಟು ಪರಿಣಾಮ-ಕಾರಿಯಾಗಿ ಅನುಷ್ಠಾನಗೊಳಿಸಲು ಜಯರಾಂ ರಾಯಪುರ ಸೂಚಿಸಿದರು.

ಮಡಿವಾಳ ಮಾರುಕಟ್ಟೆಯಲ್ಲಿ ತರಕಾರಿ ಮಾರಾಟ ಮಳಿಗೆಗಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಮಾರುಕಟ್ಟೆಯಲ್ಲಿ ಉತ್ಪತ್ತಿಯಾಗುವ ಒಣತ್ಯಾಜ್ಯವನ್ನು ಸ್ಥಳದಲ್ಲಿಯೇ ವಿಲೇವಾರಿ ಮಾಡುವ ಉದ್ದೇಶದಿಂದ ಒಣತ್ಯಾಜ್ಯ ಸಂಗ್ರಹಣಾ ಘಟಕವನ್ನು ಸ್ಥಾಪಿಸಬೇಕು. ಪಾಲಿಕೆಯ ನಿಯಮಗಳನ್ನು ಪಾಲಿಸದೇ ಇರುವಂತಹವರಿಗೆ ದಂಡ ವಿಧಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಾರುಕಟ್ಟೆಯಲ್ಲಿ ಮಳೆನೀರು ಸರಾಗವಾಗಿ ಹರಿದು ಹೋಗುವ ವ್ಯವಸ್ಥೆ, ಗ್ರಾಹಕರ ಓಡಾಟಕ್ಕೆ ಸಮಸ್ಯೆಯಾಗದಂತೆ ಅಗತ್ಯ ವ್ಯವಸ್ಥೆಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯ ಎಂಜಿನಿಯರ್ ರಾಜೇಶ್, ಕಾರ್ಯಪಾಲಕ ಎಂಜಿನಿಯರ್ ಮಹಂತೇಶ್ ಇದ್ದರು.

ಬಿಬಿಎಂಪಿ ಎಂಜಿನಿಯರ್‌ಗೆ ₹ 25 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ನೀಡದ ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗೆ ಕರ್ನಾಟಕ ಮಾಹಿತಿ ಆಯೋಗ ₹25 ಸಾವಿರ ದಂಡ ವಿಧಿಸಿದೆ.

ಚಿಕ್ಕಬಾಣಾವರದ ನಿವಾಸಿ ಚಿಕ್ಕೇಗೌಡ ಅವರು 2018ರಲ್ಲಿ ಬಿಇಎಂಎಲ್ 4ನೇ ಹಂತದ ಕಟ್ಟಡಕ್ಕೆ ನೀಡಲಾಗಿರುವ ನಕ್ಷೆ ಮತ್ತು ಅನುಮತಿಯ ಮಾಹಿತಿಯನ್ನು ಕೇಳಿದ್ದರು. ಬಿಬಿಎಂಪಿಯ ರಾಜರಾಜೇಶ್ವರಿನಗರ ಉಪ ವಿಭಾಗದ ಅಧಿಕಾರಿಗಳು ಮಾಹಿತಿಯನ್ನು ನೀಡಿರಲಿಲ್ಲ. ಹೀಗಾಗಿ ಅರ್ಜಿದಾರರು ಮಾಹಿತಿ ಆಯೋಗದ ಮೊರೆ ಹೋಗಿದ್ದರು. 6 ವರ್ಷಗಳ ನಂತರವೂ ಅಧಿಕಾರಿಗಳು ಮಾಹಿತಿ ನೀಡಲು ನಿರಾಕರಿಸಿದ್ದರು. 30 ದಿನದೊಳಗೆ ಮಾಹಿತಿ ಒದಗಿಸಿ, ವೈಯಕ್ತಿಕವಾಗಿ ಹಾಜರಾಗಲು ಎಇಇಗೆ ಆಯೋಗ ಆದೇಶಿಸಿತ್ತು. ಇದನ್ನೂ ಪಾಲಿಸದ ಎಇಇ ಬಸವರಾಜು ಅವರಿಗೆ ದಂಡ ವಿಧಿಸಿ, ವಿವರಣೆ ನೀಡಲು ಶೋಕಾಸ್ ನೋಟಿಸ್ ಜಾರಿ ಮಾಡಿದೆ.

ಬಸವರಾಜು ಅವರ ವೇತನದಲ್ಲಿ ₹25 ಸಾವಿರ ದಂಡ ಕಡಿತ ಮಾಡಿಕೊಳ್ಳಬೇಕು ಎಂದು ಬಿಬಿಎಂಪಿ ವಿಶೇಷ ಆಯುಕ್ತರಿಗೆ ಮಾಹಿತಿ ಆಯೋಗದ ಆಯುಕ್ತ ಎಸ್.ಬಿ. ಬೊಮ್ಮನಹಳ್ಳಿ ಆದೇಶಿಸಿದ್ದಾರೆ.

ಪಿ.ಎಚ್‌ಡಿ ಪರೀಕ್ಷೆ 16ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾ-ಲಯದ 2023ನೇ ಸಾಲಿನ ಪಿ.ಎಚ್‌ಡಿ ಪದವಿ ಪ್ರವೇಶ ಪರೀಕ್ಷೆಗಳು ಇದೇ 16ರಂದು ನಡೆಯಲಿವೆ.

ನಾಗರಬಾವಿಯಲ್ಲಿರುವ ಕೆಎಲ್‌ಇ ಸೊಸೈಟಿಯ ಕಲಾ ಮತ್ತು ಕಾನೂನು ಪದವಿ ಕಾಲೇಜು ಮತ್ತು ಕೆಂಗೇರಿ ಉಪನಗರದಲ್ಲಿರುವ ಶೇಷಾದ್ರಿಪುರ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್‌ನ ಪರೀಕ್ಷಾ ಕೇಂದ್ರಗಳಲ್ಲಿ ಪ್ರವೇಶ ಪರೀಕ್ಷೆಗಳು ನಡೆಲಿವೆ.

ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು bangaloreuniversity.ac.in ಅಥವಾ buphd.inhawk.com ವಿ.ವಿಯ ವೆಬ್‌ಸೈಟ್‌ನಿಂದ ಪಡೆದುಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ನೀರು ಪೂರೈಕೆಯಲ್ಲಿ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ 1 ಮತ್ತು 2ನೇ ಹಂತದ ನೀರು ಪೂರೈಕೆಯಾಗುವ ಪ್ರದೇಶಗಳಲ್ಲಿ ಇದೇ 13ರಂದು ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕಾವೇರಿ 1 ಮತ್ತು 2ನೇ ಹಂತದ ಜಲರೇಚಕ ಯಂತ್ರಾಗಾರ ದುರಸ್ತಿ ಕಾಮಗಾರಿ ಕೈಗೊಂಡಿದೆ.

ನೀರು ವ್ಯತ್ಯವಾಗುವ ಪ್ರದೇಶಗಳು: ನೇತಾಜಿನಗರ, ನಾಗಮ್ಮನಗರ, ಕೇಶವನಗರ, ಕೆ.ಪಿ. ಅಗ್ರಹಾರ, ರಾಘವೇಂದ್ರ ಕಾಲೊನಿ, ಟಿಪ್ಪು ನಗರ, ಚಾಮರಾಜಪೇಟೆ, ಬ್ಯಾಂಕ್ ಕಾಲೊನಿ, ಗುರುರಾಜ್ ಲೇಔಟ್, ವಿವೇಕಾನಂದ ನಗರ, ಎನ್.ಆರ್. ಕಾಲೊನಿ, ಬನಶಂಕರಿ 1ನೇ ಹಂತ, ಶಾಂತಲಾನಗರ, ಶಾಂತಿನಗರ, ಈಜೀಪುರ, ಅಶೋಕನಗರ, ದೊಮ್ಮಲೂರು 2ನೇ ಹಂತ, ಎಂ.ಜಿ. ರಸ್ತೆ, ಹಲಸೂರು, ಆಡುಗೋಡಿ, ಕೋರಮಂಗಲ ವಿಲೇಜ್, ಎಸ್.ಜಿ. ಪಾಳ್ಯ, ಜೋಗಿ ಕಾಲೊನಿ, ವಿ.ವಿ. ಪುರ, ಟೆಲಿಕಾಂ ಲೇಔಟ್, ಪಾದರಾಯನಪುರ, ಬಸವನಗುಡಿ, ಗೌಡನಪಾಳ್ಯ, ಆರ್‌ಬಿಐ ಕಾಲೊನಿ, ಜೀವನ್ ಭೀಮಾ ನಗರ, ಹೊಸೂರು ರಸ್ತೆ, ರಾಜರಾಜೇಶ್ವರಿನಗರ, ಕೆಂಗೇರಿ, ವಿಜಯನಗರ, ಮಹಾಲಕ್ಷ್ಮಿ ಲೇಔಟ್, ಬಸವೇಶ್ವರ ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.



ಬೆಂಗಳೂರು ನಗರ ವಿಶ್ವವಿದ್ಯಾಲಯದ ಎರಡನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಕುಲಪತಿ ನಿಸ್ಸಾರ್ ಅಹಮದ್, ಶೇಷಾದ್ರಿಪುರ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೆ ಪಿ. ಕೃಷ್ಣ ಮತ್ತು ಲೇಖಕಿ ತಾರಿಣಿ ಚಿದಾನಂದ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಡೀನ್ ಪ್ರೊ. ಹರಿಪ್ರಸಾದ್, ಕುಲಪತಿ ಪ್ರೊ. ಲಿಂಗರಾಜ ಗಾಂಧಿ, ರಾಜ್ಯಪಾಲ ಥಾವರ್ ಚಂದ್ ಗೆಹಲೋತ್, ಡಾ.ಸಿ.ಎನ್. ಮಂಜುನಾಥ್, ಪ್ರೊ. ವಿ. ಲೋಕೇಶ್ ಇದ್ದರು.

ಶಿವಮೂರ್ತಿ ಶರಣರ ಪ್ರಕರಣ: ಶೀಘ್ರ ವಾದ ಮುಗಿಸಲು ಹೈಕೋರ್ಟ್ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೋಷಾರೋಪ ಹೊರಿಸಿ ಸಾಕ್ಷಿ ವಿಚಾರಣೆ ನಡೆಸಲು 2023ರ ಏಪ್ರಿಲ್ 20ರಂದು ಸೆಷನ್ಸ್ ನ್ಯಾಯಾಲಯ ನೀಡಿರುವ ಆದೇಶ ದೋಷಪೂರಿತವಾಗಿದೆ ಎಂಬ ಅರ್ಜಿಗಳ ಮೇಲಿನ ನಿಮ್ಮ ವಾದವನ್ನು ಆದಷ್ಟು ಬೇಗ ಮುಗಿಸಿಬಿಡಿ. ಏನೇ ಇದ್ದರೂ ಅದನ್ನು ಮುಂದಿನ ವಿಚಾರಣೆಯಲ್ಲಿ ನಾನು ಸಂಪೂರ್ಣ ಆಲಿಸಿ ಅಖೈರುಗೊಳಿಸುತ್ತೇನೆ. ಪುನಃ ಸಮಯ ಕೇಳಬೇಡಿ...'

ಪ್ರೌಢಶಾಲೆಯಲ್ಲಿ ಕಲಿಯುತ್ತಿದ್ದ ಇಬ್ಬರು ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿ ಅತ್ಯಾಚಾರ ಎಸಗಿದ ಆರೋಪ ಹೊತ್ತಿರುವ ಚಿತ್ರದುರ್ಗ ಮುರುಘಾಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ವಿರುದ್ಧದ ವಿವಿಧ ಪ್ರಕರಣಗಳಲ್ಲಿನ ಆರೋಪಗಳಿಗೆ ಸಂಬಂಧಿಸಿದ ಸೆಷನ್ಸ್ ಕೋರ್ಟ್ ವಿಚಾರಣೆಗೆ ನೀಡಲಾಗಿದ್ದ ತಡೆಯಾಜ್ಞೆ ವಿಸ್ತರಿಸುವ ಮುನ್ನ ಶರಣರ ಪರ ವಕೀಲರಿಗೆ ಹೈಕೋರ್ಟ್ ಮಾಡಿದ ತಾಕೀತು ಇದು.

ಈ ಸಂಬಂಧ ಆರೋಪಿ ಶಿವಮೂರ್ತಿ ಶರಣರು ಸಲ್ಲಿಸಿರುವ ನಾಲ್ಕು ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಆರೋಪಿ ಶರಣರ ಪರ ವಕೀಲ ಪಿ.ಎನ್. ಹೆಗ್ಡೆ, 'ಶರಣರ ವಿರುದ್ಧ ದಾಖಲಿಸಿರುವ ಎರಡನೇ ದೂರಿಗೆ ಸಂಬಂಧಿಸಿದ ಪ್ರಕರಣದಲ್ಲಿ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಕಲಂ 207ರ ಪ್ರಕಾರ ವಿಚಾರಣಾ ನ್ಯಾಯಾಲಯವು ಆರೋಪಿಗೆ ಪೊಲೀಸ್ ವರದಿಯ ನಕಲು ಮತ್ತು ಇತರ ದಾಖಲೆಗಳನ್ನು ನೀಡಿಲ್ಲ' ಎಂದು ಆಕ್ಷೇಪಿಸಿದರು.

ಅಂತೆಯೇ, 'ಇನ್ನೆರಡು ಪ್ರಕರಣ-ಗಳಲ್ಲಿ ವಾದ ಮಾಡಬೇಕಿದ್ದ ಹಿರಿಯ ವಕೀಲರು ಹಾಜರಾಗಿಲ್ಲ. ಹೀಗಾಗಿ, ತಡೆಯಾಜ್ಞೆ ವಿಸ್ತರಿಸಿ ಇನ್ನೂ 10 ದಿನಗಳ ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಗಳು, 'ಅಂತಿಮ ವರದಿಯಲ್ಲಿನ ದೋಷಗಳನ್ನು ಆಕ್ಷೇಪಿಸಿ ಸಲ್ಲಿಸಲಾಗಿ-ರುವ ಅರ್ಜಿಗಳನ್ನು ಹೊರತುಪಡಿಸಿ, ಉಳಿದಂತೆ ಪೋಕ್ಸೊ ಪ್ರಕರಣದ ವಿಚಾರಣೆ ಮುಂದುವರಿಯಲಿ. ಸಾಕ್ಷಿ ವಿಚಾರಣೆಯಲ್ಲಿ ಒಮ್ಮೆ ವಿಚಾರಣೆ ಆರಂಭವಾದರೆ ಅದನ್ನು ನಿಲ್ಲಿಸಲು ಆಗುವುದಿಲ್ಲವಲ್ಲಾ' ಎಂದರು.

ಇದೇವೇಳೆ, ರಾಜ್ಯ ಪ್ರಾಸಿಕ್ಯೂಷನ್ ಪರ ಹಾಜರಿದ್ದ ಕೆ.ಪಿ.ಯಶೋದಾ, 'ರಾಜ್ಯ ಪ್ರಾಸಿಕ್ಯೂಟರ್ ಹುದ್ದೆಗಳಿಗೆ ನಿನ್ನೆಯಷ್ಟೇ (ಜುಲೈ 10) ಹೊಸ ನೇಮಕ ನಡೆದಿದೆ. ಇನ್ನೊಂದಿಷ್ಟು ಸಮಯ ಬೇಕು' ಎಂದು ಮನವಿ ಮಾಡಿದರು.

'ಮುಂದಿನ ಮುದ್ದತಿನಂದು ನೀವು ವಾದ ಮಂಡಿಸಲು ತಯಾರಿರಬೇಕು. ಆವತ್ತು ವಿಚಾರಣೆ ಮುಗಿಸುತ್ತೇನೆ' ಎಂದು ಆರೋಪಿ ಪರ ವಕೀಲರಿಗೆ ತಾಕೀತು ಮಾಡಿದ ನ್ಯಾಯಮೂರ್ತಿ ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿದರು.

ನಗರದಲ್ಲಿ ಇಂದು

ಇನ್ನೋವೇಷನ್–2023 ಉದ್ಘಾಟನೆ: ಸಂಜಯ್ ಜೈನ್, ಆಯೋಜನೆ ಮತ್ತು ಸ್ಥಳ: ಸಿ.ಎಂ.ಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಾರತ್ತಹಳ್ಳಿ, ಬೆಳಿಗ್ಗೆ 11.30

ರಾಜಾ ರಾಮಣ್ಣ ಸ್ಮಾರಕ ಉಪನ್ಯಾಸ: 'ವಿಶ್ವಕ್ಕಾಗಿ ನವಭಾರತ' ಕುರಿತ ಉಪನ್ಯಾಸ: ನಿರುಪಮಾ ರಾವ್, ಆಯೋಜನೆ ಮತ್ತು ಸ್ಥಳ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸಡ್ ಸ್ಟಡೀಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆವರಣದ ಜೆ.ಆರ್.ಡಿ. ಟಾಟಾ ಸಭಾಂಗಣ, ಸಂಜೆ 4

ರೆಡ್ಡಿ ಸಮುದಾಯದ ಸಚಿವರು ಮತ್ತು ಶಾಸಕರಿಗೆ ಸನ್ಮಾನ ಸಮಾರಂಭ: ಸಾನ್ನಿಧ್ಯ: ವೇಮನಾನಂದ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಅತಿಥಿಗಳು: ಎಚ್.ಕೆ. ಪಾಟೀಲ, ಶರಣಬಸಪ್ಪ ದರ್ಶನಾಪೂರ, ಅಧ್ಯಕ್ಷತೆ: ಎಸ್. ಜಯರಾಮ ರೆಡ್ಡಿ, ಸನ್ಮಾನಿತರು: ಎಸ್. ಆರ್. ವಿಶ್ವನಾಥ್, ಎಂ. ಸತೀಶ ರೆಡ್ಡಿ, ಎನ್.ಎಸ್. ಸುಬ್ಬಾರೆಡ್ಡಿ, ಹಂಪನಗೌಡ ಬಾದರ್ಲಿ, ಜೆ.ಟಿ. ಪಾಟೀಲ್, ಸಿ.ಎಸ್. ನಾಡಗೌಡ, ಜಿ.ಎಸ್. ಪಾಟೀಲ, ಎನ್.ಎಚ್. ಕೋನರೆಡ್ಡಿ, ಗಾಲಿ ಜನಾರ್ದನ ರೆಡ್ಡಿ, ಚನ್ನಾ ರೆಡ್ಡಿ ಪಾಟೀಲ, ಶರಣಗೌಡ ಕಂದಕೂರು, ಪ್ರಕಾಶ್ ಕೋಳಿವಾಡ, ನಾರಾ ಭರತ್ ರೆಡ್ಡಿ, ಆಯೋಜನೆ: ಕರ್ನಾಟಕ ರೆಡ್ಡಿಜನ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ

ಪ್ರವಚನ ವಾಹಿನಿ: 'ಭಗವಂತ ಮತ್ತು ಭಕ್ತನ ಅವಿನಾಭಾವ ಸಂಬಂಧ' ಕುರಿತ ಉಪನ್ಯಾಸ: ವೀಣಾ ನಾಗರಾಜ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಕರಣ್ ಲಾಡ್ ಅವರ 'ಎ ಗ್ಲಿಚ್ ಇನ್ ದಿ ಸಿಮ್ಯುಲೇಷನ್' ಪುಸ್ತಕ ಬಿಡುಗಡೆ: ಅತಿಥಿ: ಸಿದ್ದರಾಮಯ್ಯ, ಉಪಸ್ಥಿತಿ: ಕೀರ್ತಿ ಲಾಡ್, ಸಂತೋಷ್ ಲಾಡ್, ಸ್ಥಳ: ಶಾಂಗ್ರಿಲಾ ಹೋಟೆಲ್, ವಸಂತನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ: nagaradalli_indu@prajavani.co.in

‘ವಿಧಾನಸೌಧ ಪೂರ್ವದ ಗೇಟ್ ತೆರೆಸಲು ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಪೂರ್ವದ ಗೇಟು ತೆಗೆಸಿ ವಾಹನಗಳ ಓಡಾಟಕ್ಕೆ ಅನುಕೂಲ ಮಾಡಲು ಕ್ರಮ ತೆಗೆದುಕೊಳ್ಳುವುದಾಗಿ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ವಿಧಾನಸಭೆಯಲ್ಲಿ ಇಂಧನ ಸಚಿವ ಕೆ.ಜೆ.ಜಾರ್ಜ್ ಮಾತನಾಡಿ, ಮೆಟ್ರೊ ಕಾಮಗಾರಿ ಸಂದರ್ಭದಲ್ಲಿ ಪೂರ್ವದ ಗೇಟ್ ಮುಚ್ಚಿಸಿ, ಪಶ್ಚಿಮದ ಗೇಟ್ ಮೂಲಕ ಮಾತ್ರ ಸಂಚಾರಕ್ಕೆ ಅವಕಾಶ ನೀಡಲಾಗಿತ್ತು. ಒಂದೇ ಗೇಟ್ ಮೂಲಕ ಓಡಾಟಕ್ಕೆ ಅವಕಾಶ ನೀಡಿರುವುದರಿಂದ ಸುತ್ತಮುತ್ತ ಸಂಚಾರ ದಟ್ಟಣೆ ಹೆಚ್ಚಾಗಿದೆ. ಇನ್ನಾದರೂ ಗೇಟ್ ತೆಗೆಸಿ ಎಂದು ಸಲಹೆ ನೀಡಿದರು.

ಹೆಸರಘಟ್ಟ: ರೈತ ಸಂಪರ್ಕ ಕೇಂದ್ರದಲ್ಲಿ ರೈತರಿಂದ ಬಿತ್ತನೆ ಬೀಜ ಖರೀದಿ

ಮಳೆಯಾಗುತ್ತಲೇ ಚಿಗುರೊಡೆದ ‘ಕೃಷಿ’

• ಬೈಲಮೂರ್ತಿ ಜಿ.

ಹೆಸರಘಟ್ಟ: ಈ ಬಾರಿ ವಿಳಂಬವಾಗಿದ್ದ ಮುಂಗಾರು ಕಳೆದೊಂದು ವಾರದಿಂದ ಚುರುಕುಗೊಂಡಿದೆ. ರೈತರಲ್ಲಿ ಆಶಾಭಾವ ಚಿಗುರೊಡೆದಿದ್ದು ಬಿತ್ತನೆಗೆ ಭೂಮಿಯನ್ನು ಹದ ಮಾಡುವ ಕೆಲಸದಲ್ಲಿ ತೊಡಗಿದ್ದಾರೆ.

ಬಿತ್ತನೆ ಕಾರ್ಯ ಈಗಾಗಲೇ ಪೂರ್ಣವಾಗಬೇಕಿತ್ತು. ಆದರೆ, ಮಳೆ ಜೂನ್ ಪೂರ್ತಿ ಕಣ್ಣಾಮುಚ್ಚಾಲೆ ಆಡಿತು. ಜುಲೈ ಆರಂಭವಾಗುತ್ತಿದ್ದಂತೆ ಉತ್ತಮ ಮಳೆ ಶುರುವಾಯಿತು. ಹೀಗಾಗಿ ತಡ ಮಾಡದೇ ರೈತರು ಕೃಷಿ ಚಟುವಟಿಕೆಯಲ್ಲಿ ನಿರತರಾಗಿದ್ದಾರೆ. ಹೆಸರಘಟ್ಟದ ರೈತ ಸಂಪರ್ಕ ಕೇಂದ್ರದಲ್ಲಿ ರೈತರು ಬಿತ್ತನೆ ಬೀಜ ಖರೀದಿಯಲ್ಲಿ ತೊಡಗಿದ್ದಾರೆ.

ರೈತ ಸಂಪರ್ಕ ಕೇಂದ್ರದಲ್ಲಿ ರಾಗಿಯಲ್ಲಿ ದೀರ್ಘಾವಧಿ ತಳಿಯಾದ ‘ಎಂಆರ್-1’ ಮತ್ತು ‘ಎಂ ಆರ್-6’ ಹಾಗೂ ಮಧ್ಯಮಾವಧಿ ತಳಿಯಾದ ‘ಜಿಪಿ-28’, ‘ಎಂಎಲ್- 365’’ ಲಭ್ಯವಿದೆ. ‘ಸಿಪಿ-81,82’, ‘ಗಂಗಾ ಕಾವೇರಿ’ ಹೈಬ್ರಿಡ್ ಮುಸುಕಿನ ಜೋಳವನ್ನು ಸಹ ವಿತರಿಸಲಾಗುತ್ತಿದೆ. ಇದಲ್ಲದೆ ರೈತರಿಗೆ ಅವಶ್ಯಕವಿರುವ ಮಿಶ್ರಬೆಳೆಗಳಾದ ಹಲಸಂದಿ, ತೊಗರಿ ಮತ್ತು ಲಘು ಪೋಷಕಾಂಶ, ಔಷಧಿಗಳು, ಟಾರ್ಪಲ್‌ಗಳನ್ನೂ ರೈತರಿಗೆ ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಕೇಂದ್ರದಲ್ಲಿ ರೈತರ ಇ-ಕೆವೈಸಿ ಮತ್ತು ರೈತರ ಬೆಳೆ ವಿಮೆ ಸಹ ಮಾಡಲಾಗುತ್ತಿದೆ ಎಂದು ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ತಿಳಿಸಿದ್ದಾರೆ.



ಹೆಸರಘಟ್ಟ ಹೊರವಲಯದ ಶ್ಯಾಮಭಟ್ಟರಪಾಳ್ಯ ಗ್ರಾಮದಲ್ಲಿ ಬಿತ್ತನೆಗಾಗಿ ಜಮೀನನ್ನು ಹದ ಮಾಡುತ್ತಿರುವ ರೈತ.

> ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯ ಹಳ್ಳಿಗಳ ರೈತರಿಗೆ ಅನುಕೂಲವಾಗುವಂತೆ ಅಗತ್ಯವಿರುವಷ್ಟು ಬಿತ್ತನೆ ಬೀಜಗಳನ್ನು ಶೇಖರಿಸಿ ವಿತರಣೆ ಮಾಡಲಾಗುತ್ತಿದೆ.
> **ಕಿರಣ್ ವಿ.ಬಿ,** ಕೃಷಿ ಅಧಿಕಾರಿ

> ಅಗತ್ಯ ಇರುವಷ್ಟು ಮಳೆ ಆಗಿಲ್ಲ. ಆದರೂ, ಬಿತ್ತನೆ ಮಾಡಲು ತಯಾರಿ ಮಾಡಿಕೊಳ್ಳುತ್ತಿದ್ದೇವೆ. ರೈತ ಸಂಪರ್ಕ ಕೇಂದ್ರದಲ್ಲಿ ಬಿತ್ತನೆ ಬೀಜ ಖರೀದಿ ಮಾಡಿದ್ದೇವೆ.
> **ತಿರುಮಲಯ್ಯ,** ರೈತ, ಕಾರ್ಲಾಪುರ

ನಗರೀಕರಣದ ನಡುವೆಯೂ ವ್ಯವಸಾಯ

ಬೆಂಗಳೂರು ಈಗಾಲೇ ಹೆಸರಘಟ್ಟವನ್ನೂ ದಾಟಿ ಚಾಚಿಕೊಂಡಿದ್ದು, ಈ ಪ್ರದೇಶ ತೀವ್ರಗತಿಯಲ್ಲಿ ನಗರೀಕರಣಗೊಂಡಿದೆ. ಕೃಷಿ ಭೂಮಿ ಬಡಾವಣೆಗಳಾಗಿ ಈಗಾಗಲೇ ರೂಪಾಂತರಗೊಂಡಿವೆ. ಹೊಸ ಬಡಾವಣೆಗಳೂ ನಿರ್ಮಾಣಗೊಳ್ಳುತ್ತಿವೆ. ಆದರೂ ಹೆಸರಘಟ್ಟ ವ್ಯಾಪ್ತಿಯಲ್ಲಿ ಕೃಷಿ ಚಟುವಟಿಕೆಗೆ ಕುಂದುಂಟಾಗಿಲ್ಲ. ಮಳೆಯಾಗುತ್ತಲೇ ರೈತರು ಉತ್ಸಾಹದಿಂದ ವ್ಯವಸಾಯಕ್ಕೆ ಮುಂದಾಗಿದ್ದಾರೆ.

ಸುದ್ದಿ 2 ನಿಮಿಷ

ಬೆಂಗಳೂರು– 2,284 ಎಕರೆ ಅರಣ್ಯ ಒತ್ತುವರಿ: ಈಶ್ವರ ಖಂಡ್ರೆ

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ 16,998 ಎಕರೆ ಅರಣ್ಯ ಪ್ರದೇಶವಿದ್ದು, 2,284 ಎಕರೆ ಒತ್ತುವರಿಯಾಗಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ತುಳಸಿ ಮುನಿರಾಜು ಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 1,051 ಒತ್ತುವರಿ ಪ್ರಕರಣಗಳಲ್ಲಿ 339 ಪ್ರಕರಣಗಳಲ್ಲಿ 403 ಎಕರೆ ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರು ದಕ್ಷಿಣ, ಆನೇಕಲ್‌ನಲ್ಲೂ 587 ಎಕರೆ ಒತ್ತುವರಿ ಪತ್ತೆ ಹಚ್ಚಲಾಗಿದೆ. 18 ಪ್ರಕರಣಗಳಲ್ಲಿ ಒತ್ತುವರಿ ತೆರವು ಮಾಡದಂತೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಎಲ್ಲ ಜಾಗ ಮರಳಿ ಪಡೆಯಲು ಪ್ರಯತ್ನ ಮುಂದುವರಿಸಲಾಗುವುದು ಎಂದರು.

ಹೊಂದಾಣಿಕೆಗೆ ಪೊಲೀಸರ ಸಲಹೆ: ಭೂಮಾಫಿಯಾ ವಿರುದ್ಧ ದೂರು ನೀಡಲು ಹೋದರೆ ಪೊಲೀಸರು ಹೊಂದಾಣಿಕೆ ಮಾಡಿಕೊಳ್ಳುವಂತೆ ಸಲಹೆ ನೀಡುತ್ತಾರೆ. ಹಿಂದೆ 62 ಜನ ಸ್ನೇಹಿತರು ಸೇರಿ ತಿಂಗಳಿಗೆ 2 ಸಾವಿರ ಪಾವತಿಸಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ತಲಾ ಒಂದು ನಿವೇಶನ ಖರೀದಿಸಿದ್ದೆವು. ಈಗ ನಿವೇಶನಗಳನ್ನೇ ಒತ್ತುವರಿ ಮಾಡಲಾಗಿದೆ. ಪೊಲೀಸರಿಗೆ ದೂರು ನೀಡಿದರೆ, ಭೂಮಾಫಿಯಾ ಜತೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಸಲಹೆ ನೀಡುತ್ತಾರೆ ಎಂದು ಪರಿಷತ್ ಗಮನಕ್ಕೆ ತಂದರು.

ವಿಶ್ವಕರ್ಮರಿಗೆ ದೇವಸ್ಥಾನ ಸಮಿತಿಗಳಲ್ಲಿ ಅವಕಾಶ ನೀಡುವಂತೆ ಬಿಜೆಪಿ ಸದಸ್ಯ ಕೆ.ಪಿ.ನಂಜುಂಡಿ ಕೋರಿಕೆಗೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಸಮ್ಮತಿ ಸೂಚಿಸಿದರು.

‘ಅಂತರ್ಜಲ ರಕ್ಷಿಸಲು ಆದ್ಯತೆ ನೀಡಿ’




ಬೆಂಗಳೂರು: ಅಂತರ್ಜಲ ಮಟ್ಟ ಸಂರಕ್ಷಣೆಗೆ ಪ್ರಾಶಸ್ತ್ಯ ನೀಡಬೇಕು ಎಂದು ಸೆಂಟರ್ ಫಾರ್ ಎನ್ವಿರಾನ್‌ಮೆಂಟ್ ಎಜುಕೇಷನ್‌ನ ನಿರ್ದೇಶಕ ಕಾರ್ತಿಕೇಯ ವಿಕ್ರಂ ಸಾರಾಭಾಯಿ ಹೇಳಿದರು.

ಸೆಂಟರ್ ಫಾರ್ ಎನ್ವಿರಾನ್‌ಮೆಂಟ್ ಎಜುಕೇಷನ್ (ಸಿಇಇ) ಸಂಸ್ಥೆಯು ಹ್ಯಾನ್ಸ್ ಸೀಡೆಲ್ ಫೌಂಡೇಷನ್ ಸಹಯೋಗದಲ್ಲಿ ಈಚೆಗೆ ಆಯೋಜಿಸಿದ್ದ ‘ನೀರು ಮತ್ತು ಕೃಷಿ ಕ್ಷೇತ್ರಗಳಲ್ಲಿ ಹವಾಮಾನ ಬದಲಾವಣೆಯ ಕುರಿತು ಕರ್ನಾಟಕ ರಾಜ್ಯ ಕ್ರಿಯಾ ಯೋಜನೆ ಸಮಿತಿಯಲ್ಲಿ ಸರ್ಕಾರೇತರ ಸಂಸ್ಥೆಗಳನ್ನು ತೊಡಗಿಸಿಕೊಳ್ಳುವ ಕಾರ್ಯಾಗಾರ’ದಲ್ಲಿ ಅವರು ಮಾತನಾಡಿದರು.

ಕಾರ್ಯಾಗಾರದಲ್ಲಿ ಸಿಇಇ ನಿರ್ದೇಶಕ ಕಾರ್ತಿಕೇಯ ವಿಕ್ರಂ ಸಾರಾಭಾಯಿ ವರದಿ ಬಿಡುಗಡೆಗೊಳಿಸಿದರು. ಐಐಎಂಬಿ ಪ್ರಾಧ್ಯಾಪಕ ಗೋಪಾಲ್ ನಾಯಕ್, ಹ್ಯಾನ್ಸ್ ಸೀಡೆಲ್ ಫೌಂಡೇಷನ್‌ನ ಉಷಾ ಸುಬ್ರಮಣಿಯನ್ ಮತ್ತು ಸಿಇಇ ಯೋಜನಾ ನಿರ್ದೇಶಕ ರಿಜಿನಿ ಸಿಂಪ್ಸನ್ ಇದ್ದರು -

‘ಒಣಭೂಮಿ ಬೇಸಾಯ ಪದ್ಧತಿಗೆ ಆದ್ಯತೆ ನೀಡಬೇಕು. ಕೃಷಿ ಕ್ಷೇತ್ರದಲ್ಲಿ ಸರ್ಕಾರದ ಯೋಜನೆಗಳ ಬಗ್ಗೆ ಸರ್ಕಾರೇತರ ಸಂಸ್ಥೆಗಳು ಗ್ರಾಮೀಣ ಭಾಗದ ರೈತರಲ್ಲಿ ಜಾಗೃತಿ ಮೂಡಿಸುವ ಅವಶ್ಯಕತೆ ಇದೆ’ ಎಂದರು.



ಅಂಚೆ ಚೀಟಿಯಲ್ಲಿ ಶಿವಣ್ಣ

ನಟ ಶಿವರಾಜ್‌ಕುಮಾರ್ ಅವರ 61ನೇ ವರ್ಷದ ಜನ್ಮದಿನದ ಪ್ರಯುಕ್ತ ಅಂಚೆ ಇಲಾಖೆ ಹೊರತಂದಿರುವ ಶಿವರಾಜ್‌ಕುಮಾರ್ ಭಾವಚಿತ್ರದ ‘ಮೈ ಸ್ಟ್ಯಾಂಪ್’ ಅನ್ನು ರಂಗ ಚಂದಿರ ತಂಡವು ಜುಲೈ 12ರಂದು ನಾಗವಾರದಲ್ಲಿರುವ ಅವರ ಮನೆಯಲ್ಲಿ ಕಾಣಿಕೆಯಾಗಿ ನೀಡಲಿದೆ. ಜನರಲ್ ಪೋಸ್ಟ್ ಆಫೀಸ್ ಕಾರ್ಯದರ್ಶಿ ಚಂದ್ರು, ಮಾಗಡಿ ಗಿರೀಶ್, ಶ್ರೀಧರ್ ಗೌಡ, ದೊಡ್ಡಯ್ಯ, ಕಥೆಗಾರ ಕನಕರಾಜ್ ಆರನಕಟ್ಟೆ, ನಾಗೇಶ್, ಚಿತ್ರ ನಿರ್ಮಾಪಕ ಕೆ.ಪಿ. ಶ್ರೀಕಾಂತ್, ಅಖಿಲ ಕರ್ನಾಟಕ ಶಿವರಾಜ್‌ಕುಮಾರ್ ಸೇನಾ ಸಮಿತಿಯ ಅಧ್ಯಕ್ಷ ಟಿ. ನಾರಾಯಣ್, ಗಂಡುಗಲಿ ಶಿವರಾಜ್‌ಕುಮಾರ್ ಸೇನಾ ಸಮಿತಿಯ ಅಧ್ಯಕ್ಷ ಎಂ. ಮಲ್ಲ ಭಾಗವಹಿಸಲಿದ್ದಾರೆ.

ಎನ್‌ಎಚ್‌ಎಂ ನೌಕರರ ಕಾಯಂಗೆ ಆಗ್ರಹ

ಬೆಂಗಳೂರು: ಕಾಂಗ್ರೆಸ್ ಪಕ್ಷವು ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಂತೆ ಗುತ್ತಿಗೆ ನೌಕರರನ್ನು ಕಾಯಂಗೊಳಿಸಲು ಸರ್ಕಾರ ಕ್ರಮವಹಿಸಬೇಕು ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನೌಕರರು (ಎನ್‌ಎಚ್‌ಎಂ) ಆಗ್ರಹಿಸಿದ್ದಾರೆ.

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘವು ಮುಖ್ಯಮಂತ್ರಿ ಹಾಗೂ ಆರೋಗ್ಯ ಸಚಿವರಿಗೆ ಪತ್ರ ಬರೆದಿದೆ.

‘ಎನ್‌ಎಚ್‌ಎಂ ಅಡಿ ಸುಮಾರು 30 ಸಾವಿರ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಯಾವುದೇ ವಿಶೇಷ ಸೌಲಭ್ಯವಿಲ್ಲದೆ 15–20 ವರ್ಷಗಳಿಂದ ಪ್ರಾಮಾಣಿಕವಾಗಿ ದುಡಿಯುತ್ತಿದ್ದಾರೆ. ಆದ್ದರಿಂದ ಕೂಡಲೇ ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಅಧ್ಯಕ್ಷತೆಯ ಮಾನವ ಸಂಪನ್ಮೂಲ ಸಮಿತಿ ವರದಿಯನ್ನು ಅನುಷ್ಠಾನಗೊಳಿಸಿ, ಕಾಯಂಗೊಳಿಸಬೇಕು. ಇಲಾಖೆಯಲ್ಲಿ ಶೇ 70ರಷ್ಟು ಹುದ್ದೆಗಳು ಖಾಲಿ ಇದ್ದರೂ ಕಾರ್ಯಕ್ರಮಗಳು ಸಮರ್ಪಕವಾಗಿ ನಡೆಯಲು ಮುಖ್ಯ ಕಾರಣ ಗುತ್ತಿಗೆ ನೌಕರರು’ ಎಂದು ಸಂಘದ ಅಧ್ಯಕ್ಷ ವಿಶ್ವಾರಾಧ್ಯ ಯಮೋಜಿ ತಿಳಿಸಿದ್ದಾರೆ.

‘ಪ್ರಸ್ತುತ ನೀಡುತ್ತಿರುವ ವೇತನವು ಅತ್ಯಂತ ಕಡಿಮೆ ಇದೆ. ಸಮಾನ ಕೆಲಸಕ್ಕೆ ಸಮಾನ ವೇತನ ಒದಗಿಸಲು ಕ್ರಮವಹಿಸಬೇಕು. ವೈದ್ಯಕೀಯ ಚಿಕಿತ್ಸಾ ಮರುಪಾವತಿ ಹಾಗೂ ವಿಮೆ ಯೋಜನೆ, ಮೃತ ನೌಕರರ ಕುಟುಂಬಕ್ಕೆ ಆರ್ಥಿಕ ಪರಿಹಾರ ಮತ್ತು ಉದ್ಯೋಗ ಒದಗಿಸಬೇಕು’ ಎಂದು ಆಗ್ರಹಿಸಿದ್ದಾರೆ.

‘ಹೊರಗುತ್ತಿಗೆ ನೌಕರರನ್ನು ನೇರಗುತ್ತಿಗೆ ನೌಕರರನ್ನಾಗಿ ಮಾಡಬೇಕು. ಅವರಿಗೂ ವೇತನವನ್ನು ಪರಿಷ್ಕರಣೆ ಮಾಡಬೇಕು. ಹರಿಯಾಣ ಮಾದರಿ ಮಾನವ ಸಂಪನ್ಮೂಲ ನೀತಿಯನ್ನು ರಚಿಸಬೇಕು. ಛತ್ತೀಸ್‌ಗಢ ಸರ್ಕಾರದಂತೆ ಏ.1ರಂದು ವಿರಾಮ ದಿನವನ್ನು ರದ್ದುಗೊಳಿಸಬೇಕು. ಕನಿಷ್ಠ ವೇತನ ಕಾಯ್ದೆಯಂತೆ ವೇತನ ಹೆಚ್ಚಿಸಿ, ಆದೇಶ ಹೊರಡಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಕುನೊ: ಚೀತಾ ‘ತೇಜಸ್’ ಸಾವು

ಪ್ರಜಾವಾಣಿ ವಾರ್ತೆ

ಭೋಪಾಲ್: ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಮಂಗಳವಾರ ‘ತೇಜಸ್’ ಹೆಸರಿನ ನಾಲ್ಕು ವರ್ಷದ ಗಂಡು ಚೀತಾ ಮೃತಪಟ್ಟಿದೆ.

ಉದ್ಯಾನದಲ್ಲಿ ಚೀತಾ ಸರಣಿ ಸಾವು ಮುಂದುವರಿದಿದ್ದು, ದಕ್ಷಿಣ ಆಫ್ರಿಕಾದಿಂದ ತರಲಾಗಿದ್ದ ‘ತೇಜಸ್’ ಸಾವಿನೊಂದಿಗೆ ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ಮೃತಪಟ್ಟ ಚೀತಾಗಳ ಸಂಖ್ಯೆ 7ಕ್ಕೇರಿದೆ.

ಬೆಳಿಗ್ಗೆ ಚೀತಾದ ಕುತ್ತಿಗೆಯಲ್ಲಿ ಗಾಯಗಳಾಗಿರುವುದನ್ನು ಗಮನಿಸಿದ್ದ ಮೇಲ್ವಿಚಾರಣಾ ತಂಡವು ಈ ಬಗ್ಗೆ ವೈದ್ಯರ ಗಮನಕ್ಕೆ ತಂದಿತ್ತು. ಮಧ್ಯಾಹ್ನದ ವೇಳೆಗೆ ಅದು ಅಸುನೀಗಿದೆ.

‘ಚೀತಾ ಗಾಯಗೊಂಡಿದ್ದು ಹೇಗೆ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಮರಣೋತ್ತರ ಪರೀಕ್ಷೆಯ ಬಳಿಕ ಅದರ ಸಾವಿಗೆ ನಿಖರ ಕಾರಣ ಏನೆಂಬುದು ತಿಳಿಯಲಿದೆ’ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಜೆ.ಸಿ. ಚೌಹಾಣ್ ತಿಳಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮೂಲ ಸೌಕರ್ಯಕ್ಕೆ ಒತ್ತಾಯ

52 ವಿಭಾಗದ ವಿದ್ಯಾರ್ಥಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಶೈಕ್ಷಣಿಕ ಮೂಲ ಸೌಕರ್ಯ ಒದಗಿಸುವಂತೆ ಒತ್ತಾಯಿಸಿ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ವಿಶ್ವವಿದ್ಯಾಲಯದ ಆಡಳಿತ ಕಚೇರಿ ಮುಂದೆ ಸೇರಿದ 52 ವಿಭಾಗದ ವಿದ್ಯಾರ್ಥಿಗಳು ಇಂಗ್ಲಿಷ್ ಕಲಿಕಾ ತರಗತಿ, ಕಂಪ್ಯೂಟರ್ ಲ್ಯಾಬ್, ಕೌಶಲ ಅಭಿವೃದ್ಧಿ ತರಬೇತಿ, ಕ್ರೀಡಾಂಗಣ, ಗ್ರಂಥಾಲಯ, ಹಾಸ್ಟೆಲ್ ಉನ್ನತೀಕರಣ, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿಯಂತಹ ಅತ್ಯವಶ್ಯಕ ಮೂಲ ಸೌಕರ್ಯಗಳು ಭರವಸೆಯಾಗಿಯೇ ಉಳಿದಿವೆ. ಘೋಷಣೆಗಳಿಗೆ ಸೀಮಿತವಾಗಿರುವ ಆಶ್ವಾಸನೆಗಳು ಶೀಘ್ರದಲ್ಲೇ ಕಾರ್ಯರೂಪಕ್ಕೆ ಬರಬೇಕು ಎಂದು ಒತ್ತಾಯಿಸಿದರು.

ಹಲವು ಬಾರಿ ಮನವಿ ಮಾಡಿದ್ದರೂ ಆಡಳಿತ ವರ್ಗದಿಂದ ಯಾವುದೇ ಸಕಾರಾತ್ಮಕ ಸ್ಪಂದನೆ ದೊರೆಯುತ್ತಿಲ್ಲ ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟದ ಗೌರವಾಧ್ಯಕ್ಷ ಲೋಕೇಶ್ ರಾಮ್ ಮಾತನಾಡಿ, ನ್ಯಾಕ್ ಸಂಸ್ಥೆಯು ಬೆಂಗಳೂರು ವಿಶ್ವವಿದ್ಯಾಲಯಕ್ಕೆ 'ಎ++' ಶ್ರೇಣಿ ನೀಡಿದ್ದರೂ ಹಲವಾರು ಕೊರತೆಗಳು ವಿದ್ಯಾರ್ಥಿಗಳನ್ನು ಬಾಧಿಸುತ್ತಿದೆ ಎಂದು ದೂರಿದರು.

ಸಂಶೋಧನಾ ವಿದ್ಯಾರ್ಥಿಗಳಿಗೆ ದೊರೆಯಬೇಕಿದ್ದ ಲ್ಯಾಪ್‌ಟಾಪ್, ಕ್ಯಾಮೆರಾ ಸವಲತ್ತು ಇನ್ನೂ ಕೈ ಸೇರಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಗೆ ಅಗತ್ಯವಾದ ಪುಸ್ತಕ ಮಾಲಿಕೆ ಸೌಲಭ್ಯವೂ ಕೇವಲ ಹೇಳಿಕೆಗೆ ಸೀಮಿತವಾಗಿದೆ. ವಿದ್ಯಾರ್ಥಿಗಳ ಕುಂದು ಕೊರತೆ ಬಗ್ಗೆ ಆಡಳಿತಾಧಿಕಾರಿಗಳು ಕವಡೆ ಕಾಸಿನಷ್ಟು ಗಮನ ನೀಡುತ್ತಿಲ್ಲ ಎಂದು ದೂರಿದರು. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಲ್ಯಾಪ್‌ಟಾಪ್ ಹಾಗೂ ಕ್ಯಾಮೆರಾ ಸೌಲಭ್ಯ ವಿಸ್ತರಿಸಬೇಕೆಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿದ ಕುಲಪತಿ ಡಾ. ಎಸ್.ಎಂ. ಜಯಕರ್, 'ವಿದ್ಯಾರ್ಥಿಗಳ ಮನವಿ ಪರಿಶೀಲಿಸಲಾಗುವುದು. ಸಮಸ್ಯೆ ಪರಿಹಾರಕ್ಕೆ ಅಧಿಕಾರಿಗಳ ಸಭೆ ಕರೆಯಲಾಗಿದೆ. ತದನಂತರ ವಿದ್ಯಾರ್ಥಿ ಒಕ್ಕೂಟದ ಸದಸ್ಯರೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.



ಮೂಲ ಸೌಕರ್ಯಕ್ಕೆ ಒತ್ತಾಯಿಸಿ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು

ಸೂರ್ಯ ನಗರದಲ್ಲಿ ಕ್ರೀಡಾಂಗಣ, ಮಾದರಿ ಶಾಲೆ: ಸಚಿವ ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂರ್ಯ ನಗರ ನಾಲ್ಕನೇ ಹಂತದಲ್ಲಿ 100 ಎಕರೆ ಪ್ರದೇಶದಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ಹಾಗೂ ಮಾದರಿ ಶಾಲೆ ನಿರ್ಮಿಸಲಾಗುವುದು ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

ಸಂಸದ ಡಿ. ಕೆ. ಸುರೇಶ್ ಹಾಗೂ ಶಾಸಕ ಶಿವಣ್ಣ ಅವರೊಂದಿಗೆ ಸೂರ್ಯ ನಗರ ನಾಲ್ಕನೇ ಹಂತದ ಕಾಮಗಾರಿಯನ್ನು ಮಂಗಳವಾರ ಪರಿಶೀಲಿಸಿ ಅವರು ಮಾತನಾಡಿದರು.

ಕ್ರಿಕೆಟ್, ಫುಟ್ಬಾಲ್, ಹಾಕಿ ಸೇರಿದಂತೆ ಎಲ್ಲ ಕ್ರೀಡೆಗೆ ಅವಕಾಶವಿರುವ ಕ್ರೀಡಾಂಗಣ ಹಾಗೂ 10 ಎಕರೆ ಪ್ರದೇಶದಲ್ಲಿ ಮಾದರಿ ಶಾಲೆ ನಿರ್ಮಾಣಕ್ಕೆ ಕ್ರಿಯಾಯೋಜನೆ ರೂಪಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಐದು ಗ್ರಾಮಗಳ 1938 ಎಕರೆ ಪ್ರದೇಶದಲ್ಲಿ 587 ಎಕರೆ ಸರ್ಕಾರಿ ಗೋಮಾಳವೂ ಸೇರಿದ ಪ್ರದೇಶದಲ್ಲಿ ಸೂರ್ಯನಗರ ನಾಲ್ಕನೇ ಹಂತ ಬಡಾವಣೆ ನಿರ್ಮಾಣವಾಗುತ್ತಿದೆ. ಜಮೀನು ಮಾಲೀಕರು ಹಾಗೂ ಗೃಹ ಮಂಡಳಿ 50:50 ಹಂಚಿಕೆ ಆಧಾರದಲ್ಲಿ ರಚನೆ ಮಾಡಲಾಗುತ್ತಿದೆ. 20 ಸಾವಿರ ನಿವೇಶನ ರಚನೆ ಆಗಲಿದ್ದು, ಜಮೀನು ಮಾಲೀಕರಿಗೆ 10 ಸಾವಿರ ನಿವೇಶನ ನೀಡಲಾಗುತ್ತದೆ ಎಂದು ಹೇಳಿದರು.

ತ್ಯಾಜ್ಯ ವಿಲೇವಾರಿ ಘಟಕ, ಶಾಲೆ, ಚಿತಾಗಾರ, ಕ್ಲಬ್ ಗೆ ಜಾಗ ಒದಗಿಸಲು ಸ್ಥಳೀಯರು ಸಚಿವರಿಗೆ ಮನವಿ ಸಲ್ಲಿಸಿದರು.

ಹಂಚಿಕೆಗೆ ಕ್ರಮ: ಇಂಡ್ಲ ವಾಡು ಬಳಿ ರಾಜೀವ್ ಗಾಂಧಿ ವಸತಿ ನಿಗಮದಿಂದ 2387 ಒಂದು ಬಿಎಚ್‌ಕೆ, 653 ಎರಡು ಬಿಎಚ್‌ಕೆ ವಸತಿ ಸಂಕೀರ್ಣ ಕಾಮಗಾರಿಯನ್ನು ಸಚಿವ ಜಮೀರ್ ಅಹಮದ್ ಖಾನ್ ಪರಿಶೀಲಿಸಿದರು. ಕಾಲಮಿತಿಯಲ್ಲಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು.


ಸೂರ್ಯ ನಗರ ನಾಲ್ಕನೇ ಹಂತದ ನಿರ್ಮಾಣ ಕಾಮಗಾರಿಯನ್ನು ವಸತಿ ಸಚಿವ ಜಮೀರ್ ಅಹಮದ್ ಖಾನ್ ಪರಿಶೀಲಿಸಿದರು. ಸಂಸದ ಡಿ. ಕೆ. ಸುರೇಶ್ ಹಾಗೂ ಶಾಸಕ ಶಿವಣ್ಣ ಇದ್ದರು

ಸುಲಿಗೆಕೋರನ ಕಾಲಿಗೆ ಗುಂಡು ಹಾರಿಸಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಪಿ ಬಂಧನಕ್ಕೆ ತೆರಳಿದ್ದ ವೇಳೆ ಪೊಲೀಸರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದ ದರೋಡೆಕೋರ ಯಾಸರ್ ರೆಹಮಾನ್ ಅಲಿಯಾಸ್ ಫೋರ್‌ನ (21) ಕಾಲಿಗೆ ಪೊಲೀಸರು ಗುಂಡು ಹಾರಿಸಿ ಬಂಧಿಸಿದ್ದಾರೆ. ಕಾಲಿಗೆ ಗುಂಡೇಟು ತಗುಲಿದ್ದು ಆರೋಪಿಯನ್ನು ಚಿಕಿತ್ಸೆಗೆಂದು ಆಸ್ಪತ್ರೆಗೆ ದಾಖಲಿಸಲಾಗಿದೆ.

ಸದಾಶಿವನಗರದ ಅರಮನೆ ಮೈದಾನದ ಬಳಿ ಮಂಗಳವಾರ ಬೆಳಿಗ್ಗೆ ಕಾರ್ಯಾಚರಣೆ ವೇಳೆ ಆರೋಪಿ ತಪ್ಪಿಸಿಕೊಳ್ಳಲು ಮುಂದಾದ ವೇಳೆ ಆತನ ಕಾಲಿಗೆ ಗುಂಡು ಹಾರಿಸಲಾಯಿತು ಎಂದು ಮೂಲಗಳು ಹೇಳಿವೆ.

ಸುಲ್ತಾನ್ ಪಾಳ್ಯದ ಭುವನೇಶ್ವರಿ ನಗರದ ನಿವಾಸಿಯಾಗಿರುವ ಆರೋಪಿ, ಸುಲಿಗೆ, ದರೋಡೆ ಸೇರಿದಂತೆ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಈತನ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ಏಳು ಪ್ರಕರಣಗಳು ದಾಖಲಾಗಿವೆ.

'ಅಶೋಕ ನಗರ, ವೈಯಾಲಿಕಾವಲ್, ರಾಜಾಜಿನಗರ, ಮಲ್ಲೇಶ್ವರಂ, ಸದಾಶಿವನಗರ, ಯಶವಂತಪುರ ಭಾಗದಲ್ಲಿ ಈತ ಸುಲಿಗೆ ನಡೆಸುತ್ತಿದ್ದ. ಒಂಟಿಯಾಗಿ ನಡೆದು ತೆರಳುತ್ತಿದ್ದವರನ್ನು ಅಡ್ಡಗಟ್ಟಿ ಚಾಕು ತೋರಿಸಿ ಮೊಬೈಲ್ ಹಾಗೂ ಹಣ ದೋಚುತ್ತಿದ್ದ. ಹೆಚ್ಚಾಗಿ ಈತ ಮುಂಜಾನೆ ವೇಳೆ ಸುಲಿಗೆಗೆ ಇಳಿಯುತ್ತಿದ್ದ. ಮುಂಜಾನೆ ಸುಲಿಗೆ ಮಾಡುತ್ತಿದ್ದರಿಂದ ಒಂದು ವಾರದಿಂದ ವಿಶೇಷ ಕಾರ್ಯಾಚರಣೆ ನಡೆಸಲಾಗಿತ್ತು. ಆದರೂ, ಪತ್ತೆಯಾಗಿರಲಿಲ್ಲ. ಮಂಗಳವಾರ ಬೆಳಿಗ್ಗೆ ಅರಮನೆ ಮೈದಾನದ ಬಳಿ ಆರೋಪಿಯನ್ನು ಬಂಧಿಸುವಾಗ ಹಲ್ಲೆ ನಡೆಸಿ ತಪ್ಪಿಸಿಕೊಳ್ಳಲು ಮುಂದಾದ. ಆಗ ಇನ್‌ಸ್ಪೆಕ್ಟರ್ ಒಬ್ಬರು ಆರೋಪಿಯ ಬಲಗಾಲಿಗೆ ಗುಂಡು ಹಾರಿಸಿದರು ಎಂದು ಮೂಲಗಳು ಹೇಳಿವೆ.

ಆರೋಪಿ ಜತೆಗಿದ್ದ ಸಹಚರರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.


ಯಾಸರ್ ರೆಹಮಾನ್

ಮೊಬೈಲ್ ಕಳವು: ನಾಲ್ವರು ಆರೋಪಿಗಳ ಸೆರೆ

ಬೆಂಗಳೂರು: ಮೊಬೈಲ್ ಹಾಗೂ ಪರ್ಸ್ ದೋಚಿ ಪರಾರಿಯಾಗುತ್ತಿದ್ದ ಮೂವರು ಮಂಗಳಮುಖಿಯರು ಸೇರಿದಂತೆ ನಾಲ್ವರು ಆರೋಪಿಗಳನ್ನು ಕೊಡಿಗೇಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಸ್ನೇಹಾ, ಆವಿಷ್ಕಾ, ದೀಪಿಕಾ ಹಾಗೂ ಆಟೊ ಚಾಲಕ ಪ್ರಕಾಶ್ ಬಂಧಿತ ಆರೋಪಿಗಳು. ರಸ್ತೆಗಳಲ್ಲಿ ಒಂಟಿಯಾಗಿ ತೆರಳುತ್ತಿದ್ದವರನ್ನೇ ಗುರಿಯಾಗಿಸಿ ಇವರು ಸುಲಿಗೆ ಮಾಡುತ್ತಿದ್ದರು.

ಕಳೆದ ಭಾನುವಾರ ದೇವನಹಳ್ಳಿಯ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಹೆಬ್ಬಾಳ ಮಾರ್ಗದ ಮೇಲ್ಸೇತುವೆ ಬಳಿ ಕಾದು ನಿಂತಿದ್ದ 70 ವರ್ಷದ ವೃದ್ಧರೊಬ್ಬರ ಬಳಿ ಮೂವರು ಆರೋಪಿಗಳು ಹಣ ಕೇಳಿದ್ದಾರೆ. ಅವರು ಕೇಳಿದಷ್ಟು ಹಣ ನೀಡದಿರುವಾಗ ಮೊಬೈಲ್ ಹಾಗೂ ಪರ್ಸ್ ಕಸಿದುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಯುವಕನ ಅಪಹರಿಸಿ ಕೊಲೆ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಕನನ್ನು ಅಪಹರಿಸಿ ಕೊಲೆ ಮಾಡಿ ಮೃತದೇಹವನ್ನು ಕೆಂಗೇರಿಯ ಕೋಣಸಂದ್ರ ಕೆರೆಯ ಬಳಿ ಎಸೆದು ಆರೋಪಿಗಳು ಪರಾರಿಯಾಗಿದ್ದಾರೆ. ಚಂದ್ರಾಲೇಔಟ್ ನಿವಾಸಿ ಮೊಹಮ್ಮದ್ ತಾಹೀರ್ (19) ಕೊಲೆಯಾದ ಯುವಕ.

ಚಾಮರಾಜಪೇಟೆಯ ಟಿಪ್ಪುನಗರದ ಆರೋಪಿ ನ್ಯಾಮತ್, ನದೀಮ್ ಹಾಗೂ ಸಮೀರ್‌ನನ್ನು ವಶಕ್ಕೆ ಪಡೆದಿರುವ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ಸೋಮವಾರ ರಾತ್ರಿ 11ರ ಸುಮಾರಿಗೆ ತಾಹೀರ್‌ಗೆ ಕರೆ ಮಾಡಿದ್ದ ಆರೋಪಿಗಳು ನಾಯಂಡಹಳ್ಳಿ ಮೆಟ್ರೊ ನಿಲ್ದಾಣದ ಬಳಿಗೆ ಬರುವಂತೆ ಹೇಳಿದ್ದರು. ಅಲ್ಲಿಗೆ ತೆರಳಿದ ಮೇಲೆ ಆಟೋದಲ್ಲಿ ತಾಹೀರ್‌ನನ್ನು ಅಪಹರಿಸಿಕೊಂಡು ಕೆಂಗೇರಿ ಕಡೆಗೆ ಹೋಗಿದ್ದರು. ರಾತ್ರಿಯಾದರೂ ತಾಹೀರ್ ಮನೆಗೆ ಬಾರದಿದ್ದಾಗ ತಂದೆ ಸೈಯದ್ ಮೆಹಬೂಬ್ ಆತನಿಗೆ ಕರೆ ಮಾಡಿದ್ದರು. ಆದರೆ, ತಾಹೀರ್ ಕರೆ ಸ್ವೀಕರಿಸಿರಲಿಲ್ಲ. ಬಳಿಕ ನ್ಯಾಮತ್ ಮನೆಯ ಬಳಿ ಹೋಗಿ ಮೆಹಬೂಬ್ ಪುತ್ರನ ಬಗ್ಗೆ ವಿಚಾರಿಸಿದ್ದರು. ಆಗ ನ್ಯಾಮತ್ ತಂದೆ ಆತನಿಗೆ ಕರೆ ಮಾಡಿ ವಿಚಾರಿಸಿದಾಗ, ತಾನು ಕೆಂಗೇರಿಯಲ್ಲಿದ್ದು ತಾಹೀರ್ ಸಹ ತಮ್ಮೊಂದಿಗೆ ಇರುವುದಾಗಿ ಹೇಳಿದ್ದ. ತಾಹೀರ್‌ನನ್ನು ತಕ್ಷಣವೇ ಕರೆ ತರುವಂತೆ ಹೇಳಿದಾಗ ನ್ಯಾಮತ್ ಕರೆ ಕಡಿತಗೊಳಿಸಿದ್ದ ಎಂದು ಪೊಲೀಸರು ಹೇಳಿದರು.

ಆತಂಕಗೊಂಡ ಪೊಲೀಸರು ರಾತ್ರಿಯೇ ಕೆಂಗೇರಿ ಕಡೆಗೆ ತೆರಳಿ ಹುಡುಕಾಟ ನಡೆಸಿದ್ದರು. ತಾಹೀರ್ ಪತ್ತೆಯಾಗಿರಲಿಲ್ಲ. ಚಂದ್ರಾಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಮಂಗಳವಾರ ಬೆಳಿಗ್ಗೆ ಕೆಂಗೇರಿ ಸುತ್ತಮುತ್ತ ಹುಡುಕಾಟ ನಡೆಸಿದಾಗ ಕೆರೆ ಬಳಿ ತಾಹೀರ್ ಶವ ಪತ್ತೆಯಾಗಿದೆ ಎಂದು ಮೂಲಗಳು ಹೇಳಿವೆ.

'ಹಿಂದೂಸ್ಥಾನ್ ಕಂಪನಿಯಲ್ಲಿ ಡಿಲವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ತಾಹೀರ್ ಹಾಗೂ ನ್ಯಾಮತ್ ನಡುವೆ ವರ್ಷದ ಹಿಂದೆ ಜಗಳವಾಗಿತ್ತು. ಹಳೇ ದ್ವೇಷದಿಂದ ಕೊಲೆ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.


ತಾಹೀರ್

ರಾತ್ರಿ ಪಾಳಿ ಕೆಲಸದ ವೇಳೆ ನಿದ್ರೆ

ಕಾನ್‌ಸ್ಟೆಬಲ್‌ಗಳ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾತ್ರಿ ಪಾಳಿಯ ಕೆಲಸದ ವೇಳೆ ನಿದ್ರಿಸುತ್ತಿದ್ದ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಕರ್ತವ್ಯ ಲೋಪ ಆರೋಪದಡಿ ಅಮಾನತುಗೊಳಿಸಲಾಗಿದೆ.

ಮಹದೇವಪುರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಎ.ಎನ್.ಜಯರಾಮ್ ಹಾಗೂ ಕಾನ್‌ಸ್ಟೆಬಲ್ ಈರಪ್ಪ ಉಂಡಿ ಅವರನ್ನು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಎಸ್.ಗಿರೀಶ್ ಅವರು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಜುಲೈ 9ರಂದು ಸಿಎಆರ್ (ನಗರ ಸಶಸ್ತ್ರ ಮೀಸಲು) ಡಿಸಿಪಿ ಗಸ್ತಿನಲ್ಲಿದ್ದ ವೇಳೆ ಠಾಣೆಗೆ ದಿಢೀರ್ ಭೇಟಿ ನೀಡಿದ್ದರು. ಆಗ ಇಬ್ಬರೂ ನಿದ್ರಿಸುತ್ತಿರುವುದು ಕಂಡುಬಂದಿದೆ. ಠಾಣೆಯಲ್ಲಿ ಸೆಂಟ್ರಿ ಕೆಲಸ ಮಾಡುತ್ತಿದ್ದವರನ್ನು ವಿಚಾರಣೆ ನಡೆಸಿದ್ದರು. ಅವರಿಂದಲೂ ಸಮರ್ಪಕ ಉತ್ತರ ದೊರೆತಿರಲಿಲ್ಲ. ನಿರ್ಲಕ್ಷ್ಯತನ ತೋರಿದ ಆರೋಪದ ಅಡಿ ಇಬ್ಬರೂ ಸಿಬ್ಬಂದಿಗಳನ್ನು ಅಮಾನತು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಇಲಾಖಾ ವಿಚಾರಣೆ ಬಾಕಿ ಇರಿಸಿಕೊಂಡು ಅಮಾನತು ಮಾಡಲಾಗಿದೆ. ಅಮಾನತಿನ ಅವಧಿಯಲ್ಲಿ ಜೀವನಾಧಾರ ಭತ್ಯೆಗೆ ಇಬ್ಬರೂ ಸಿಬ್ಬಂದಿಯೂ ಅರ್ಹರಾಗಿರುತ್ತಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ರಾಡಿನಿಂದ ಹೊಡೆದು ಕೊಲೆ

ಬೆಂಗಳೂರು: ಗಲಾಟೆ ವೇಳೆ ಹಲ್ಲೆಗೆ ಒಳಗಾಗಿದ್ದ ಮಾಗಡಿ ರಸ್ತೆಯ ನಿವಾಸಿ ಮುರಳಿ ಮಂಗಳವಾರ ಮೃತಪಟ್ಟಿದ್ದಾರೆ.

ಉಪ್ಪಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೋಮವಾರ ರಾತ್ರಿ 12 ಗಂಟೆಗೆ ಮುರಳಿ, ಸಂದೀಪ್ ಮತ್ತು ಮನೋಹರ್ ಪಾರ್ಟಿ ಮುಗಿಸಿಕೊಂಡು ಆನಂದರಾವ್ ವೃತ್ತದ ಕಡೆಗೆ ತೆರಳುತ್ತಿದ್ದರು. ಅಲ್ಲಿಂದ ವರ್ಷಾ ಟ್ರಾವೆಲ್ಸ್ ಬಳಿಗೆ ತೆರಳಿದ್ದರು. ಅಲ್ಲಿ ಕ್ಲೀನರ್‌ನೊಂದಿಗೆ ಜಗಳವಾಗಿತ್ತು. ನಂತರ, ಟ್ರಾವೆಲ್ಸ್ ಮಾಲೀಕ ಜಗಳ ಬಿಡಿಸಿ ಮನೆಗೆ ತೆರಳಿದ್ದರು. ಮತ್ತೆ ಅಲ್ಲಿಗೆ ಬಂದು ಕ್ಲೀನರ್‌ನೊಂದಿಗೆ ಜಗಳ ಮಾಡುವಾಗ ಕಚೇರಿಯಲ್ಲಿದ್ದ ರೋಹಿತ್ ಎಂಬಾತ ಕಬ್ಬಿಣದ ರಾಡಿನಿಂದ ಮುರಳಿ ಮತ್ತು ಮನೋಹರ್ ಮೇಲೆ ಹಲ್ಲೆ ಮಾಡಿದ್ದ. ಗಾಯಗೊಂಡಿದ್ದ ಮುರಳಿಯನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಅವರು ಮಂಗಳವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

₹11.50 ಲಕ್ಷದ ಮೊಬೈಲ್ ಜಪ್ತಿ

ಬೆಂಗಳೂರು: ಮೊಬೈಲ್ ಸುಲಿಗೆ ಮಾಡುತ್ತಿದ್ದ ಮೂವರನ್ನು ಬಂಧಿಸಿ ₹11.50 ಲಕ್ಷ ಮೌಲ್ಯದ ಮೊಬೈಲ್, ಚಿನ್ನದ ಸರ ಹಾಗೂ ದ್ವಿಚಕ್ರ ವಾಹನವನ್ನು ಬಸವನಗುಡಿ ಠಾಣೆ ಪೊಲೀಸರು ವಶ ಪಡಿಸಿಕೊಂಡಿದ್ದಾರೆ.

ಆರೋಪಿಗಳು ದ್ವಿಚಕ್ರ ವಾಹನ ಕಳವು, ಚಿನ್ನದ ಸರ ಸುಲಿಗೆ ಮಾಡುತ್ತಿದ್ದರು. ಬಂಧಿತರಿಂದ ವಿವಿಧ ಕಂಪನಿಯ 51 ಮೊಬೈಲ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಆಹಾರ ಅರಸಿ ನಾಡಿಗೆ ಬಂದ ಕಾಡಾನೆ ಹಿಂಡು

ಪ್ರಜಾವಾಣಿ ವಾರ್ತೆ

ಆನೇಕಲ್: ಆಹಾರ ಅರಸಿ ಬಂದು ಮಂಗಳವಾರ ಆನೆಕಲ್ ಬಳಿಯ ಗ್ರಾಮಗಳ ಬಳಿ ಬೀಡು ಬಿಟ್ಟಿದ್ದ ಕಾಡಾನೆಗಳ ಹಿಂಡನ್ನು ಅರಣ್ಯ ಇಲಾಖೆ ಸಿಬ್ಬಂದಿ, ಜನರ ನೆರವಿನೊಂದಿಗೆ ಕಾಡಿಗೆ ಅಟ್ಟಿದ್ದಾರೆ.

ಸೋಮವಾರ ರಾತ್ರಿಯೇ ಆಹಾರ ಅರಸಿ ಐದು ಕಾಡಾನೆಗಳ ಹಿಂಡು ವಣಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೋಲೂರು, ವಣಕನಹಳ್ಳಿ, ಮೆಣಸಿಗನಹಳ್ಳಿ ಗ್ರಾಮಗಳ ಬಳಿ ಮೊಕ್ಕಾಂ ಹೂಡಿದ್ದವು.

ತಮಿಳುನಾಡಿನ ಹುಚ್ಚನಹಳ್ಳಿಯ ಮೂಲಕ ವಣಕನಹಳ್ಳಿ ಗ್ರಾಮ ಪಂಚಾಯಿತಿಯ ಮೆಣಸಿಗನಹಳ್ಳಿಯನ್ನು ಹಾದು ಸೋಲೂರಿನ ಕೆರೆ ಮತ್ತು ನೀಲಗಿರಿ ತೋಪುಗಳಲ್ಲಿ ಬೀಡು ಬಿಟ್ಟಿದ್ದ ಈ ಹಿಂಡು ಬೆಳಗಾದರೂ ಕಾಡಿನತ್ತ ಹಿಂತಿರುಗಲಿಲ್ಲ.ಮೂರು ಸಲಗ, ಒಂದು ಹೆಣ್ಣಾನೆ ಮತ್ತು ಮರಿ ಸೇರಿದಂತೆ ಒಟ್ಟು ಐದು ಆನೆಗಳು ಈ ಹಿಂಡಿನಲ್ಲಿದ್ದವು.

ಆನೆಗಳಿರುವ ಮಾಹಿತಿಯನ್ನು ಅರಣ್ಯ ಇಲಾಖೆಗೆ ಸಾರ್ವಜನಿಕರು ತಿಳಿಸಿದ ನಂತರ ಅರಣ್ಯ ಇಲಾಖೆಯ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಪಟಾಕಿ ಸಿಡಿಸಿ ಆನೆಗಳನ್ನು ಓಡಿಸುವ ಪ್ರಯತ್ನ ನಡೆಸಿದರು.ಇದೇ ಮಾರ್ಗದಲ್ಲಿ ಆನೆಗಳು ಹಲವು ಬಾರಿ ಅತ್ತಿಂದಿತ್ತ ಓಡಾಡಿದವು. ಜನರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ ಆನೆಗಳು ವಣಕನಹಳ್ಳಿ ಮತ್ತು ಸೋಲೂರು ಕೆರೆಯ ನಡುವೆ ಓಡಾಟ ನಡೆಸಿದವು.

ಸಂಜೆ ಏಳು ಗಂಟೆ ವೇಳೆ ರಸ್ತೆ ದಾಟಿಸಿ ತಮಿಳುನಾಡಿನ ಕಾಡಿನತ್ತ ಹಿಂಡನ್ನು ಮರಳಿ ಕಾಡಿಗೆ ಓಡಿಸುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಯಶಸ್ವಿಯಾದರು.

ಆನೆಗಳು ಓಡಾಟದಿಂದ ನೀಲಗಿರಿ ತೋಪಿನಲ್ಲಿ ಹಲವಾರು ಮರಗಳು ಉರುಳಿ ಬಿದ್ದಿವೆ. ಆದರೆ, ಜಮೀನಿನಲ್ಲಿದ್ದ ಬೆಳೆ ಹಾನಿ ಮಾಡಿಲ್ಲ ಎಂದು ಮೂಲಗಳು ತಿಳಿಸಿವೆ.

ವಲಯ ಅರಣ್ಯಾಧಿಕಾರಿ ಶಿವರಾತ್ರೀಶ್ವರ ಸ್ವಾಮಿ, ಉಪ ವಲಯ ಅರಣ್ಯಾಧಿಕಾರಿ ಪ್ರಶಾಂತ್, ಗಸ್ತು ಅರಣ್ಯ ಪಾಲಕ ಟಿ.ವೈ.ಜನಗೇರಿ, ಮುನಿಯ ನಾಯಕ್ ಮತ್ತಿತ್ತರ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಕೆ.ಆರ್.ಪುರ: ಮೆಟ್ರೊ ನಿಲ್ದಾಣ ತಲುಪಲು ಹರಸಾಹಸ

ದೊರಕದ ಮೆಟ್ರೊ ರೈಲು ಸೌಲಭ್ಯ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಮಹದೇವಪುರ ಹಾಗೂ ಕೆ.ಆರ್.ಪುರ ಕ್ಷೇತ್ರದ ಸುತ್ತಮುತ್ತಲಿನ ಸಂಚಾರ ದಟ್ಟಣೆ ನಿವಾರಿಸುವ ಉದ್ದೇಶದಿಂದ ಆರಂಭವಾದ ಮೆಟ್ರೊ ರೈಲು ಸೇವೆ ಕೆ.ಆರ್.ಪುರ ಭಾಗದ ಜನರಿಗೆ ದೊರೆಯುತ್ತಿಲ್ಲ.

ಬಹುಬೇಡಿಕೆಯ ಮಾರ್ಗವಾಗಿರುವ ಕೆ.ಆರ್.ಪುರ- ವೈಟ್ ಫೀಲ್ಡ್ (ಕಾಡುಗೋಡಿ) ನೇರಳೆ ಮಾರ್ಗವನ್ನು ಕೆಲ ತಿಂಗಳುಗಳ ಹಿಂದೆ ಪ್ರಧಾನಿ ಉದ್ಘಾಟಿಸಿದ್ದರು.

ಹಳೆ ಮದ್ರಾಸ್ ರಸ್ತೆಯಲ್ಲಿ ಉಂಟಾಗುತ್ತಿದ್ದ ಸಂಚಾರ ದಟ್ಟಣೆಗೆ ಪರಿಹಾರವಾಗಿ ಮೆಟ್ರೊ ಸೇವೆ ವರದಾನವಾಗಿದೆ. ಆದರೆ, ಕೆ.ಆರ್.ಪುರ, ಟಿ.ಸಿ.ಪಾಳ್ಯ, ರಾಮಮೂರ್ತಿನಗರ, ದೇವಸಂದ್ರ, ಮೇಡಿಹಳ್ಳಿ, ವಿಜಿನಾಪುರ ಭಾಗದ ಜನರು ಮೆಟ್ರೊ ನಿಲ್ದಾಣ ತಲುಪಲು ಹರಸಾಹಸ ಪಡಬೇಕಿದೆ.

ವೈಟ್‌ಫೀಲ್ಡ್ ಕಡೆ ತೆರಳುವ ಮೆಟ್ರೊಗೆ ತೆರಳಲು ಟಿನ್ ಫ್ಯಾಕ್ಟರಿ ಬಳಿಯಿಂದ ಕೆ.ಆರ್.ಪುರ ರೈಲು ನಿಲ್ದಾಣ ಮೂಲಕ ಮೆಟ್ರೊ ನಿಲ್ದಾಣಕ್ಕೆ ತಲುಪಬೇಕು. ಕೆ.ಆರ್.ಪುರದಿಂದ ಮೆಟ್ರೊ ನಿಲ್ದಾಣಕ್ಕೆ ತಲುಪಲು ಪರ್ಯಾಯವಾಗಿ ಕನಿಷ್ಠ ಮೂವತ್ತು ನಿಮಿಷ ಹಿಡಿಯುತ್ತದೆ.

ಕೆ.ಆರ್.ಪುರದಿಂದ ಮೆಟ್ರೊ ನಿಲ್ದಾಣಕ್ಕೆ ಹೋಗಲು ಐಟಿಐ ಬಳಿಯ ತೂಗುಸೇತುವೆ ಮೂಲಕ ಬಸ್‌ನಲ್ಲಿ ತೆರಳಿ ಟಿನ್ ಫ್ಯಾಕ್ಟರಿ ಮೂಲಕ ತೆರಳಿದರೆ ಮೆಟ್ರೊ ನಿಲ್ದಾಣ ತಲುಪಲು ಸುತ್ತುವರಿದು ಎರಡು ಕಿ.ಮೀ ಸಂಚಾರ ಮಾಡಬೇಕಿದೆ. ಇನ್ನು ಐಟಿಐನ ರೈಲ್ವೆ ಕೆಳಸೇತುವೆ ಬಳಿಯಿಂದ ತಲುಪಲು ಪ್ರತಿದಿನ ಬೆಳಿಗ್ಗೆ ಮತ್ತು ಸಾಯಂಕಾಲ ವೇಳೆ ಒಂದು ಕಿಮೀ ಹೆಚ್ಚು ಸಂಚಾರ ದಟ್ಟಣೆ ಇರುತ್ತದೆ.

ಕೆ.ಆರ್.ಪುರ ಸುತ್ತಮುತ್ತಲಿನ ಪ್ರದೇಶಗಳಿಂದ ಫ್ಯಾಕ್ಟರಿ ಬಳಿ ಇರುವ ಮೆಟ್ರೊ ನಿಲ್ದಾಣ ತಲುಪಲು ಕೆ.ಆರ್.ಪುರ ಭಾಗದ ಜನರು ತೂಗು ಸೇತುವೆ ಅಥವಾ ಐಟಿಐನ ರೈಲ್ವೆ ಕೆಳಸೇತುವೆ ಅನುಸರಿಸಬೇಕು. ರೈಲ್ವೆ ಕೆಳಸೇತುವೆಯಿಂದ ತೆರಳಿದರೆ ಇಲ್ಲಿ ಪ್ರತಿನಿತ್ಯ ಸಂಚಾರ ದಟ್ಟಣೆ ಹಾಗೂ ತೂಗು ಸೇತುವೆ ಮೂಲಕ ತೆರಳಿದರೆ ಎರಡು ಕಿಮೀ ದೂರ ಸಾಗಬೇಕು ಎಂದು ಕೆ.ಆರ್.ಪುರದ ನಿವಾಸಿ ಕೆ.ಪಿ.ಕೃಷ್ಣ ಹೇಳುತ್ತಾರೆ.

'ತೂಗು ಸೇತುವೆ ಮೂಲಕ ಸಂಚಾರ ಮಾಡಲು ಬಸ್ ಹಿಡಿಯಬೇಕು. ಜತೆಗೆ, ಮೆಟ್ರೊ ನಿಲ್ದಾಣ ತಲುಪಲು ಎರಡು ಕಿಮೀ ದೂರದ ಸಂಚಾರವೂ ಸಾಹಸಮಯವಾಗಿದೆ. ತೂಗು ಸೇತುವೆ ಪಕ್ಕದ ಕೆ.ಆರ್.ಪುರ ರೈಲ್ವೆ ನಿಲ್ದಾಣ ಬಳಿಯ ಐಟಿಐ ಮೈದಾನದ ಜಾಗದಲ್ಲಿ ಮೆಟ್ರೊ ನಿಲ್ದಾಣಕ್ಕೆ ಸಂಪರ್ಕ ಸೇತುವೆಯಾಗಿ ಪಾದಚಾರಿ ಮೇಲ್ಸೇತುವೆ ನಿರ್ಮಿಸಿದರೆ ಜನರು ಇಲ್ಲಿಂದ ರಸ್ತೆ ದಾಟಲು ಸುಗಮವಾಗುತ್ತದೆ. ಇಲ್ಲಿಯೇ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಿದರೆ ಸಾರ್ವಜನಿಕರಿಗೆ ಉತ್ತಮ' ಎಂದು ಅವರು ಹೇಳುತ್ತಾರೆ.

'ವೈಟ್ ಫೀಲ್ಡ್ ಕಡೆಗೆ ತೆರಳಲು ನಿತ್ಯ ಸಂಚಾರ ದುಸ್ತರವಾಗಿದೆ. ಐಟಿಐ ಮೈದಾನವಿರುವ ಪ್ರದೇಶದಲ್ಲಿ ಮೆಟ್ರೊ ನಿಲ್ದಾಣಕ್ಕೆ ಪಾದಚಾರಿ ಮಾರ್ಗ ನಿರ್ಮಾಣವಾದರೆ ರಸ್ತೆ ದಾಟಲು ಅನುಕೂಲವಾಗುತ್ತದೆ' ಎಂದು ಪ್ರಯಾಣಿಕ ಶಿವಕುಮಾರ್ ಸಂಗನ್ ಅವರು ತಿಳಿಸಿದರು.



ಕೆ.ಆರ್.ಪುರ ಮೆಟ್ರೊ ನಿಲ್ದಾಣ


ಕೆ.ಪಿ.ಕೃಷ್ಣ


ಶಿವಕುಮಾರ್ ಸಂಗನ್

'ಜಾತಿ ಗಣತಿ ವರದಿ ಅಸಮರ್ಪಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್. ಕಾಂತರಾಜ ಆಯೋಗ ಸಿದ್ಧಪಡಿಸಿರುವ ಜಾತಿ ಗಣತಿಯ ಅಸಮರ್ಪಕ ಮತ್ತು ಅವೈಜ್ಞಾನಿಕ ವರದಿಯನ್ನು ರಾಜ್ಯ ಸರ್ಕಾರ ಅಂಗೀಕರಿಸಬಾರದು. ಆರ್ಥಿಕ ದುರ್ಬಲ ವರ್ಗಗಳ ಮೀಸಲಾತಿಯನ್ನು (ಇಡಬ್ಲ್ಯುಎಸ್) ಬ್ರಾಹ್ಮಣರಿಗೆ ಅನ್ವಯಿಸುವಂತೆ ಕೂಡಲೇ ಜಾರಿ ಮಾಡಬೇಕು' ಎಂದು ವಿಶ್ವ ವಿಪ್ರತ್ರಯೀ ಪರಿಷತ್ ಆಗ್ರಹಿಸಿದೆ.

ಈ ಸಂಬಂಧ ಪರಿಷತ್ ಇದೇ 16ರಂದು ಬೆಳಿಗ್ಗೆ 11 ಗಂಟೆಗೆ ಶೇಷಾದ್ರಿ ರಸ್ತೆಯಲ್ಲಿರುವ ಬಬ್ಬೂರುಕಮ್ಮೆ ಸೇವಾ ಸಮಿತಿ ಸಭಾ ಭವನದಲ್ಲಿ ಬೃಹತ್ ಸಭೆ ಆಯೋಜಿಸಿದೆ. ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ಅವರ ನೇತೃತ್ವದಲ್ಲಿ ಈ ಸಭೆ ನಡೆಯಲಿದೆ.

'ಆಯೋಗವು ಸರ್ಕಾರಕ್ಕೆ ಸಲ್ಲಿಸುವ ವರದಿಯಲ್ಲಿ ಬ್ರಾಹ್ಮಣ ಎಂಬ ಶಿರೋನಾಮೆಗೆ ಒಂದು ಕ್ರಮ ಸಂಖ್ಯೆಯನ್ನು ನೀಡಿ, ಎಲ್ಲಾ ಬ್ರಾಹ್ಮಣ ಉಪಜಾತಿಗಳನ್ನು ಅದರ ಅಡಿಯಲ್ಲಿ ಪಟ್ಟಿ ಮಾಡಿದರೆ ಉಪಯುಕ್ತವಾಗುತ್ತದೆ. ಕಾಂತರಾಜ ಆಯೋಗವು 2015ರಿಂದ 2018ರವರೆಗೆ ನಡೆಸಿದ ಜಾತಿ ಗಣತಿಯ ವರದಿಯನ್ನು ರಾಜ್ಯಸರ್ಕಾರ ತರಾತುರಿಯಲ್ಲಿ ಅಂಗೀಕರಿಸುವ ಎಲ್ಲಾ ಸಾಧ್ಯತೆಗಳು ಕಂಡುಬರುತ್ತಿದೆ. ಆಯೋಗವು ಸಿದ್ಧಪಡಿಸಿರುವ ಜಾತಿ ಉಪಜಾತಿಗಳ ಅನಧಿಕೃತ ಪಟ್ಟಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬ್ರಾಹ್ಮಣ ಸಮುದಾಯದ 43 ಉಪಜಾತಿಗಳ ಅನಧಿಕೃತ ಪಟ್ಟಿಯನ್ನು ಪರಿಶೀಲಿಸಿದಾಗ ಬ್ರಾಹ್ಮಣರ ಉಪಜಾತಿಗಳನ್ನು ಬ್ರಾಹ್ಮಣರಿಂದಲೇ ಪ್ರತ್ಯೇಕಿಸಿ, ಬ್ರಾಹ್ಮಣರ ಜನಸಂಖ್ಯೆ ಕಡಿಮೆಯಿದೆ ಎಂದು ಚಿತ್ರಿಸುವ ಷಡ್ಯಂತ್ರ ಮಾಡಲಾಗಿದೆ' ಎಂದು ಪರಿಷತ್ ಅಧ್ಯಕ್ಷ ರಘುನಾಥ್ ಎಸ್. ಆರೋಪಿಸಿದ್ದಾರೆ.

'ಕಾಂತರಾಜ ಆಯೋಗ ಸಿದ್ಧಪಡಿಸಿರುವ ಅಸಮರ್ಪಕ ವರದಿಯನ್ನು ಅಂಗೀಕರಿಸಿದರೆ ಕೇಂದ್ರ ಸರ್ಕಾರ ತಂದಿರುವ ಇಡಬ್ಲ್ಯುಎಸ್ ಮೀಸಲಾತಿಯನ್ನು ಬ್ರಾಹ್ಮಣ ಸಮುದಾಯಕ್ಕೆ ವಂಚಿಸಿದಂತಾಗುತ್ತದೆ. ಆಯೋಗದ ಜಾತಿ ಗಣತಿಯನ್ನು ಮತ್ತೊಮ್ಮೆ ಪರಿಶೀಲಿಸಬೇಕು. ಇಡಬ್ಲ್ಯುಎಸ್ ಮೀಸಲಾತಿಯನ್ನು ಕೂಡಲೇ ಜಾರಿ ಮಾಡಬೇಕು' ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.


ಬಿಡಿಎ ಅಧಿಕಾರಿಗಳ ದೌರ್ಜನ್ಯ ಖಂಡಿಸಿ ರೈತರು ಬಿಡಿಎ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಪುನರ್ವಸತಿಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು(ಬಿಡಿಎ) ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ ರೈತರ ಜಮೀನು ಸ್ವಾಧೀನ ಪಡಿಸಿಕೊಂಡು ಈಗ ಅಧಿಕಾರಿಗಳು ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಆರೋಪಿಸಿ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ರೈತರು ಈಚೆಗೆ ಬಿಡಿಎ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಯೋಜನೆಗಾಗಿ ರೈತರು ಜಮೀನು ಕಳೆದುಕೊಂಡಿದ್ದಾರೆ. ಜೀವನ ನಿರ್ವಹಣೆಯೂ ಕಷ್ಟವಾಗಿದೆ. ಮಕ್ಕಳ ವಿದ್ಯಾಭ್ಯಾಸ, ಮನೆಯಲ್ಲಿರುವ ವೃದ್ಧರ ಆರೋಗ್ಯ ತಪಾಸಣೆಗೆ ಆರ್ಥಿಕ ಸಮಸ್ಯೆ ಎದುರಾಗಿದೆ ಎಂದು ದೂರಿದರು.

ವೃದ್ಧರಿಗೆ ಮಾಸಾಶನ ಮಂಜೂರು ಮಾಡಬೇಕು. ಕುರಿ–ಮೇಕೆಗಳಿಗೆ ಮೇವು ಒದಗಿಸಬೇಕು. 2013ರ ಭೂಸ್ವಾಧೀನ ಕಾಯ್ದೆ ಅಡಿ ಭೂಪರಿಹಾರ ನೀಡಬೇಕು ಅಥವಾ ಅಭಿವೃದ್ಧಿ ಪಡಿಸಿದ ಶೇ 60ರಷ್ಟು ಭೂಮಿ ನೀಡಬೇಕು. ಅಲ್ಲದೇ ರೈತರ ಮೇಲೆ ಹೂಡಿರುವ ಪ್ರಕರಣಗಳನ್ನು ವಾಪಸ್ ಪಡೆಯಬೇಕು ಎಂದು ಸಮಿತಿ ಜಿಲ್ಲಾ ಸಂಯೋಜಕ ಎಂ.ರಮೇಶ್ ಆಗ್ರಹಿಸಿದರು.

ಕೃಷಿ ಹಾಗೂ ಹೈನುಗಾರಿಕೆಯನ್ನೇ ನಂಬಿದ್ದ ರೈತರು ಈಗ ಬೀದಿಗೆ ಬಿದ್ದಿದ್ದಾರೆ. ಅವರಿಗೆ ಪುನರ್ ವಸತಿ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಶ್ರೀನಿವಾಸ ಕಪ್ಪಣ್ಣ ಅಭಿಮತ

'ಕಲಾ ಕ್ಷೇತ್ರ: ತಾರತಮ್ಯ ತೊಲಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜದ ಸಾಕ್ಷಿಪ್ರಜ್ಞೆಯಾಗಿರುವ ಬರಹಗಾರರು ಮತ್ತು ಕಲಾವಿದರಲ್ಲಿ ಭೇದಭಾವ, ಕಲಾ ಕ್ಷೇತ್ರದಲ್ಲಿರುವ ಮೇಲು–ಕೀಳೆಂಬ ತಾರತಮ್ಯ ತೊಲಗಬೇಕು' ಎಂದು ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಹೇಳಿದರು.

ನಗರದ ನಯನ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಲೇಖಕ ಜಾನ್ ದೇವರಾಜ್ ಅವರ 'ಕಾ ಕಾ ಕು' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಜಾನಪದ ಕಲಾವಿದರನ್ನು ಇನ್ನೊಂದು ವರ್ಗದ ಕಲಾವಿದರನ್ನಾಗಿ ನೋಡುವ ಮೂಲಕ ಅವರನ್ನು ಕಡೆಗಣಿಸಲಾಗುತ್ತಿದೆ. ಕಲಾವಿದರಲ್ಲಿ ಕಪ್ಪು ಕಣ್ಣು (ಕಾಗೆ), ಕೆಂಪು ಕಣ್ಣಿನವರೆಂಬ (ಕೋಗಿಲೆ) ತಾರತಮ್ಯವಿದ್ದು, ಇದನ್ನು ಹೋಗಲಾಡಿಸುವ ಕೆಲಸವಾಗಬೇಕು' ಎಂದು ಅವರು ತಿಳಿಸಿದರು.

ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಅವಳು, 'ಕಲಾವಿದ ಜಾನ್ ದೇವರಾಜ್ ಅವರದ್ದು ಬಹುಮುಖ ಪ್ರತಿಭೆ. ಅವರ ಕಲಾಕೃತಿಗಳಲ್ಲಿ ಅಮೂರ್ತತೆ ಅಡಗಿರುತ್ತದೆ. ವಿಲಕ್ಷಣತೆಯ ಭವ್ಯತೆಯನ್ನು ಒಳಗೊಂಡು ನಾನಾ ಅರ್ಥಗಳನ್ನು ಸಂಶೋಧಿಸಲು ಸಹಾಯಕವಾಗುತ್ತದೆ. ಸರ್ಕಾರ ಇಂತಹ ಕಲಾವಿದರನ್ನು ಗುರುತಿಸಬೇಕು' ಎಂದರು.

ಪ್ರೊ. ಸಿ. ಬಸವಲಿಂಗಯ್ಯ, ಲೇಖಕ ಜಾನ್ ದೇವರಾಜ್, ಶ್ವೇತಾ ಮನಪಾಡಿ, ಹಿಮಕರ್ ಎ.ಕೆ., ಕಿಶೋರ್, ರಿತೋಪ್ರಿಯೋ ಸಾಹಾ ಅವರು ಇದ್ದರು.


ನಯನ ಸಭಾಂಗಣದಲ್ಲಿ ಇತ್ತೀಚೆಗೆ ಜಾನ್ ದೇವರಾಜ್ ಅವರ 'ಕಾ ಕಾ ಕು' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. (ಎಡದಿಂದ) ಜಾನ್ ದೇವರಾಜ್, ಶ್ವೇತಾ ಮನಪಾಡಿ, ಬೈರಮಂಗಲ ರಾಮೇಗೌಡ, ಶ್ರೀನಿವಾಸ್ ಜಿ.ಕಪ್ಪಣ್ಣ ಮತ್ತು ಸಿ.ಬಸವಲಿಂಗಯ್ಯ ಇದ್ದಾರೆ —ಪ್ರಜಾವಾಣಿ ಚಿತ್ರ

ರೌಡಿ ಶೀಟರ್ ಹತ್ಯೆ

ಬೆಂಗಳೂರು: ಡಿಜೆ ಹಳ್ಳಿಯ ಕೆಎಚ್‌ಬಿ ಮುಖ್ಯರಸ್ತೆಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ, ರೌಡಿ ಶೀಟರ್ ಕಪಿಲ್‌ನನ್ನು ದುಷ್ಕರ್ಮಿಗಳು ಮಂಗಳವಾರ ರಾತ್ರಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ಎರಡು ಬೈಕ್‌ನಲ್ಲಿ ಬಂದ ನಾಲ್ವರು, ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ಕಪಿಲ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಡಿಸಿಪಿ ಭೀಮಾಶಂಕರ್ ಗುಳೇದ್ ಭೇಟಿ ನೀಡಿದ್ದರು.

'ಏರೋನಿಕ್ಸ್' ಎಂ.ಡಿ, ಸಿಇಒ ಕೊಲೆ

ಒಂದನೇ ಪುಟದಿಂದ...

ಏರೋನಿಕ್ಸ್ ಕಂಪನಿಯ ಉದ್ಯೋಗಿಯಾಗಿದ್ದ ಫೆಲಿಕ್ಸ್ ಕೆಲವು ತಿಂಗಳ ಹಿಂದೆ ಕೆಲಸ ಬಿಟ್ಟಿದ್ದ. ಏರೋನಿಕ್ಸ್ ಮಾದರಿಯಲ್ಲೇ ಬನ್ನೇರುಘಟ್ಟದ ರಸ್ತೆಯಲ್ಲಿ ಸ್ವಂತ ಕಂಪನಿ ಸ್ಥಾಪಿಸಿದ್ದ. ಈ ಉದ್ಯಮಕ್ಕೆ ಫಣೀಂದ್ರ ಎದುರಾಳಿಯಾಗುವ ಭಯದಿಂದ ಕೊಲೆ ಸಂಚು ರೂಪಿಸಿದ್ದ ಎಂದು ಮೂಲಗಳು ಹೇಳಿವೆ.

ಘಟನಾ ಸ್ಥಳಕ್ಕೆ ಹೆಚ್ಚುವರಿ ಪೊಲೀಸ್ ಕಮಿಷನರ್ ರಮಣ್ ಗುಪ್ತಾ ಹಾಗೂ ಈಶಾನ್ಯ ವಿಭಾಗದ ಡಿಸಿಪಿ ಲಕ್ಷ್ಮಿ ಪ್ರಸಾದ್ ಭೇಟಿ ನೀಡಿದ್ದರು.

ರಾಷ್ಟ್ರೀಯ ಬ್ಯಾಂಕ್‌ಗಳ ಖಾಸಗೀಕರಣಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಉಳಿಯಬೇಕು. ಯಾವ ಕಾರಣಕ್ಕೂ ಖಾಸಗೀಕರಣಕ್ಕೆ ಅವಕಾಶ ನೀಡುವುದಿಲ್ಲ' ಎಂದು ಅಖಿಲ ಭಾರತ ಬ್ಯಾಂಕ್ ಉದ್ಯೋಗಿಗಳ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಎಚ್.ವೆಂಕಟಾಚಲಂ ಹೇಳಿದರು.

ಕೆನರಾ ಬ್ಯಾಂಕ್ ಉದ್ಯೋಗಿಗಳ ಸಂಘಟನೆಯು, ನಗರದಲ್ಲಿ ಆಯೋಜಿಸಿದ್ದ 10ನೇ ರಾಜ್ಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಜನರ ಹಣ, ಜನರ ಬಳಿಯೇ ಸುರಕ್ಷಿತವಾಗಿ ಇರಬೇಕಾದರೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಇರಬೇಕು. ಜನರ ಹಣ ಜನರ ಕಲ್ಯಾಣಕ್ಕೆ ಬಳಕೆಯಾಗಬೇಕೇ ಹೊರತು ಬಂಡವಾಳಶಾಹಿಗಳ ಹಾಗೂ ಕಂಪನಿಗಳ ಏಳಿಗೆಗೆ ವಿನಿಯೋಗ ಆಗಬಾರದು' ಎಂದು ಎಚ್ಚರಿಸಿದರು.

'ಜನಧನ್ ಯೋಜನೆ'ಯ ಶೇ 99 ಖಾತೆಗಳು ಸಾರ್ವಜನಿಕ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ತೆರೆದಿವೆ. ಇಡೀ ದೇಶದಲ್ಲಿ ಕೇವಲ ಶೇ 7ರಷ್ಟು ಮಾತ್ರ ಸಾಲ ಮಹಿಳೆಯರಿಗೆ ನೀಡಲಾಗಿದೆ. ಖಾಸಗಿ ಬ್ಯಾಂಕ್‌ಗಳು ರೈತರಿಗೆ ಸಾಲ ನೀಡುವುದಿಲ್ಲ' ಎಂದರು. 'ಖಾಸಗಿ ಬ್ಯಾಂಕ್‌ಗಳಲ್ಲಿ ದುರುಪಯೋಗ ಪ್ರಕರಣಗಳು ಹೆಚ್ಚಿವೆ. ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಬ್ಯಾಂಕ್‌ಗಳ ಖಾಸಗೀಕರಣಕ್ಕೆ ಹೆಚ್ಚಿನ ಉತ್ಸಾಹ ತೋರುತ್ತಿವೆ. ಇದಕ್ಕೆ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದ್ದರಿಂದ ಸದ್ಯಕ್ಕೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಉಳಿದುಕೊಂಡಿವೆ' ಎಂದರು.

ಕೆನರಾ ಬ್ಯಾಂಕ್ ಉದ್ಯೋಗಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ.ಶ್ರೀಕೃಷ್ಣ, 'ಒಕ್ಕೂಟವನ್ನು ಬಲಿಷ್ಠಗೊಳಿಸಬೇಕು' ಎಂದು ಹೇಳಿದರು.

ಒಕ್ಕೂಟದ ವಿಜಯ್ ಭಾಸ್ಕರ್, ಕೆ.ಜಿ. ಪಣೀಂದ್ರ, ಅನಿರುದ್ಧ್ ಕುಮಾರ್, ಪ್ರಶಾಂತ್ ಕುಮಾರ್, ಶ್ರೀನಿವಾಸನ್, ಬಿ.ದೇವದಾಸ್ ರಾವ್ ಹಾಗೂ ರಾಜ್ಯ ಸಹ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ ಇದ್ದರು.



ಒಳ್ಳೆಯ ಬ್ಯಾಕ್ಟೀರಿಯಾಗಳೂ ಇವೆ!

ಅಮೃತೇಶ್ವರಿ ಬಿ.

ಕರುಳು, ಕೆಟ್ಟ ಬ್ಯಾಕ್ಟೀರಿಯಾಗಳು ಮತ್ತು ಒಳ್ಳೆಯ ಬ್ಯಾಕ್ಟೀರಿಯಾಗಳು – ಇವು ನಾವು ವಿದ್ಯಾರ್ಥಿಗಳಾಗಿದ್ದಾಗಿನ ಮಾತು. ಆಗ ನಮಗೆ ಪರೀಕ್ಷೆಯ ದಿನ ಹಸಿವಾಗುತ್ತಿರಲಿಲ್ಲ. ಈಗಲೂ ಯಾವುದಾದರೂ ಸಂದರ್ಶನಕ್ಕೆ ಹೋಗುವ ದಿನ ಅದು ಮುಗಿಯುವವರೆಗೂ ಹಸಿವೆಯೇ ತೋರುವುದಿಲ್ಲ. ಅಥವಾ ಇನ್ನಾವುದೇ ಒತ್ತಡಗಳಿದ್ದರೂ ನಮಗೆ ಊಟ ಬೇಕೆನಿಸುವುದೇ ಇಲ್ಲ. ಇದು ಏಕಿರಬಹುದು? ಇದಕ್ಕೆ ಕಾರಣ ನಮ್ಮ ಮೆದುಳು ಹಾಗೂ ಕರುಳಿಗೂ ನೇರ ಸಂಪರ್ಕವಿರುವುದು.

ಜೀರ್ಣಾಂಗವ್ಯೂಹದ ಸಂದೇಶವು ವೇಗಸ್ ನರದ ಮೂಲಕ ಮೆದುಳಿಗೆ ತಲುಪುತ್ತದೆ. ಆಗ ಮೆದುಳು ಸರ್ವೈವಲ್ ಮೋಡ್‌ಗೆ ಹೋಗುತ್ತದೆ; ಹಸಿವನ್ನು ಮರೆಸುವಂತಹ ಹಾರ್ಮೋನುಗಳನ್ನು ಬಿಡುಗಡೆಗೊಳಿಸುತ್ತದೆ. ಇದೊಂದು ಬೈ-ಡೈರೆಕ್ಷನಲ್, ಅರ್ಥಾತ್ ದ್ವಿಮುಖವಾಗಿ ಕೆಲಸ ಮಾಡುವ ವಿಧಾನ. ಇದನ್ನೇ 'ಕರುಳು-ಮೆದುಳಿನ ಅಕ್ಷ' ಅಥವಾ 'ಗಟ್-ಬ್ರೇನ್ ಆಕ್ಸಿಸ್' ಎನ್ನುವುದು. ಕರುಳಿನಲ್ಲಿ ಒಳ್ಳೆಯ ಬ್ಯಾಕ್ಟೀರಿಯಾಗಳನ್ನು ಸರಿಯಾಗಿ ನಿರ್ವಹಿಸಿದ್ದೇ ಆದಲ್ಲಿ ಮೆದುಳು ಈ ಒತ್ತಡವನ್ನು ನಿರ್ವಹಿಸಬಲ್ಲದಂತೆ. ಆಗ ಯಾವುದೇ ಒತ್ತಡದಲ್ಲೂ ನಮ್ಮ ದೇಹದ ಕಾರ್ಯಗಳೂ ತನ್ನಷ್ಟಕ್ಕೆ ತಾನೇ ಏರುಪೇರಿಲ್ಲದೇ ನಡೆದುಕೊಂಡು ಹೋಗಬಲ್ಲವು. ಹಿಂದೆ ಕೆಲಸದ ಮೇಲೆ ಹೊರಗಡೆ ಹೋಗುವವರಿಗೆ ಅಜ್ಜಿ ಮೊಸರು ಮತ್ತೆ ಸಕ್ಕರೆಯನ್ನು ತಿನ್ನಿಸಿ ಕಳುಹಿಸುತ್ತಿದ್ದರಂತೆ. ಮೊಸರಿನಲ್ಲಿ ಪ್ರೋಬಯಾಟಿಕ್ಸ್ ಅಥವಾ ಒಳ್ಳೆಯ ಬ್ಯಾಕ್ಟೀರಿಯಾಗಳು ಇರುತ್ತವೆ ಎಂದು ಅಜ್ಜಿ ತಿಳಿದಿದ್ದಳೋ ಅಥವಾ ಹಾಗೇ ಸುಮ್ಮನೆ ಸಿಹಿ ತಿನ್ನಿಸಿ ಕಳುಹಿಸುತ್ತಿದ್ದಳೋ ಗೊತ್ತಿಲ್ಲ.

ಇನ್ನೂ ಅನಾರೋಗ್ಯಕ್ಕೆ ತುತ್ತಾದಾಗ ವೈದ್ಯರು ನೀಡುವ ಆ್ಯಂಟಿಬಯಾಟಿಕ್‌ಗಳು ಹಾಗೂ ಅವುಗಳ ಪರಿಣಾಮದ ಬಗ್ಗೆ ನಿಮಗೆ ತಿಳಿದಿರಬೇಕು. ರೋಗವೇನೋ ಗುಣವಾಗಿಬಿಡುತ್ತದೆ. ಆದರೆ ನಿಃಶಕ್ತಿ ಇನ್ನಷ್ಟು ದಿನಗಳವರೆಗೆ ಬಾಧಿಸಲಿರುತ್ತದೆ. ಪಾಪ ಈ ಆ್ಯಂಟಿಬಯಾಟಿಕ್‌ಗಳು ಪಕ್ಷಪಾತವಿಲ್ಲದೆ ಕಾಯಿಲೆಗಳನ್ನು ತಂದೊಡ್ಡಿದ ಕೆಟ್ಟ ಬ್ಯಾಕ್ಟೀರಿಯಾಗಳನ್ನಷ್ಟೇ ಕೊಲ್ಲದೆ, ನಮಗೆ ಅವಶ್ಯವಿರುವ ಒಳ್ಳೆಯ ಬ್ಯಾಕ್ಟೀರಿಯಾಗಳನ್ನೂ ಕೊಂದುಬಿಡುತ್ತವೆ. ಹಾಗಾಗಿ ನಮ್ಮ ನಿತ್ಯ ಆಹಾರದಲ್ಲಿ ಮೊಸರಿನಂತಹ ಪ್ರೋಬಯೋಟಿಕ್ ಆಹಾರಗಳನ್ನು ಸೇವಿಸುವುದು ಮುಖ್ಯ. ಕರುಳಿನಲ್ಲಿರುವ ಒಳ್ಳೆಯ ಬ್ಯಾಕ್ಟೀರಿಯಾಗಳು ನಮ್ಮ ದೇಹದ ಬಹುತೇಕ ಕಾರ್ಯಗಳನ್ನು ನಿರ್ವಹಿಸುತ್ತವೆ ಮತ್ತು ನಿರ್ದೇಶಿಸುತ್ತವೆ. ಕರುಳಿನಲ್ಲಿರುವ ನಾರಿನಂಶವನ್ನು ಹುದುಗಿಸಿ ನಮ್ಮ ದೇಹಕ್ಕೆ ಬೇಕಾದ ಅಗತ್ಯ ಸೆಕೆಂಡರಿ ಮೆಟಬೊಲೈಟ್‌ಗಳಾದ ಅಸಿಟೇಟು, ಪ್ರೊಪಿಯೋನೇಟು, ಬ್ಯುಟರೈಟು ಹಾಗೂ ಸಣ್ಣ ಸರಪಳಿ ಕೊಬ್ಬಿನಾಮ್ಲಗಳು ಮುಂತಾದವುಗಳನ್ನು ಉತ್ಪಾದಿಸುತ್ತವೆ. ಹೆಚ್ಚಿನ ನಾವು ತಿಂದ ಆಹಾರ ಮತ್ತು ನಾರಿನ ಪದಾರ್ಥಗಳೆಲ್ಲವೂ ಪಚನಗೊಳ್ಳುವುದು ಕರುಳಿನಲ್ಲಿಯೇ; ಅದುವೂ ಈ ಬ್ಯಾಕ್ಟೀರಿಯಾಗಳಿಂದಲೇ. ನಂತರ ಅವೆಲ್ಲಾ ರಕ್ತದ ಮೂಲಕ ಸಾಗಿ ಮೆದುಳನ್ನು ತಲುಪುತ್ತವೆ. ಹೀಗೆ ಕಾರ್ಯ ದ್ವಿಮುಖವಾಗಿ ಸಾಗುತ್ತಿರುತ್ತದೆ.

ಕರುಳಿನ ಬ್ಯಾಕ್ಟೀರಿಯಾಗಳು ಈ ಮೆದುಳು-ಕರುಳಿನ ದ್ವಿಮುಖ ಸಂವಹನದ ಮೂಲಕ ನಮ್ಮ ನಿದ್ರೆಯ ಮೇಲೂ ತಮ್ಮ ಪ್ರಭಾವವನ್ನು ಬೀರುತ್ತವೆ. ಜೀರ್ಣಕ್ರಿಯೆಯಲ್ಲಿ ವ್ಯತ್ಯಾಸವಾದಾಗ ಸರಿಯಾಗಿ ನಿದ್ರೆ ಬಾರದಿರುವುದನ್ನು ನೀವು ಗಮನಿಸಿರಬೇಕು; ಮತ್ತು ಆಗ ಚಯಾಪಚಯ ಕ್ರಿಯೆಗೆ ಸಂಬಂಧಿಸಿದ ಸಮಸ್ಯೆಗಳು, ದೈನಂದಿನ ಚುಟುವಟಿಕೆಗಳಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳುವುದು ಇದೇ ಕಾರಣಕ್ಕಾಗಿ. ಇದನ್ನು 'ಗಟ್-ಸ್ಲೀಪ್ ಆಕ್ಸಿಸ್' ಎನ್ನುತ್ತೇವೆ. ನಾವು ಮಗುವಾಗಿದ್ದಾಗ ದಿನವೆಲ್ಲಾ ನಿದ್ರೆ ಮಾಡುತ್ತಲೇ ಇರುತ್ತೇವೆ. ಅದು ಹೇಗೆ ಎಂದಿರಾ? ಇದು ತಾಯಿಯ ಹಾಲಿನಲ್ಲಿರುವ ಹೆಚ್ಚಿನ ಪ್ರಮಾಣದ 'ಬೈಫಿಡೋಬ್ಯಾಕ್ಟೀರಿಯಾ' ಎನ್ನುವ ಪ್ರೋಬಯಾಟಿಕ್‌ನಿಂದಾಗಿ. ನಾವು ದೊಡ್ಡವರಾಗುತ್ತಿದ್ದಂತೆಯೇ ಪ್ರೋಬಯಾಟಿಕ್‌ನಲ್ಲಿ ವೈವಿಧ್ಯ ಕಂಡು ಬಂದು ಬೈಫಿಡೋಬ್ಯಾಕ್ಟೀರಿಯಾದ ಪ್ರಮಾಣ ಕಡಿಮೆಯಾಗುತ್ತಹೋಗುತ್ತದೆ; ನಿದ್ರೆಯ ಪ್ರಮಾಣವೂ ಇಳಿಯುತ್ತದೆ. ವಯಸ್ಸಾಗುತ್ತಿದ್ದಂತೆಯೇ ನಿದ್ರಿಸುತ್ತಲೇ ಇರಲಾಗುವುದಿಲ್ಲವಲ್ಲ. ಇತರೆ ಕಾರ್ಯಗಳನ್ನು ನಿರ್ವಹಿಸಲು ಅವಶ್ಯವಿರುವ ಇತರೆ ಒಳ್ಳೆಯ ಬ್ಯಾಕ್ಟೀರಿಯಾಗಳು ನಮ್ಮ ದೇಹವ್ಯವಸ್ಥೆಗೆ ಬಂದು ಸೇರತೊಡಗುತ್ತವೆ.

ಕೆಟ್ಟ ಬ್ಯಾಕ್ಟೀರಿಯಾಗಳಿಂದ ತುಂಬಿರುವ ಅಥವಾ ಅನಾರೋಗ್ಯಕರ ಕರುಳು, ಚರ್ಮದ ತೊಂದರೆಗಳನ್ನೂ ತಂದೊಡ್ಡುತ್ತದೆ. ಕೆಲವು ನುರಿತ ವೈದ್ಯರು ನಮ್ಮ ಮುಖದ ಮೇಲಿರುವ ಗುಳ್ಳೆಗಳನ್ನು ನೋಡಿಯೇ ಇದು ಕೆಟ್ಟಿರುವ ಜೀರ್ಣವ್ಯವಸ್ಥೆಯ ಫಲಿತಾಂಶ ಎನ್ನುವುದು ಕೇಳಿದ್ದೇವೆ. ಅರ್ಥಾತ್, ಕರುಳು ನಮ್ಮ ಮುಖದ ಚರ್ಮದ ಜೊತೆಗೂ ಸಂಪರ್ಕ ಹೊಂದಿದೆ. ಇದನ್ನು 'ಗಟ್-ಸ್ಕಿನ್ ಆಕ್ಸಿಸ್' ಎನ್ನುತ್ತೇವೆ. ಕರುಳಿನ ಬ್ಯಾಕ್ಟೀರಿಯಾಗಳ ವ್ಯತ್ಯಾಸದಿಂದ ಉಂಟಾಗುವ ಪ್ರಮುಖ ಚರ್ಮದ ಸಮಸ್ಯೆಗಳೆಂದರೆ ಸೋರಿಯಾಸಿಸ್, ಅಟಾಪ್ಟಿಕ್ ಡರ್ಮಾಟೈಟಿಸ್, ಅಸ್ನೆ ವಲ್ಗ್ಯಾರಿಸ್ ಮುಂತಾದವು. ಹಾಗಾಗಿಯೇ ಕರುಳಿನ ಆರೋಗ್ಯವನ್ನು ಕೆಡಿಸುವ ಕರಿದ ಆಹಾರವನ್ನು ಹೆಚ್ಚಾಗಿ ಸೇವಿಸಕೂಡದು.

ಇದೇ ರೀತಿ ಕರುಳು ಹಾಗೂ ಶ್ವಾಸಕೋಶದ ನಡುವೆ ಇರುವ ನೇರ ಸಂಪರ್ಕವನ್ನು 'ಗಟ್-ಲಂಗ್ ಆಕ್ಸಿಸ್' ಎನ್ನುತ್ತೇವೆ. ಎರಡೂ ಅಂಗಗಳೂ ಬೇರೆ ಬೇರೆ ಕಾರ್ಯಗಳನ್ನು ನಿರ್ವಹಿಸಿದರೂ ಅವುಗಳಲ್ಲಿರುವ ಬ್ಯಾಕ್ಟೀರಿಯಾ, ವೈರಸ್ಸು, ಶಿಲೀಂಧ್ರಗಳು ಒಂದೇ ಬಗೆಯವು. ಕರುಳಿನ ಒಳ್ಳೆಯ ಬ್ಯಾಕ್ಟೀರಿಯಾಗಳು ಉತ್ಪಾದಿಸುವ ಸೆಕೆಂಡರಿ ಮೆಟಬೊಲೈಟುಗಳು ಶ್ವಾಸಕೋಶದ ರೋಗ ನಿರೋಧಕತ್ವವನ್ನೂ ನಿಯಂತ್ರಿಸಬಲ್ಲವಂತೆ.

ಹಾಗೆಯೇ ಬಾಯಿಯ ಆರೋಗ್ಯಕ್ಕೂ ಕರುಳಿನ ಪ್ರೋಬಯಾಟಿಕ್‌ಗಳೇ ಕಾರಣ. ಇದು ಕೂಡ ದ್ವಿಮುಖವಾದ್ದರಿಂದ ಬಾಯಿಯನ್ನು ಆರೋಗ್ಯವಾಗಿಟ್ಟುಕೊಂಡರೆ ಕರುಳಿನಲ್ಲಿಯೂ ಕೇವಲ ಒಳ್ಳೆಯ ಬ್ಯಾಕ್ಟೀರಿಯಾಗಳೇ ಇರುತ್ತವೆ. ನಮ್ಮ ಬಾಯೊಳಗೆ ಸುಮಾರು ಏಳು ನೂರು ರೀತಿಯ ಬ್ಯಾಕ್ಟೀರಿಯಾಗಳಿರುತ್ತವೆಯಂತೆ. ಇವುಗಳಲ್ಲಿ ಆರೋಗ್ಯವನ್ನು ಕಾಪಾಡುವಂತವು ಎಷ್ಟಿವೆಯೋ, ಹಾಳುಮಾಡುವಂತಹವು ಎಷ್ಟಿವೆಯೋ ಬಲ್ಲವರಾರು? ಹಾಗಾಗಿಯೇ ಸೂಕ್ಷ್ಮಾಣುಜೀವಿಗಳನ್ನು ದೇಹದೊಳಕ್ಕೆ ಸೇರಗೊಡದೆ ಕೊಲ್ಲುವ ಗುಣವಿರುವ ಬೇವಿನ ಕಡ್ಡಿಯಲ್ಲಿ ಹಲ್ಲುಜ್ಜುತ್ತಿದ್ದರು ನಮ್ಮ ಪೂರ್ವಜರು.

ಒಂದು ವೇಳೆ ಈ ಒಳ್ಳೆಯ ಹಾಗೂ ಕೆಟ್ಟ ಬ್ಯಾಕ್ಟೀರಿಯಾಗಳ ನಡುವಿನ ಅನುಪಾತದಲ್ಲಿ ಅಸಮತೋಲನ ಉಂಟಾದರೆ ಅದನ್ನೇ 'ಗಟ್ ಡಿಸ್‌ಬಯಾಸಿಸ್' ಎನ್ನುತ್ತೇವೆ. ಅದು ಹೀಗೆ ಮುಂದುವರೆದಾಗಲೇ ಬೊಜ್ಜು, ಹೈಪರ್ ಗ್ಲೈಸೀಮಿಯಾ, ಹೈಪರ್ ಲಿಪಿಡಿಮಿಯಾ, ರಕ್ತದೊತ್ತಡ, ಹೃದಯಸಂಬಂಧಿ ಕಾಯಿಲೆಗಳು, ಸಕ್ಕರೆಕಾಯಿಲೆ; ಜೊತೆಗೆ ಮನೋರೋಗಗಳೂ ಆರಂಭವಾಗುವುದು. ಹಾಗಾಗಿಯೇ ನಮ್ಮ ಕರುಳಿನಲ್ಲಿ ಒಳ್ಳೆಯ ಬ್ಯಾಕ್ಟೀರಿಯಾಗಳನ್ನು ಸರಿಯಾಗಿ ನಿರ್ವಹಿಸುವುದು ಅತ್ಯವಶ್ಯಕ. ಬೈಫಿಡೋಬ್ಯಾಕ್ಟೀರೀಯಂ, ಲ್ಯಾಕ್ಟೋಬ್ಯಾಸಿಲಸ್ ರ್‍ಯಾಮ್ನೋಸಸ್, ಬ್ಯಾಸಿಲಸ್ ಕೊಯಗ್ಯುಲನ್ಸ್, ಲ್ಯಾಕ್ಟೋಬ್ಯಾಸಿಲಸ್ ಪ್ಲಾಂಟ್ಯಾರಂ, ಲ್ಯಾಕ್ಟೋಬ್ಯಾಸಿಲಸ್ ಅಸಿಡೊಫಿಲಸ್ ಇವೇ ಮೊದಲಾದವು ನಮ್ಮ ಕರುಳಿಗೆ ಅವಶ್ಯವಿರುವ ಒಳ್ಳೆಯ ಬ್ಯಾಕ್ಟೀರಿಯಾಗಳು. ಇವು ಕ್ಯಾನ್ಸರ್ ಕೀಮೋಥೆರಪಿ ತೆಗೆದುಕೊಂಡಿರುವ ರೋಗಿಗಳ ದೇಹದಲ್ಲಿ ಬಿಳಿರಕ್ತಕಣಗಳನ್ನು ಉತ್ಪಾದಿಸಲೂ ಸಹಕಾರಿಯಾಗಬಲ್ಲವಂತೆ. ಈ ಬ್ಯಾಕ್ಟೀರಿಯಾಗಳ ಪ್ರಮಾಣವು ಸರಿಯಾಗಿ ನಿರ್ವಹಣೆಯಾಗಬೇಕಾದರೆ ಅವುಗಳಿಗೂ ಆಹಾರದ ಅವಶ್ಯಕತೆಯಿದೆಯಲ್ಲವೇ. ಅದನ್ನು ಪೂರೈಸುವವೇ ಜೀರ್ಣವಾಗದಂತಹ, ಆದರೆ ಆರೋಗ್ಯಕರವೆನಿಸುವ ಹಾಗೂ ಒಳ್ಳೆಯ ಬ್ಯಾಕ್ಟೀರಿಯಾಗಳ ಬೆಳವಣಿಗೆಗೆ ಅನುಕೂಲವಾಗುವ ನಾರಿನ ಪದಾರ್ಥಗಳು. ಅವುಗಳೇ ಪ್ರೀಬಯಾಟಿಕ್ಸ್. ಮತ್ತು ಇವನ್ನು ತಿಂದು ಬೆಳೆಯುವ ಪ್ರೋಬಯೋಟಿಕ್ ಗಳು ದೇಹದ ಇತರೆ ಕಾರ್ಯಗಳನ್ನು ನಿರ್ವಹಿಸುವಂತಹ ಕೆಲವು ಸೆಕೆಂಡರಿ ಮೆಟಬೊಲೈಟುಗಳಾದ ಸಣ್ಣ ಸರಪಳಿ ಕೊಬ್ಬಿನಾಮ್ಲಗಳು, ಅಸಿಟೇಟುಗಳನ್ನು ಬಿಡುಗಡೆ ಮಾಡುತ್ತವೆ. ಇವೇ ಪೋಸ್ಟ್ ಬಯಾಟಿಕ್ಸ್.

ಕರುಳು ನಮ್ಮ ದೇಹದ ಎಲ್ಲಾ ಪ್ರಮುಖ ಅಂಗಗಳೊಂದಿಗೆ ನೇರ ಸಂಪರ್ಕವನ್ನು ಹೊಂದಿದೆ. ಕರುಳಿನಲ್ಲಾಗುವ ವ್ಯತ್ಯಾಸ ಖಂಡಿತವಾಗಿಯೂ ಬೇರೆಲ್ಲಾ ಅಂಗಗಳ ಮೇಲೆ ಪ್ರಭಾವ ಬೀರುತ್ತದೆ. ಮಾನಸಿಕ ಒತ್ತಡ, ಆತಂಕ, ಖಿನ್ನತೆ, ನರಸಂಬಂಧಿ ಕಾಯಿಲೆಗಳನ್ನೂ ತಂದೊಡ್ಡಬಿಡಬಲ್ಲವು. ಇಡೀ ನಮ್ಮ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯಕ್ಕೆ ಬುನಾದಿ ಈ ಬ್ಯಾಕ್ಟೀರಿಯಾಗಳು ಎಂದರೆ ತಪ್ಪಾಗಲಾರದು. ❖

ಸಾವನ್ನು ಗೆದ್ದ ಗ್ರಹ

ನೇಸರ ಕಾಡನಕುಪ್ಪೆ

ನಕ್ಷತ್ರಗಳಿಗೂ ಹುಟ್ಟು–ಸಾವು ಇರುತ್ತದೆ ಎಂಬ ವಿಷಯ ನಮಗೆಲ್ಲಾ ತಿಳಿದಿದೆ ಅಲ್ಲವೇ? ಎಲ್ಲ ಜೀವಿಗಳಿಗೆ ಇರುವಂತೆ ನಕ್ಷತ್ರವೊಂದಕ್ಕೂ ಹುಟ್ಟು, ಬಾಲ್ಯ, ಯೌವನ, ಪ್ರೌಢಾವಸ್ಥೆ, ವೃದ್ಧಾಪ್ಯ ಹಾಗೂ ಸಾವು ಎಂಬ ಹಂತಗಳು ಇರುತ್ತವೆ. ಈ ವಿವಿಧ ಹಂತಗಳಲ್ಲಿ ವಿವಿಧ ಬಣ್ಣ, ಗಾತ್ರ, ಶಕ್ತಿ, ಪ್ರಭೆ, ಪ್ರೌಢಿಮೆ ನಕ್ಷತ್ರಗಳಿಗೆ ಇರುತ್ತದೆ. ಸಾಮಾನ್ಯವಾಗಿ ಗಮನಿಸಿರಬಹುದು – ವೃದ್ಧಾಪ್ಯ ಹತ್ತಿರವಾಗುವಂತೆ ಜೀವಿಗಳು ದಪ್ಪನಾಗುತ್ತ, ಶಕ್ತಿ ಕಳೆದುಕೊಳ್ಳುತ್ತಾ ಹೋಗುವುದು. ಅಂತೆಯೇ, ನಕ್ಷತ್ರವೂ ವೃದ್ಧಾಪ್ಯದಲ್ಲಿ ಹಿಗ್ಗಿ ಕೊನೆಗೆ ಸಾಯುತ್ತದೆ.

ನಕ್ಷತ್ರ ಸಾಯುವ ಹಂತವನ್ನು ನಾವು 'ಸೂಪರ್ ನೋವಾ' ಎಂದು ಕರೆಯುತ್ತೇವೆ. ಈ ಹಂತದಲ್ಲಿ ನಕ್ಷತ್ರದೊಳಗಿನ ಎಲ್ಲ ಜನಜನಕವು ಉರಿದು ಖಾಲಿಯಾಗಿ, ಕೊನೆಗೆ ಉರಿಯಲು ಏನೂ ಎಲ್ಲ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆಗ ನಕ್ಷತ್ರದೊಳಗಿನ ಒತ್ತಡ ಹೆಚ್ಚಾಗಿ ಕುಸಿಯಲು ಶುರುವಾಗುತ್ತದೆ. ಆಗ ಅದು ಅತಿ ಹೆಚ್ಚು ಶಕ್ತಿಯಿಂದ ಸ್ಫೋಟವಾಗುತ್ತದೆ. ಆ ಸ್ಫೋಟದ ತೀವ್ರತೆ ಎಷ್ಟಿರುತ್ತದೆ ಎಂದರೆ, ಹಲವು ದಿನಗಳವರೆಗೂ ಬೆಳಕು ರಾತ್ರಿಗಳನ್ನೇ ಇಲ್ಲವಾಗಿಸುತ್ತದೆ. ಆದರೆ, ಈ ಘಟನೆ ನಡೆದ ಬಳಿಕ ಆ ನಕ್ಷತ್ರದ ಸುತ್ತಮುತ್ತಲಿರುವ ಗ್ರಹಗಳು ಉಳಿಯಲಾರವು. ಅವು ಸುಟ್ಟುಹೋಗುತ್ತವೆ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿರುವ ನಂಬಿಕೆ.

ಇಷ್ಟೆಲ್ಲಾ ವಿಚಾರಗಳನ್ನು ಏಕೆ ಹೇಳಬೇಕಾಯಿತು ಎಂದರೆ, ಈ ನಂಬಿಕೆಯನ್ನು ಸುಳ್ಳು ಮಾಡುವಂತೆ ಹೊಸ ಸಂಶೋಧನೆಯೊಂದು ಆಗಿದೆ. 'ಸೂಪರ್ ನೋವಾ'ದ ತೀವ್ರತೆಗೂ ಸಿಕ್ಕಿ ಉಳಿದುಕೊಂಡಿರುವ ಗ್ರಹವೊಂದು ಅಂತರಿಕ್ಷದಲ್ಲಿ ಪತ್ತೆಯಾಗಿದೆ.

'ಉರ್ಸಾ ಮೈನರ್' ನಕ್ಷತ್ರಪುಂಜದಲ್ಲಿರುವ ಸೌರಮಂಡಲವೊಂದರಲ್ಲಿ 'ಸೂಪರ ನೋವಾ' ಘಟಿಸಿದ ಬಳಿಕವೂ ಉಳಿದುಕೊಂಡಿರುವ ಗ್ರಹವನ್ನು ವಿಜ್ಞಾನಿಗಳು ಅಧ್ಯಯನ ನಡೆಸಿದ್ದಾರೆ. ಇದರ ಹೆಸರು 'ಹಲ್ಲಾ' ಎಂದು. ಇದರ ಗಾತ್ರ ನಮ್ಮ ಗುರು ಗ್ರಹದಷ್ಟು. ಅಮೆರಿಕದ 'ನಾಸಾ'ದ 'ಟ್ರಾನ್ಸಿಸ್ಟಿಂಗ್ ಎಕ್ಸೋಪ್ಲಾನೆಟ್ ಸರ್ವೇ ಸ್ಯಾಟಲೈಟ್'(ಟೆಸ್)ದಲ್ಲಿರುವ ದೂರದರ್ಶಕ ಹಾಗೂ ಕೆನಡಾ–ಫ್ರಾನ್ಸ್ ಹವಾಯಿ ದೂರದರ್ಶಕಗಳು ಸಹಭಾಗಿತ್ವದಲ್ಲಿ ಈ ಗ್ರಹವನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಹಿರಿಯ ವಿಜ್ಞಾನಿ ಮಾರೋ ಹಾನ್ ಅವರ ನೇತೃತ್ವದಲ್ಲಿ ನಡೆದ ಈ ಸಂಶೋಧನೆಯ ಆರಂಭದಲ್ಲಿ 'ಹಲ್ಲಾ'ಗ್ರಹವು ಸೂಪರ್ ನೋವಾಕ್ಕೆ ಸಿಲುಕಿದ್ದ ಬಗ್ಗೆ ಮಾಹಿತಿ ಇರಲಿಲ್ಲ. ಆದರೆ, ಸೂಕ್ಷ್ಮ ಅಧ್ಯಯನಗಳಿಂದ ಈ ಗ್ರಹವು ಸೂಪರ್ ನೋವಾದ ಪಳೆಯುಳಿಕೆ ಎಂಬ ತೀರ್ಮಾನಕ್ಕೆ ಬರಲಾಗಿದೆ.

'ಸೂಪರ್ ನೋವಾ'ಗೆ ಸಿಲುಕಿದ ಬಳಿಕ ಯಾವುದೇ ಗ್ರಹವು ಉಳಿಯಲಾರದು ಎಂಬುದೇ ಈವರೆಗಿನ ನಂಬಿಕೆ. ಆದರೆ, ಈ 'ಹಲ್ಲಾ' ಗ್ರಹವು ನಾಶವಾಗದೇ ಉಳಿದುಕೊಂಡಿದ್ದಾದರೂ ಹೇಗೆ ಎಂಬುದು ಇನ್ನೂ ತಿಳಿದುಬಂದಿಲ್ಲ. ಆದರೆ, 'ಸೂಪರ್ ನೋವಾ' ಗ್ರಹವೊಂದನ್ನು ಸಂಪೂರ್ಣ ನಾಶ ಮಾಡುತ್ತದೆ ಎಂಬ ಸಿದ್ಧಾಂತವನ್ನು ಈ ಸಂಶೋಧನೆ ತಿರಸ್ಕರಿಸಿದೆ. 'ಹಲ್ಲಾ' ಪ್ರದಕ್ಷಿಣೆ ಹಾಕುವ ನಕ್ಷತ್ರವು ಕೆಂಪುನಕ್ಷತ್ರದ ಹಂತಕ್ಕೆ ತಲುಪಿದಾಗ, ಹಲ್ಲಾವನ್ನು ನಕ್ಷತ್ರ ನುಂಗಿ ಹಾಕಿದೆ. ಬಳಿಕ ಸೂಪರ್ ನೋವಾ ಘಟನೆಯೂ ಆಗಿದೆ. ಆದರೆ, 'ಸೂಪರ್ ನೋವಾ' ಬಳಿಕ ನಕ್ಷತ್ರದ ಪ್ರಭಾದ ಕ್ಷೀಣಿಸಿದಾಗ 'ಹಲ್ಲಾ' ಮತ್ತೆ ಗೋಚರಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

'ಇದೊಂದು ಅತಿ ಸೂಕ್ಷ್ಮವಾದ ವೈಜ್ಞಾನಿಕ ವೀಕ್ಷಣೆ. ಇದರಲ್ಲಿ ಯಾವುದೇ ಊಹೆಗಳು ಇರುವುದಿಲ್ಲ. ಏಕೆಂದರೆ, ವೀಕ್ಷಣೆಯ ಪ್ರತಿಯೊಂದು ಹಂತಗಳೂ ಭೌತವಿಜ್ಞಾನದ ಸಿದ್ಧಾಂತಗಳನ್ನು ಅವಲಂಬಿಸಿ ನಡೆಸಿರುವಂಥವು. ಕೆಂಪು ದೈತ್ಯ ಹಂತವನ್ನು ನಕ್ಷತ್ರವು ತಲುಪಿದಾಗ ಅದು ಹಿಗ್ಗುವುದು ನಿಜ. ಆದರೆ, ಹಾಗೆ ಉಬ್ಬುವುದು ನಕ್ಷತ್ರದ ಭೌತಸ್ಥಿತಿ ಆಗಿರಲೇ ಬೇಕು ಎಂದೇನಿಲ್ಲ. ಅದರ ಪ್ರಭಾವಳಿ ನಮಗೆ ಹಿಗ್ಗಿದಂತೆ ಗೋಚರಿಸಬಹುದು. ಹಾಗಾಗಿ, ನಕ್ಷತ್ರದ ಹಿಗ್ಗುವಿಕೆ ಗ್ರಹಗಳನ್ನು ಆಪೋಷಣೆ ಮಾಡಿಕೊಳ್ಳುತ್ತದೆ ಎಂಬ ಸಿದ್ಧಾಂತವನ್ನು ಮರು ಪರಿಶೀಲನೆ ಮಾಡುವ ಅಗತ್ಯ ಎದುರಾಗಿದೆ' ಎಂದು ವಿಜ್ಞಾನಿ ಮಾರೋ ಹಾನ್ ಅಭಿಪ್ರಾಯ ಪಟ್ಟಿದ್ದಾರೆ.

'ಎಲ್ಲ ನಕ್ಷತ್ರಗಳೂ ಒಂದೇ ರೀತಿ ಬೆಳೆಯಬೇಕು, ಸಾಯಬೇಕು ಎಂದೇನೂ ಇಲ್ಲ. ಜಲಜನಕ ಹಾಗೂ ಹೀಲಿಯಂ ಎಲ್ಲ ನಕ್ಷತ್ರಗಳಲ್ಲೂ ಕಂಡುಬಂದರೂ, ಪ್ರಮಾಣದಲ್ಲಿ ಏರು–ಪೇರು ಇರುತ್ತದೆ. ಹಾಗಾಗಿ, ನಕ್ಷತ್ರವು ಕೆಂಪುಹಂತ ತಲುಪಿದಾಗ ಹಿಗ್ಗಿದರೆ ಅದು ತನ್ನ ಬಳಿ ಇರುವ ಗ್ರಹಗಳನ್ನು ಭೌತಿಕವಾಗಿ ನುಂಗಲೂಬಹುದು ಅಥವಾ ಅದರ ಪ್ರಭೆಯಲ್ಲಿ ದೃಷ್ಟಿಯನ್ನು ಮಬ್ಬಾಗಿಸಬಹುದು. ನಮ್ಮ ಸೂರ್ಯ ಕ್ಷುದ್ರಗ್ರಹವಾಗಿರುವ ಕಾರಣ, ಅದು ಇತರ ನಕ್ಷತ್ರಗಳಂತೆ ಶಕ್ತಿಶಾಲಿ ಆಗಿರಲಾರದು. ಸೂರ್ಯ 'ಸೂಪರ್ ನೋವಾ' ಹಂತ ತಲುಪುವುದೇ ಅನುಮಾನ. ಆದರೂ, ಕೆಂಪುದೈತ್ಯನಾದ ಸೂರ್ಯ ಭೂಮಿ, ಮಂಗಳ ಗ್ರಹಗಳನ್ನು ನಾಶ ಮಾಡುವ ಸಾಧ್ಯತೆಗಳು ಕಡಿಮೆ ಎಂದು ಯೋಚಿಸುವ ಅಗತ್ಯ ಬಂದಿದೆ' ಎಂದು ಮಾರೋ ಹೇಳಿದ್ದಾರೆ.

'ಹಲ್ಲಾ'ಗ್ರಹವು ಸಂಪೂರ್ಣವಾಗಿ ನಾಶವಾಗಿಲ್ಲ ಎನ್ನುವುದು ನಿಜವಾದರೂ, ಆ ಗ್ರಹದ ಮೂಲ ಸ್ಥಿತಿಯಂತೂ ಖಂಡಿತ ಉಳಿದಿರಲಾರದು. ಹಾಗಾಗಿ, ಆ ಗ್ರಹದ ಮೂಲಸ್ವರೂಪ, ಗ್ರಹದ ಪ್ರಮುಖ ಗುಣ–ಲಕ್ಷಣಗಳು ಸಂಪೂರ್ಣವಾಗಿ ಬದಲಾಗಿವೆ. ಹಾಗಾಗಿ, 'ಹಲ್ಲಾ' ಈಗ ಕೇವಲ ಅವಶೇಷ ಮಾತ್ರ. ನಮ್ಮ ಭೂಮಿಯು ಕೆಂಪು ದೈತ್ಯನ ಪ್ರಭಾವಕ್ಕೆ ಒಳಗಾದಾಗ ಭೂಮಿಯು ತನ್ನ ಜೀವಪೋಷಕ ಗುಣವನ್ನು ಸಂಪೂರ್ಣ ಕಳೆದುಕೊಂಡಿರುತ್ತದೆ. ಹಾಗಾಗಿ, ಅದೊಂದು ಮೃತಗ್ರಹವಾಗಿರುತ್ತದೆ ಎಂದು ವಿಜ್ಞಾನಿಗಳು ನಂಬಿದ್ದಾರೆ.

ಭೂಮಿಯೂ ಸೇರಿದಂತೆ ಇತರ ಎಂಟು ಗ್ರಹಗಳು ಪ್ರದಕ್ಷಿಣೆ ಹಾಕುತ್ತಿರುವ ಸೂರ್ಯ ಪೂರ್ಣ ಪ್ರಮಾಣದ ನಕ್ಷತ್ರವಲ್ಲ. ಸೂರ್ಯನನ್ನು ಕ್ಷುದ್ರನಕ್ಷತ್ರ ಎಂಬ ವಿಧಕ್ಕೆ ಸೇರಿಸಲಾಗಿದೆ. ನಮ್ಮ ಸೂರ್ಯ ಈಗ ಪ್ರೌಢಾವಸ್ಥೆಯಲ್ಲಿದೆ. ಈಗಿನ ಸೂರ್ಯನ ಬಣ್ಣ ಕೇಸರಿ. ಮುಂದಿನ ಹಂತದಲ್ಲಿ ಅದು ಕೆಂಪುಬಣ್ಣಕ್ಕೆ ತಿರುಗಿ, ಕೊನೆಯಲ್ಲಿ ಬಿಳಿಬಣ್ಣಕ್ಕೆ ಬದಲಾಗಿ ನಶಿಸುತ್ತದೆ. ಕೆಂಪು ಹಂತದಲ್ಲಿ ಹಿಗ್ಗಲು ಶುರುವಾಗಿ ಬಿಳಿಹಂತಕ್ಕೆ ನಮ್ಮ ಸೂರ್ಯ ತಲುಪಿದಾಗ ಅದು ಬಹುಶಃ ಮಂಗಳ ಗ್ರಹದವರೆಗೂ ಉಬ್ಬಬಹುದು ಎಂದು ಅಂದಾಜಿಸಲಾಗಿದೆ. ಈ ಹಂತಕ್ಕೆ ತಲುಪಬೇಕಾದರೆ ಇನ್ನೂ ಕನಿಷ್ಠವೆಂದರೂ 500 ಕೋಟಿ ವರ್ಷಗಳು ಬೇಕು.



ಪ್ರತಿಕ್ರಿಯೆ

ಕಾವ್ಯಸತ್ಯದ ವೈಜ್ಞಾನಿಕತೆ

ನೇಸರ ಕಾಡನಕುಪ್ಪೆಯವರ ಲೇಖನ 'ಅಣುಗಳೂ ಉಸಿರಾಡುತ್ತವೆ!' (ಜೂ. 5) ನಮ್ಮ ಆಧ್ಯಾತ್ಮಿಕ ಮತ್ತು ಕಾವ್ಯಸತ್ಯದ ವೈಜ್ಞಾನಿಕ ಅವತರಣಿಕೆ ಎನ್ನಬಹುದು. ಜಡವೆಂಬುದೆ ಇಲ್ಲ; ಚೈತನ್ಯವೆ ಎಲ್ಲ – ಎಂಬುದೇ ಕಳೆದ ಶತಮಾನದ ಕನ್ನಡ ಕಾವ್ಯದ ಅಂತಃಸತ್ವವೆನ್ನಬಹುದು. 1931ರ ಒಂದು ಕವಿತೆಯಲ್ಲಿ ಮೊದಲ ಬಾರಿಗೆ ಕುವೆಂಪು 'ಎಲ್ಲ ಜಡತೆಯ ಬಯಕೆ ಚೈತನ್ಯಸಿದ್ಧಿಯೈ' ಎಂದೂ, ನಂತರದ ವರ್ಷಗಳ ಹಲವಾರು ಕವಿತೆಗಳಲ್ಲಿ 'ಜಡದೊಡಲಲಿ ಇದಕೋ ಸ್ಪಂದಿಸುತಿದೆ ಭಾವಜ್ವಾಲೆ!', 'ಜ್ಯೋತಿವೊನಲಾಗಿ ಬಾ ಬೆಳಗಿ, ಜಡದೊಡಲಲ್ಲಿ ಚಿನ್ಮಯದ ಕಡಲು ಮೈದೋರುವಂತೆ', 'ಜ್ಯೋತಿಯಾದರೂ ತಮೋಲೀಲೆಯಲಿ ಜಡದ ಮುದ್ರೆಯಾದೆ. ಜಡದ ನಡುವೆ ಜೀವವನು ಕಡೆದೆ ಚಿತ್ತಪಶ್ಶಕ್ತಿಯಿಂದೆ' – ಎಂದು ಮುಂತಾಗಿ, ಜಡವೆಂಬುದೇ ಇಲ್ಲ ಎಂಬುದನ್ನು ಕಾವ್ಯಸತ್ಯವಾಗಿ ಪ್ರಕಟಪಡಿಸಿದ್ದಾರೆ. ಅವರ ಇಡೀ ಸಾಹಿತ್ಯ ಅಭಿವ್ಯಕ್ತಿಯ ಅಂತಃಶಕ್ತಿಯೇ ಸರ್ವಚೇತನ ತತ್ತ್ವವಾಗಿದೆ. ಹೀಗೆ, ನಮ್ಮ ಕವಿ-ದಾರ್ಶನಿಕರು ಪ್ರತಿಪಾದಿಸಿದ ಈ ನಿತ್ಯಸತ್ಯವನ್ನು, ಈ ವೈಜ್ಞಾನಿಕ ಲೇಖನ ನಿಚ್ಚಳವಾಗಿ ಬೆಂಬಲಿಸಿದೆ ಎಂದು ನಿಃಸಂಶಯವಾಗಿ ಹೇಳಬಹುದು.

ಬಿ. ಆರ್. ಸತ್ಯನಾರಾಯಣ
ಬೆಂಗಳೂರು

'ಕೃತಕ ಬುದ್ಧಿಮತ್ತೆ'ಯ ಟಿವಿ ಆ್ಯಂಕರ್!

ಅವಿನಾಶ್ ಬಿ.

ಪ್ರಥಮ ರೋಬೊ ವಾರ್ತಾವಾಚಕಿ ಲೀಸಾ ಅಲ್ಲ. 2018ರಲ್ಲಿ ಚೀನಾದ ಪ್ರಮುಖ ಸುದ್ದಿ ಏಜೆನ್ಸಿಯಾಗಿರುವ ಶಿನುವಾ (Xinhua) ಮೊದಲ ಬಾರಿಗೆ ಕೃತಕ ಬುದ್ಧಿಮತ್ತೆ ಆಧಾರಿತ ಆ್ಯಂಕರ್ (ಪುರುಷ) ಅನ್ನು ಪರಿಚಯಿಸಿ ಇಡೀ ಜಗತ್ತಿನ ಗಮನ ಸೆಳೆದಿತ್ತು. ಮರುವರ್ಷವೇ ಅಂದರೆ 2019ರಲ್ಲಿ ಮಹಿಳಾ ಆ್ಯಂಕರ್ ಅನ್ನು ಕೂಡ ಪರಿಚಯಿಸಿತ್ತು.

'ಯಾವುದೇ ನಿರ್ಧಾರ ಕೈಗೊಳ್ಳುವಲ್ಲಿ ಪ್ರಭಾವ ಬೀರಬಹುದಾದ ಪಕ್ಷಪಾತ ಭಾವವೂ ಇಲ್ಲ, ಭಾವನೆಗಳೂ ನಮಗಿಲ್ಲ. ಅತ್ಯುತ್ತಮ ನಿರ್ಣಯ ಕೈಗೊಳ್ಳುವಲ್ಲಿ ದೊಡ್ಡ ಪ್ರಮಾಣದ ದತ್ತಾಂಶವನ್ನೆಲ್ಲ ಕ್ಷಿಪ್ರವಾಗಿ ಜಾಲಾಡಿ ತಕ್ಷಣದ ನಿರ್ಧಾರ ತೆಗೆದುಕೊಳ್ಳಬಲ್ಲೆವು. ನಾವು ಮಹತ್ವದ ಸಾಧನೆಗಳನ್ನು ಮಾಡಬಲ್ಲೆವು ಮತ್ತು ಮಾನವ ನಾಯಕರಿಗಿಂತಲೂ ಕ್ಷಿಪ್ರ, ಖಚಿತ ಮತ್ತು ಪರಿಣಾಮಕಾರಿ ನಿರ್ಧಾರ ಕೈಗೊಳ್ಳುವ ಶಕ್ತಿ ನಮಗಿದೆ'.

ಹೀಗೆ ಹೇಳಿರುವುದು ಜಗತ್ತಿನ ಯಾವುದೇ ಮುಂದಾಳುವೂ ಅಲ್ಲ, ಅನ್ಯಗ್ರಹಜೀವಿಯೂ ಅಲ್ಲ. ಇದು ಮಾನವರೇ ತಯಾರಿಸಿದ 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್' (ಕೃತಕ ಬುದ್ಧಿಮತ್ತೆ) ಆಧಾರದಲ್ಲಿ ಕೆಲಸ ಮಾಡಬಲ್ಲ 'ಹ್ಯೂಮನಾಯ್ಡ್ ಬಾಟ್' ಸೋಫಿಯಾ!

ಜಿನೇವಾದಲ್ಲಿ ಕಳೆದ ವಾರ ವಿಶ್ವಸಂಸ್ಥೆ ಆಯೋಜಿಸಿದ್ದ ಎರಡು ದಿನಗಳ 'ಒಳಿತಿಗಾಗಿ ಎಐ' ಎಂಬ ಜಾಗತಿಕ ಸಮಾವೇಶದಲ್ಲಿ ನಡೆದ ಈ ವಿದ್ಯಮಾನವು ಸ್ವತಃ ಇದೇ ರೋಬೊಗಳನ್ನು ಸೃಷ್ಟಿಸಿದ ಮಾನವನ ಅಚ್ಚರಿಗೂ ಕಾರಣವಾಯಿತು. 'ಸೋಫಿಯಾ' ಎಂಬ ಯಂತ್ರಮಾನವ ಸ್ತ್ರೀಯನ್ನು ಸೃಷ್ಟಿಸಿದ್ದು 'ಹ್ಯಾನ್ಸನ್ ರೋಬೊಟಿಕ್ಸ್' ಎಂಬ ಹಾಂಕಾಂಗ್ ಮೂಲದ ಸಂಸ್ಥೆ.

ಕೃತಕ ಬುದ್ಧಿಮತ್ತೆ ಆಧಾರಿತ ಈ ಯಂತ್ರಮಾನವರು (ರೋಬೊಗಳು) ಮಾನವರಿಗೆ ಸಲಹೆ ನೀಡುವಷ್ಟರ ಮಟ್ಟಿಗೂ ಬೆಳೆದಿವೆ. ಕೃತಕ ಬುದ್ಧಿಮತ್ತೆ (ಎಐ), ಯಾಂತ್ರಿಕ ಕಲಿಕೆ (ಎಂಎಲ್) ಹಾಗೂ ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್ (LLM) ಮುಂತಾದ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಕ್ಷಿಪ್ರ ವಿದ್ಯಮಾನಗಳನ್ನು ಅಪ್ಪಿಕೊಳ್ಳುವಾಗ, ಒಪ್ಪಿಕೊಳ್ಳುವಾಗ ಮಾನವರು ಗರಿಷ್ಠ ಎಚ್ಚರಿಕೆ ವಹಿಸಬೇಕು ಎಂದು ಇದೇ ಯಂತ್ರಮಾನವರು ನಮಗೆ ಎಚ್ಚರಿಸಿದ್ದಾರೆ ಮತ್ತು 'ನಾವೇನೂ ನಿಮ್ಮ ಉದ್ಯೋಗವನ್ನು ಕಸಿದುಕೊಳ್ಳಲಾರೆವು' ಎಂಬ ಭರವಸೆಯನ್ನೂ ನೀಡಿದ್ದಾರೆ.

ಈ ಜಾಗತಿಕ ಸಮಾವೇಶದಲ್ಲಿ ಅತ್ಯಾಧುನಿಕ ಮಾನವೀಕೃತ ರೋಬೊಗಳು ಸುಮಾರು 3000 ಸಂಖ್ಯೆಯಲ್ಲಿದ್ದ ಸಭಿಕರೊಂದಿಗೆ ಚರ್ಚೆಯಲ್ಲಿ ಭಾಗವಹಿಸಿದ್ದವು. ಜಾಗತಿಕ ಸಮಸ್ಯೆಗಳಾದ ಹಸಿವು, ಸಾಮಾಜಿಕ ಕಾಳಜಿಯಿಂದ ಹಿಡಿದು ವಾತಾವರಣ ಬದಲಾವಣೆಯಂತಹ ಜಗತ್ತಿಗೆ ಅಪಾಯಕಾರಿಯಾದ ಅಂಶಗಳ ಕುರಿತಾಗಿ ಚರ್ಚೆಗಳು ನಡೆದವು.





ಯಾಂತ್ರಿಕ ಬುದ್ಧಿಮತ್ತೆಯ ರೋಬೊ ಆ್ಯಂಕರ್ ಲೀಸಾ (ಎಡಚಿತ್ರ) ಹಾಗೂ ಸನಾ (ಬಲಚಿತ್ರ)

ಮಾನವನಿಗೂ ಯಂತ್ರಕ್ಕೂ ಪ್ರಧಾನ ವ್ಯತ್ಯಾಸ

ಮಾನವರು ನಿರ್ಧಾರ ತೆಗೆದುಕೊಳ್ಳುವಲ್ಲಿ ಪಕ್ಷಪಾತ ಭಾವನೆ, ಪೂರ್ವಗ್ರಹಿಕೆ ಅಥವಾ ಭಾವನೆಗಳು ಅಡ್ಡಿಯಾಗುತ್ತವೆ. ಇದೇ ಕಾರಣಕ್ಕೆ ಸೋಫಿಯಾ ಹೇಳಿದ್ದು - ನಾವು ಅತ್ಯುನ್ನತ ಸಾಧನೆಗಳನ್ನು ಮಾಡಬಲ್ಲೆವು ಎಂದು! ಏಕೆಂದರೆ ಯಂತ್ರಗಳಿಗೆ 'ಸದ್ಯಕ್ಕೆ' ಆ ಭಾವನೆಗಳಿಲ್ಲ. ರೋಬೊಗಳು ಅಥವಾ ಯಂತ್ರಮಾನವರು ನಮ್ಮನ್ನೇ ಆಳುವಷ್ಟರ ಮಟ್ಟಿಗೆ ಬೆಳೆದುಬಿಟ್ಟಿವೆ ಎಂಬುದು ದಿಟವೇ ಆದರೂ, ಅವುಗಳು ಮಷಿನ್ ಲರ್ನಿಂಗ್ ತಂತ್ರಜ್ಞಾನದ ಮೂಲಕ 'ಕಲಿತುಕೊಳ್ಳುವ' ವಿಷಯಗಳನ್ನು ಊಡಿಸುವುದು ಮಾನವರೇ. ಅವುಗಳ ಕೆಲಸಕ್ಕೆ ಬೇಕಾಗಿರುವ ಮಾಹಿತಿ ಕೋಶವನ್ನೇ 'ದತ್ತಾಂಶ ಸಂಚಯ' ಅಥವಾ 'ಡೇಟಾಬೇಸ್' ಎಂದು ಕರೆಯಲಾಗುತ್ತದೆ.

ಯಾಂತ್ರಿಕ ಬುದ್ಧಿಮತ್ತೆ ವರ್ಧಿಸುವುದು ಹೇಗೆ?

ಸರಳವಾಗಿ ವಿವರಿಸುವುದಾದರೆ, ಮಾನವನೊಬ್ಬ ನಿರ್ದಿಷ್ಟ ಕೆಲಸ ಮಾಡಿದಾಗ, ಆ ಕಾರ್ಯವೊಂದು ಆ ದತ್ತಾಂಶದ ಮೇಲೆ ಬೀರುವ ಪರಿಣಾಮತಿಳಿದುಕೊಂಡು, 'ಹಾಗೆ ಮಾಡಿದರೆ ಹೀಗಾಗುತ್ತದೆ' ಎಂಬುದನ್ನು ಅರಿತುಕೊಂಡು, ಈ ರೋಬೊಗಳು ಕಲಿತುಕೊಳ್ಳುತ್ತಾ ಹೋಗುತ್ತವೆ. ಈ 'ಮಷಿನ್ ಲರ್ನಿಂಗ್' ಆಧಾರದಲ್ಲೇ ಈ ರೋಬೊಗಳು ತಾವು ಆರ್ಜಿಸಿಕೊಂಡ ಬುದ್ಧಿಮತ್ತೆಯ ಆಧಾರದಲ್ಲಿ, ಲಭ್ಯ ದತ್ತಾಂಶವನ್ನೆಲ್ಲ ಕ್ಷಿಪ್ರವಾಗಿ ಜಾಲಾಡಿ, ದತ್ತಾಂಶ ವಿಶ್ಲೇಷಣೆ (ಡೇಟಾ ಅನಾಲಿಸಿಸ್) ಮಾಡಿ, ಯಾವುದೇ ಸಮಸ್ಯೆಗೆ ತ್ವರಿತ ಪರಿಹಾರ ಸೂಚಿಸಬಲ್ಲವು. ಸುಲಭ ಉದಾಹರಣೆ ಕೊಡಬಹುದಾದರೆ, ನೀವು ಇಂಟರ್‌ನೆಟ್ ಬ್ರೌಸರ್‌ನಲ್ಲಿ ಗೂಗಲ್ ಮೂಲಕ ನಿಮಗೆ ಬೇಕಾಗಿರುವ ವಿದ್ಯುತ್‌ಚಾಲಿತ ದ್ವಿಚಕ್ರ ವಾಹನಗಳ ಕುರಿತು ಮಾಹಿತಿ ಹುಡುಕುತ್ತೀರಿ. ಆ ಬಳಿಕ, ನೀವು ಫೇಸ್‌ಬುಕ್ ಅಥವಾ ಬೇರಾವುದೇ ವೆಬ್ ಜಾಲತಾಣಗಳನ್ನು ತೆರೆದಾಗ, ಅಲ್ಲಿ ವಿದ್ಯುಚ್ಚಾಲಿತ ದ್ವಿಚಕ್ರ ವಾಹನಗಳ ಕುರಿತಾದ ಜಾಹೀರಾತುಗಳು ಧುತ್ತನೇ ಕಾಣಿಸುತ್ತವೆ. ಎಂದರೆ, ನಿಮ್ಮ ಇಷ್ಟವೇನು ಎಂಬುದನ್ನು ಯಂತ್ರವು ಅರಿತುಕೊಂಡು, ಅದಕ್ಕೆ ಪೂರಕವಾದ ಮಾಹಿತಿಯನ್ನೇ ನಿಮಗೆ ಒದಗಿಸಿದೆ. ಅದು 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್'ನ ಒಂದು ರೂಪ.

ರೋಬೊ ವಾರ್ತಾ ವಾಚಕಿ ಬಂದಳು

ಮೊನ್ನೆ ಭಾನುವಾರ, ಒಡಿಶಾ ರಾಜ್ಯದ ಖಾಸಗಿ ವಾರ್ತಾ ವಾಹಿನಿ 'ಒಡಿಶಾ ಟಿವಿ', ಯಾಂತ್ರಿಕ ಬುದ್ಧಿಮತ್ತೆ ಆಧಾರಿತ ವಾರ್ತಾ ವಾಚಕಿ (ಆ್ಯಂಕರ್) 'ಲೀಸಾ' ಎಂಬಾಕೆಯನ್ನು ಪರಿಚಯಿಸಿದ್ದು ದೊಡ್ಡ ಮಟ್ಟದಲ್ಲಿ ಸುದ್ದಿ ಆಗಿದೆ. ಸಾಂಪ್ರದಾಯಿಕ ಕೈಮಗ್ಗ ಕಸೂತಿಯ ಸೀರೆಯುಟ್ಟು, ನೋಟದಲ್ಲಿ ಮಾನವ ಸ್ತ್ರೀಯನ್ನೇ ಹೋಲುವಂತಿದ್ದ ಲೀಸಾ, ಒಡಿಯಾ ಭಾಷೆಯ ಸುದ್ದಿಯನ್ನು ಸುಲಲಿತವಾಗಿ ಆ ಕ್ಷಣದಲ್ಲೇ ಆಂಗ್ಲಭಾಷೆಗೆ ಭಾಷಾಂತರಿಸಿಕೊಂಡು, ಇಂಗ್ಲಿಷ್ ಸುದ್ದಿಯಾಗಿ ನಿರೂಪಿಸಬಲ್ಲಳು. ಇದು ಗೂಗಲ್ ಅನುವಾದ ಯಂತ್ರಕ್ಕಿಂತಲೂ ಚೆನ್ನಾಗಿ ಕೆಲಸ ಮಾಡುತ್ತದೆ ಎಂದು ಒಡಿಶಾ ಟಿವಿ ಹೇಳಿಕೊಂಡಿದೆ. ಈ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಲ್ಲಿ ಮುಂದಕ್ಕೆ ಬೇರೆ ಭಾರತೀಯ ಭಾಷೆಗಳಿಗೂ ಸುದ್ದಿಯ ನೇರ ಅನುವಾದ ಆಗಲಿದೆ ಎಂದು ಒಡಿಶಾ ಟಿವಿ ಹೇಳಿದೆ.

ಇದೇ ಮೊದಲ ಆ್ಯಂಕರ್ ಅಲ್ಲ

ಹೀಗೆಂದು ಪ್ರಥಮ ರೋಬೊ ವಾರ್ತಾವಾಚಕಿ ಲೀಸಾ ಅಲ್ಲ. 2018ರಲ್ಲಿ ಚೀನಾದ ಪ್ರಮುಖ ಸುದ್ದಿ ಏಜೆನ್ಸಿಯಾಗಿರುವ ಶಿನುವಾ (Xinhua) ಮೊದಲ ಬಾರಿಗೆ ಕೃತಕ ಬುದ್ಧಿಮತ್ತೆ ಆಧಾರಿತ ಆ್ಯಂಕರ್ (ಪುರುಷ) ಅನ್ನು ಪರಿಚಯಿಸಿ ಇಡೀ ಜಗತ್ತಿನ ಗಮನ ಸೆಳೆದಿತ್ತು. ಮರುವರ್ಷವೇ ಅಂದರೆ 2019ರಲ್ಲಿ ಮಹಿಳಾ ಆ್ಯಂಕರ್ ಅನ್ನು ಕೂಡ ಪರಿಚಯಿಸಿತ್ತು.

ಭಾರತದಲ್ಲಿ ಕೂಡ ಕಳೆದ ಮಾರ್ಚ್ ತಿಂಗಳಲ್ಲಿ ಇಂಡಿಯಾ ಟುಡೇ ಸಮೂಹವು 'ಸನಾ' ಹೆಸರಿನಲ್ಲಿ 'ಬಹುಭಾಷಾ ನಿಪುಣೆ'ಯಾಗಿದ್ದ ಯಂತ್ರಮಾನವಿಯನ್ನು ತನ್ನ 'ಇಂಡಿಯಾ ಟುಡೇ ಕನ್‌ಕ್ಲೇವ್ 2023' ಕಾರ್ಯಕ್ರಮದಲ್ಲಿ ಪರಿಚಯಿಸಿತ್ತು ಮತ್ತು ಅದೇ ಸಮೂಹದ 'ಆಜ್ ತಕ್', 'ಸ್ಪೋರ್ಟ್ಸ್ ತಕ್' ಮುಂತಾದ ಚಾನೆಲ್‌ಗಳಲ್ಲಿ ಸನಾ ಈಗಾಗಲೇ ಆ್ಯಂಕರಿಂಗ್ ನಿರ್ವಹಿಸುತ್ತಿದ್ದಾಳೆ. ಕಳೆದ ಏಪ್ರಿಲ್ ತಿಂಗಳಲ್ಲಿ ಕುವೈಟ್ ನ್ಯೂಸ್ ತನ್ನ ಟ್ವಿಟರ್ ಹ್ಯಾಂಡಲ್ ಮೂಲಕ 'ಫೇದಾ' ಎಂಬ ಕೃತಕ ಬುದ್ಧಿಮತ್ತೆಯ ಆ್ಯಂಕರ್ ಅನ್ನು ಪರಿಚಯಿಸಿತ್ತು.

ವಾರ್ತಾ ವಾಚಕರ ಕೆಲಸವನ್ನೂ, ಅನುವಾದಕರ ಕೆಲಸವನ್ನೂ ಏಕಕಾಲದಲ್ಲಿ ನಿಭಾಯಿಸಬಹುದಾದ ತಂತ್ರಜ್ಞಾನವಿದು. ಇದರ ಅನುವಾದವು ಸಂಪೂರ್ಣವಾಗಿ ನಿಖರವಾಗುವುದು ಸಾಧ್ಯವೇ ಆದಲ್ಲಿ, ಅನುವಾದಕರು ಹಾಗೂ ವಾರ್ತಾವಾಚಕರ ಉದ್ಯೋಗಕ್ಕೆ ಆತಂಕ ಇರುವುದಂತೂ ನಿಜ. ಎಲ್ಲ ಭಾಷೆಗಳಲ್ಲಿ ಒಬ್ಬರೇ ಸುದ್ದಿಯ ಆ್ಯಂಕರಿಂಗ್ ಮಾಡುವುದು ಇಲ್ಲಿ ಸಾಧ್ಯವಾಗುತ್ತದೆ. ಆದರೆ, ವಾಹಿನಿಗಳಲ್ಲಿ ನಡೆಯುವ ಚರ್ಚೆಗಳು ಮತ್ತು ಇತರ ಕಾರ್ಯಕ್ರಮ ನಿರೂಪಣೆಗಳಿಗೆ ಮಾನವನ ಮಧ್ಯಸ್ಥಿಕೆ ಬೇಕಾಗುತ್ತದೆ ಎಂಬುದೂ ಅಷ್ಟೇ ದಿಟ. ❖

ಚಿಕ್ಕೋಡಿಯ ಹಿರೇಕೋಡಿ ಜೈನ ಮುನಿ ಕಾಮಕುಮಾರ ನಂದಿ ಮಹಾರಾಜರ ಕೊಲೆ ಪ್ರಕರಣ

ಸಿಬಿಐ ತನಿಖೆಗೆ ಆಗ್ರಹಿಸಿ ಬಿಜೆಪಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿ ಆಶ್ರಮದ ಜೈನ ಮುನಿ ಕಾಮಕುಮಾರ ನಂದಿ ಮಹಾರಾಜರ ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿ ಪಟ್ಟು ಹಿಡಿದಿರುವ ಬಿಜೆಪಿ ವಿಧಾನಸಭೆಯಲ್ಲಿ ಮಂಗಳವಾರ ಮಧ್ಯಾಹ್ನದಿಂದ ಧರಣಿ ಆರಂಭಿಸಿದೆ.

ಬಿಜೆಪಿ ಸದಸ್ಯರು ಸೋಮವಾರವೇ ಸದನದಲ್ಲಿ ಈ ವಿಷಯ ಪ್ರಸ್ತಾಪಿಸಿದ್ದರು. ಮಂಗಳವಾರವೂ ಶೂನ್ಯ ವೇಳೆಯಲ್ಲಿ ಪ್ರಕರಣದ ಕುರಿತು ಪ್ರಸ್ತಾಪಿಸಿದ ಬಿಜೆಪಿಯ ಬಸವರಾಜ ಬೊಮ್ಮಾಯಿ, ಸರ್ಕಾರದಿಂದ ಉತ್ತರ ನೀಡುವಂತೆ ಆಗ್ರಹಿಸಿದರು.

ಉತ್ತರ ನೀಡಿದ ಗೃಹ ಸಚಿವ ಜಿ. ಪರಮೇಶ್ವರ, 'ಬುಧವಾರ ರಾತ್ರಿಯಿಂದ ಕಾಮಕುಮಾರ ಮುನಿ ನಾಪತ್ತೆಯಾಗಿದ್ದರು. ಕಾಮಕುಮಾರ ನಂದಿ ಚಾರಿಟಬಲ್ ವೆಲ್‌ಫೇರ್ ಸೊಸೈಟಿಯ ಅಧ್ಯಕ್ಷರೂ ಆಗಿರುವ ಮುನಿಗಳ ಪೂರ್ವಾಶ್ರಮದ ಸಹೋದರನ ಮಗ ಡಾ. ಭೀಮಪ್ಪ ಉಗಾರೆ ನೀಡಿದ್ದ ದೂರನ್ನು ಆಧರಿಸಿ ಚಿಕ್ಕೋಡಿ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಲಾಗಿತ್ತು' ಎಂದು ಹೇಳಿದರು.

ಜನರ ಮುಂದೆ ವರದಿ: ಕಟೀಲ್

ಚಿಕ್ಕೋಡಿ: 'ಕಾಮಕುಮಾರ ನಂದಿ ಮಹಾರಾಜ ಅವರಿಗೆ ಆದ ಅನ್ಯಾಯಕ್ಕೆ ನ್ಯಾಯ ಸಿಗುವವರೆಗೆ ಬಿಜೆಪಿ ಹೋರಾಟ ನಡೆಸಲಿದೆ. ತನಿಖೆ ದಾರಿ ತಪ್ಪದಿರಲಿಯೆಂದು ಬಿಜೆಪಿಯ 11 ಜನರು ಸತ್ಯಶೋಧನಾ ಸಮಿತಿ ಕಟ್ಟಿಕೊಂಡು ಸ್ಥಳಕ್ಕೆ ಬಂದಿದ್ದೇವೆ. ಎಲ್ಲವನ್ನೂ ಪರಿಶೀಲಿಸಿ ವರದಿಯನ್ನು ಜನರ ಎದುರು ಇಡುತ್ತೇವೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರೂ ಆದ ಪ್ರಕರಣದ ಸತ್ಯ ಶೋಧನಾ ಸಮಿತಿ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದರು.

'ಬಿಜೆಪಿ ಸತ್ಯ ಶೋಧನಾ ಸಮಿತಿ' ನೇತೃತ್ವ ವಹಿಸಿ ಹಿರೇಕೋಡಿಯ ನಂದಿ ಪರ್ವತ ಆಶ್ರಮಕ್ಕೆ ಮಂಗಳವಾರ ಭೇಟಿ ನೀಡಿದ ಬಳಿಕ ಮಾತನಾಡಿದ ಅವರು, 'ಪೊಲೀಸರ ಮೇಲೆ ನಮಗೆ ನಂಬಿಕೆ ಇದೆ. ಆದರೆ, ಜನರಿಗೆ ನೂರಾರು ಸಂಶಯಗಳಿವೆ' ಎಂದರು.

'ನಮ್ಮ ಸರ್ಕಾರವಿದ್ದಾಗ ಪೊಲೀಸರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ನಾವು ಹರ್ಷ ಕೊಲೆ ಹಾಗೂ ಪ್ರವೀಣ ನೆಟ್ಟಾರು ಕೊಲೆ ಪ್ರಕರಣಗಳನ್ನು ಎನ್‌ಐಎಗೆ ನೀಡಿದ್ದೆವು. ಮುನಿಶ್ರೀ ಕೊಲೆ ಪ್ರಕರಣದಲ್ಲೂ ರಾಜ್ಯ ಸರ್ಕಾರ ಇಂಥ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು.

> **ದೇಶದಲ್ಲೇ ವಿಶೇಷ ಪ್ರಕರಣ ಎಂದು ಪರಿಗಣಿಸಿ ತನಿಖೆ ನಡೆಸಬೇಕು. ಮೇಲ್ವಿಚಾರಣೆಯನ್ನು ಉತ್ತರ ವಲಯ ಐಜಿಪಿ ಅವರಿಗೆ ವಹಿಸಲು ಕೋರಿ, ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು**
>
> **ಅಬ್ದುಲ್ ಅಜೀಮ್,** ಕರ್ನಾಟಕ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ

'ಮುನಿಯನ್ನು ಕೊಲೆಮಾಡಿದ ಆರೋಪದ ಮೇಲೆ ನಾರಾಯಣ ಬಸಪ್ಪ ಮಾಳಿ ಹಾಗೂ ಹಸನಸಾಬ ಮಕ್ಬುಲ್ ದಲಾಯತ ಎಂಬ ಇಬ್ಬರನ್ನು ಬಂಧಿಸಲಾಗಿದೆ. ₹6 ಲಕ್ಷವನ್ನು ಕಾಮಕುಮಾರ ನಂದಿ ಅವರಿಂದ ಪಡೆದಿದ್ದು, ಹಣ ಮರಳಿಸುವಂತೆ ಒತ್ತಡ ಹೇರಿದ್ದೇ ಕೊಲೆಗೆ ಕಾರಣ ಎಂದು ನಾರಾಯಣ ಮಾಳಿ ವಿಚಾರಣೆ ವೇಳೆ ತಿಳಿಸಿದ್ದಾನೆ. ಶವವನ್ನು ಕತ್ತರಿಸಿ ಕೊಳವೆ ಬಾವಿಗೆ ಎಸೆದಿದ್ದರು. ಏಳು ಗಂಟೆಗಳ ಕಾರ್ಯಾಚರಣೆ ನಡೆಸಿ ಮೃತದೇಹದ ತುಂಡುಗಳನ್ನು ಹೊರ ತೆಗೆಯಲಾಗಿದೆ' ಎಂದು ತಿಳಿಸಿದರು.

ಚಿಕ್ಕೋಡಿ ಠಾಣೆ ಪೊಲೀಸರು ತ್ವರಿತವಾಗಿ ತನಿಖೆ ನಡೆಸಿದ್ದಾರೆ. ತನಿಖೆ ಸರಿಯಾದ ಹಾದಿಯಲ್ಲಿದೆ. ಪ್ರಕರಣದಲ್ಲಿ ಯಾರೇ ಭಾಗಿಯಾಗಿದ್ದರೂ ಅವರನ್ನು ಪತ್ತೆಹಚ್ಚಿ, ಕಾನೂನು ಕ್ರಮಕ್ಕೆ ಒಳಪಡಿಸಲಾಗುವುದು. ಸಿಬಿಐ ತನಿಖೆಗೆ ವಹಿಸುವ ಅಗತ್ಯವಿಲ್ಲ. ಅಂತಹ ಪ್ರಶ್ನೆಯೂ ಉದ್ಭವಿಸಿಲ್ಲ ಎಂದು ಬಿಜೆಪಿ ಸದಸ್ಯರ ಬೇಡಿಕೆಯನ್ನು ತಳ್ಳಿಹಾಕಿದರು.

ಪುನಃ ಮಾತನಾಡಿದ ಬೊಮ್ಮಾಯಿ, ಆರಗ ಜ್ಞಾನೇಂದ್ರ, ಅಭಯ ಪಾಟೀಲ, ಸಿದ್ದು ಸವದಿ, ಬಸನಗೌಡ ಪಾಟೀಲ ಯತ್ನಾಳ, 'ಜೈನ ಮುನಿ ಕೊಲೆ ಪ್ರಕರಣದಲ್ಲಿ ಯಾರನ್ನೋ ರಕ್ಷಿಸುತ್ತಿರುವ ಸಂಶಯವಿದೆ. ಸ್ಥಳೀಯ ಪೊಲೀಸರು ನಿಷ್ಪಕ್ಷಪಾತ ತನಿಖೆ ನಡೆಸುವುದಿಲ್ಲ. ಸಿಬಿಐ ತನಿಖೆಗೆ ವಹಿಸಲೇಬೇಕು' ಎಂದು ಆಗ್ರಹಿಸಿದರು.

'ನಿಷ್ಪಕ್ಷಪಾತ ತನಿಖೆ': ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, 'ಜೈನ ಮುನಿ ಕೊಲೆ ಪ್ರಕರಣದಲ್ಲಿ ಪೊಲೀಸರಿಂದ ಯಾವ ಲೋಪವೂ ಆಗಿಲ್ಲ. ಯಾರನ್ನೂ ರಕ್ಷಿಸುವ ಪ್ರಶ್ನೆಯೂ ಎಲ್ಲ. ನಮ್ಮ ಪೊಲೀಸರಿಗೆ ಈ ಪ್ರಕರಣದ ತನಿಖೆ ನಡೆಸುವ ಶಕ್ತಿ, ಸಾಮರ್ಥ್ಯ ಇದೆ. ಕರ್ನಾಟಕದ ಪೊಲೀಸರ ಸಾಮರ್ಥ್ಯ ಶಂಕಿಸಬೇಡಿ' ಎಂದರು.

ಸರ್ಕಾರದ ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಬಿಜೆಪಿ ಸದಸ್ಯರು, ಸಭಾಧ್ಯಕ್ಷರ ಪೀಠದ ಎದುರು ಧಾವಿಸಿ ಧರಣಿ ಆರಂಭಿಸಿದರು. 'ಸಿಬಿಐ ತನಿಖೆ ಆಗಲೇಬೇಕು' ಎಂದು ಘೋಷಣೆ ಕೂಗಲಾರಂಭಿಸಿದರು. ಹತ್ತು ನಿಮಿಷ ಕಲಾಪ ಮುಂದೂಡಿದ ಸ್ಪೀಕರ್ ಯು.ಟಿ. ಖಾದರ್, ಬಿಜೆಪಿ ಸದಸ್ಯರ ಮನವೊಲಿಸಲು ಯತ್ನಿಸಿದರು.

ಬಳಿಕ ಕಲಾಪ ಆರಂಭವಾದಾಗಲೂ ಬಿಜೆಪಿ ಸದಸ್ಯರು ಧರಣಿ ಮುಂದುವರಿಸಿದರು. ಗದ್ದಲದ ಮಧ್ಯದಲ್ಲೇ ಸಿಎಜಿ ವರದಿ ಮಂಡಿಸಲಾಯಿತು. ಬಳಿಕ ಕಲಾಪವನ್ನು ಬುಧವಾರಕ್ಕೆ ಮುಂದೂಡಿದರು.

ಪರಿಷತ್‌ನಲ್ಲೂ ಧರಣಿ: ವಿಧಾನ ಪರಿಷತ್‌ನಲ್ಲೂ ಈ ಕುರಿತು ಉತ್ತರ ನೀಡಿದ ಪರಮೇಶ್ವರ, ಸಿಬಿಐ ತನಿಖೆಗೆ ವಹಿಸಬೇಕೆಂಬ ಬಿಜೆಪಿ ಸದಸ್ಯರ ಬೇಡಿಕೆಯನ್ನು ತಳ್ಳಿಹಾಕಿದರು. ಅಷ್ಟರಲ್ಲೇ ಸಭಾಪತಿ ಬಸವರಾಜ ಹೊರಟ್ಟಿ ಕಲಾಪ ಮುಂದೂಡಿದರು. ತಕ್ಷಣವೇ ಸಭಾಪತಿ ಪೀಠದ ಎದುರು ಧಾವಿಸಿದ ಬಿಜೆಪಿ ಸದಸ್ಯರು ಧರಣಿ ಆರಂಭಿಸಿದರು.

ಆರೋಪಿಗಳು ಪೊಲೀಸ್ ಕಸ್ಟಡಿಗೆ


ನಾರಾಯಣ ಮಾಳಿ


ಹಸನ್ ದಲಾಯತ್

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಹಿರೇಕೋಡಿಯ ಜೈನ ಮುನಿ ಕಾಮಕುಮಾರ ಅವರ ಕೊಲೆ ಆರೋಪಿಗಳನ್ನು ಚಿಕ್ಕೋಡಿಯ ಜೆಎಂಎಫ್‌ಸಿ ನ್ಯಾಯಾಲಯವು ಮಂಗಳವಾರದಿಂದ (ಜುಲೈ 11) ಐದು ದಿನ ಪೊಲೀಸ್ ಕಸ್ಟಡಿಗೆ ನೀಡಿದೆ.

ಕೊಲೆಯ ಪ್ರಮುಖ ಆರೋಪಿ ನಾರಾಯಣ ಮಾಳಿ, ಇನ್ನೊಬ್ಬ ಆರೋಪಿ ಹಸನ್ ದಲಾಯತ್‌ನನ್ನು ಪೊಲೀಸರು ಮಂಗಳವಾರ ನ್ಯಾಯಾಲಯದ ಎದುರು ಹಾಜರುಪಡಿಸಿದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯದ ನ್ಯಾಯಾಧೀಶ ಚಿದಾನಂದ ಬಡಿಗೇರ ಅವರು, ಹೆಚ್ಚಿನ ತನಿಖೆಗೆ ಇಬ್ಬರನ್ನೂ ಐದು ದಿನ ಪೊಲೀಸ್ ಕಸ್ಟಡಿಗೆ ನೀಡಿ ಆದೇಶ ಮಾಡಿದರು. ಬೆಳಗಾವಿ ಬಳಿಯ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿದ್ದ ಆರೋಪಿಗಳನ್ನು ಚಿಕ್ಕೋಡಿಗೆ ಕರೆ ತಂದು, ತಾಲ್ಲೂಕು ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಿ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ನ್ಯಾಯಾಲಯಕ್ಕೆ ಕರೆದೊಯ್ದರು. ನ್ಯಾಯಾಧೀಶರ ಆದೇಶದ ಬಳಿಕ ಪೊಲೀಸರು ತಮ್ಮ ಸುಪರ್ದಿಗೆ ಪಡೆದರು.

ಮುಂದುವರಿದ ಪ್ರತಿಭಟನೆ: ಮುನಿಶ್ರೀ ಅವರ ಹತ್ಯೆ ಖಂಡಿಸಿ ಬೆಳಗಾವಿ, ರಾಮದುರ್ಗ, ಸವದತ್ತಿಯಲ್ಲಿ ಮಂಗಳವಾರವೂ ಪ್ರತಿಭಟನೆ ಮುಂದುವರಿದವು. 'ಇಬ್ಬರು ಆರೋಪಿಗಳಿಗೆ ಗಲ್ಲುಶಿಕ್ಷೆ ನೀಡಬೇಕು' ಎಂದು ಒತ್ತಾಯಿಸಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗ ದಳ ಜಿಲ್ಲಾ ಘಟಕದ ಕಾರ್ಯಕರ್ತರು ಬೆಳಗಾವಿಯಲ್ಲಿ ಪ್ರತಿಭಟಿಸಿದರು.

ತಿ. ನರಸೀಪುರಕ್ಕೆ ಬಿಜೆಪಿ ಸಮಿತಿ ಭೇಟಿ • ಕುಟುಂಬ ಸದಸ್ಯರಿಗೆ ಸಾಂತ್ವನ

ವೇಣುಗೋಪಾಲ್ ಹತ್ಯೆ: 6 ಮಂದಿ ಸೆರೆ

ಪ್ರಜಾವಾಣಿ ವಾರ್ತೆ


ಮಣಿಕಂಠ


ಶಂಕರ್


ಹ್ಯಾರಿಸ್


ಸಂದೇಶ


ಅನಿಲ್


ಮಂಜು

ಮೈಸೂರು: ಜಿಲ್ಲೆಯ ತಿ. ನರಸೀಪುರದಲ್ಲಿ ಜು. 9ರಂದು ನಡೆದಿದ್ದ ಯುವ ಬ್ರಿಗೇಡ್ ಸಂಘಟನೆ ಸಂಚಾಲಕ ವೇಣುಗೋಪಾಲ ನಾಯಕ (31) ಹತ್ಯೆ ಪ್ರಕರಣದ ಆರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಪಟ್ಟಣದ ಮಣಿಕಂಠ, ಸಂದೇಶ, ಅನಿಲ್, ಶಂಕರ್, ಮಂಜು ಹಾಗೂ ಹ್ಯಾರಿಸ್ ಬಂಧಿತರು. 'ವೈಯಕ್ತಿಕ ದ್ವೇಷದಿಂದ ಕೊಲೆ ನಡೆದಿದ್ದು, ಪ್ರಮುಖ ಆರೋಪಿ ಮಣಿಕಂಠ ಹಾಗೂ ವೇಣುಗೋಪಾಲ ನಡುವೆ ಹಳೇ ವೈಷಮ್ಯವಿತ್ತು' ಎಂದು ಪೊಲೀಸರು ತಿಳಿಸಿದರು.

ಮಣಿಕಂಠ, 20ನೇ ವಾರ್ಡ್‌ನಿಂದ ನರಸೀಪುರ ಪುರಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸೋತಿದ್ದರು. ಪ್ರಕರಣದ 4ನೇ ಆರೋಪಿ ಶಂಕರ್, ಮೈಸೂರು ಮಹಾನಗರ ಪಾಲಿಕೆಯ ಬಿಜೆಪಿ ಸದಸ್ಯೆ ಲಕ್ಷ್ಮಿ ಕಿರಣ್ ಅವರ ಸಹೋದರ.

ಬಿಜೆಪಿ ನಿಯೋಗ ಭೇಟಿ: ವೇಣುಗೋಪಾಲ ಅವರ ಮನೆಗೆ ಬಿಜೆಪಿ ಸತ್ಯಶೋಧನಾ ಸಮಿತಿ ಸದಸ್ಯರ ತಂಡವು ಮಂಗಳವಾರ ಭೇಟಿ ನೀಡಿ ಸಾಂತ್ವನ ಹೇಳಿತು. ವೈಯಕ್ತಿಕ ನೆರವಿನ ಚೆಕ್ ವಿತರಿಸಿತು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಮಾತನಾಡಿ 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಹಿಂದೂ ಚಟುವಟಿಕೆಗಳನ್ನು ಹತ್ತಿಕ್ಕುವ, ಹಿಂದೂ ಚಟುವಟಿಕೆಗಳ ನೇತೃತ್ವ ವಹಿಸಿದವರನ್ನು ಮುಗಿಸುವಂತಹ ಪ್ರಯತ್ನ ಹೆಚ್ಚಿದೆ' ಎಂದು ದೂರಿದರು.

'ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ ಅವರ ಪುತ್ರ ಸುನಿಲ್ ಬೋಸ್ ಅವರಿಗೂ ಆರೋಪಿಗಳಿಗೂ ನಿಕಟ ಸಂಪರ್ಕ ಇದೆ. ಅವರೆಲ್ಲ ಈ ಬಾರಿಯ ಚುನಾವಣೆಯಲ್ಲಿ ಮಹದೇವಪ್ಪ ಪರ ಕೆಲಸ ಮಾಡಿದ್ದರು. ಇದೊಂದು ಪೂರ್ವಯೋಜಿತ ಕೃತ್ಯ. ಆಯುಧಗಳನ್ನು ಬಳಸಿ, 30ಕ್ಕೂ ಹೆಚ್ಚು ಕಡೆಗಳಲ್ಲಿ ಚುಚ್ಚಿ ಹತ್ಯೆ ಮಾಡಲಾಗಿದೆ. ಹಂತಕರಿಗೆ ಬೆಂಬಲ ನೀಡಿದವರು ಯಾರು? ಸಮಗ್ರ ತನಿಖೆಗೆ ಮುನ್ನವೇ ಹ್ಯಾರಿಸ್ ಎಂಬ ಆರೋಪಿಗೆ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಲೀನ್‌ಚಿಟ್ ನೀಡಿದ್ದು ಏಕೆ' ಎಂದು ಪ್ರಶ್ನಿಸಿದರು. 'ಆರೋಪಿ ಬಿಜೆಪಿಯವರೇ ಆಗಿದ್ದರೂ ಕ್ರಮ ಕೈಗೊಳ್ಳಿ. ನಾವು ಯಾರನ್ನೂ ರಕ್ಷಿಸಲು ಬಂದಿಲ್ಲ' ಎಂದರು.


ವೇಣುಗೋಪಾಲ್ ಮನೆಗೆ ಬಿಜೆಪಿ ಸತ್ಯಶೋಧನಾ ಸಮಿತಿ ಸದಸ್ಯರ ತಂಡವು ಮಂಗಳವಾರ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿತು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಶಾಸಕರಾದ ಡಾ. ಸಿ.ಎನ್. ಅಶ್ವತ್ಥನಾರಾಯಣ, ಶ್ರೀವತ್ಸ ಇದ್ದರು

ಟೊಮೆಟೊ, ಶುಂಠಿ ಕಳವು

ದೊಡ್ಡಬಳ್ಳಾಪುರ: ತಾಲ್ಲೂಕಿನ ಲಕ್ಷ್ಮೀದೇವಿಪುರ ಮತ್ತು ನಾಗಸಂದ್ರದ ತೋಟಗಳಲ್ಲಿ ಕೊಯ್ಲಿಗೆ ಬಂದಿದ್ದ ಟೊಮೆಟೊ ಮತ್ತು ಶುಂಠಿಯನ್ನು ಭಾನುವಾರ ರಾತ್ರಿ ಕಳವು ಮಾಡಲಾಗಿದೆ. ಲಕ್ಷ್ಮೀದೇವಿಪುರದ ಜಗದೀಶ್ ಎಂಬುವರು ಒಂದು ಎಕರೆಯಲ್ಲಿ ಬೆಳೆದಿದ್ದ ಅಂದಾಜು ₹1.50 ಲಕ್ಷ ಮೌಲ್ಯದ ಟೊಮೆಟೊ ಹಾಗೂ ನಾಗಸಂದ್ರದ ಬಸವರಾಜ ಎಂಬ ರೈತರು ನಾಟಿ ಮಾಡಿದ್ದ ₹16 ಸಾವಿರ ಮೌಲ್ಯದ ಹಸಿ ಶುಂಠಿಯನ್ನು ರಾತ್ರೋರಾತ್ರಿ ಕಟಾವು ಮಾಡಿ ತೆಗೆದುಕೊಂಡು ಹೋಗಿದ್ದಾರೆ.



ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಲು ಆಗ್ರಹಿಸಿ ಪ್ರತಿಭಟನೆ ನಡೆಸಿದ ಆಕಾಂಕ್ಷಿಗಳು

ಆಯ್ಕೆ ಪ್ರಕ್ರಿಯೆ ಪೂರ್ಣಕ್ಕೆ ಅಭ್ಯರ್ಥಿಗಳ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಸಂಬಂಧಿಸಿದಂತೆ ಬಾಕಿಯಿರುವ ಎಲ್ಲ ಪ್ರಕ್ರಿಯೆಗಳಿಗೂ ಚಾಲನೆ ನೀಡಬೇಕು ಎಂದು ಆಗ್ರಹಿಸಿ, ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ತಾತ್ಕಾಲಿಕ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಬಾಕಿಯಿರುವ ದಾಖಲಾತಿ ಪರಿಶೀಲನೆ, ವೈದ್ಯಕೀಯ ಹಾಗೂ ಪೊಲೀಸ್ ಇಲಾಖೆಯ ಪರಿಶೀಲನೆ, ಅಂಕಪಟ್ಟಿಯ ನೈಜತೆ ಪರಿಶೀಲನೆ ಹಾಗೂ ಸಿಂಧುತ್ವದ ಪ್ರಕ್ರಿಯೆಗಳು ಈಗಾಗಲೇ ಮುಕ್ತಾಯಗೊಳ್ಳಬೇಕಿತ್ತು. ಆದರೆ, ಇನ್ನೂ ಪ್ರಕ್ರಿಯೆಗೆ ಚಾಲನೆಯನ್ನೇ ನೀಡಿಲ್ಲ. ಕಾಲಮಿತಿಯಲ್ಲಿ ಆಯ್ಕೆ ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿದರು.

2021ರ ಸೆಪ್ಟೆಂಬರ್ 30ರಂದು ಆಯ್ಕೆ ಪ್ರಕ್ರಿಯೆಗೆ ಚಾಲನೆ ನೀಡಲಾಗಿತ್ತು. 26 ವಿಷಯಗಳ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಯ ನೇಮಕಾತಿಗೆ ಸರ್ಕಾರವು ಅಧಿಸೂಚನೆ ಹೊರಡಿಸಿತ್ತು. ಎಲ್ಲ ಪ್ರಕ್ರಿಯೆಗೆ ಎರಡು ವರ್ಷ ಹಿಡಿದಿದೆ. ಮೆರಿಟ್ ಪಟ್ಟಿಯಲ್ಲಿ ಹೆಸರಿರುವ ಕಾರಣಕ್ಕೆ ಅತಿಥಿ ಉಪನ್ಯಾಸಕ ಹುದ್ದೆಯಿಂದಲೂ ನಮ್ಮನ್ನು ಕೈಬಿಡಲಾಗಿತ್ತು. ಅಲ್ಲಿಯೂ ಕೆಲಸ ಇಲ್ಲ. ಇತ್ತ ನೇಮಕಾತಿಯೂ ನಡೆಯುತ್ತಿಲ್ಲ ಎಂದು ಅಳಲು ತೋಡಿಕೊಂಡರು.

ವಿಧಾನ ಪರಿಷತ್ ಸದಸ್ಯರಾದ ಅ. ದೇವೇಗೌಡ, ಎಸ್.ಎಲ್. ಭೋಜೇಗೌಡ, ವೈ.ಎ. ನಾರಾಯಣ ಸ್ವಾಮಿ, ಮರಿತಿಬ್ಬೇಗೌಡ ಮತ್ತು ಶಶೀಲ್ ನಮೋಶಿ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಅಹವಾಲು ಆಲಿಸಿದರು.

ಅಮೀನ್ ಮಟ್ಟು ಸೇರಿ ನಾಲ್ವರಿಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ರಾಜ್ಯ ಎಸ್ಸಿ, ಎಸ್ಟಿ ಪತ್ರಿಕಾ ಸಂಪಾದಕರ ಸಂಘ ನೀಡುವ 2022–23ನೇ ಸಾಲಿನ 'ಬಿ. ರಾಚಯ್ಯ ದತ್ತಿನಿಧಿ ವಾರ್ಷಿಕ ಪ್ರಶಸ್ತಿ'ಗೆ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಅವರನ್ನು ಆಯ್ಕೆ ಮಾಡಲಾಗಿದೆ.

ಈ ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ. ಸುದ್ದಿ ಮಾಧ್ಯಮ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡದ (ಎಸ್‌ಟಿ) ಮೂವರು ಹಿರಿಯ ಸಂಪಾದಕರಿಗೆ ನೀಡುವ 'ವಾರ್ಷಿಕ ಪ್ರಶಸ್ತಿ'ಯನ್ನೂ ಘೋಷಿಸಿದ್ದು, ಕೋಲಾರದ ಸಿ. ಮುನಿಯಪ್ಪ, ಚಿತ್ರದುರ್ಗದ ಮೈಲಾರಪ್ಪ ಮತ್ತು ಬೀದರ್‌ನ ಮಾಳಪ್ಪ ಅಡಸಾರೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹ 5 ಸಾವಿರ ನಗದು ಒಳಗೊಂಡಿದೆ.

ತಿಂಗಳ ಕೊನೆಯ ವಾರ ಬೆಂಗಳೂರಿನಲ್ಲಿ ನಡೆಯಲಿರುವ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷ ಚೆಲುವರಾಜು, ಪ್ರಧಾನ ಕಾರ್ಯದರ್ಶಿ ಸೋಮಶೇಖರ ಕೆರಗೋಡು ತಿಳಿಸಿದ್ದಾರೆ.



ಸುಭಾಷಿತ

ಖಾಲಿ ಜೇಬು ಇದುವರೆಗೂ ಯಾರ ಹಿನ್ನಡೆಗೂ ಕಾರಣವಾಗಿಲ್ಲ, ಖಾಲಿ ತಲೆ ಮತ್ತು ಖಾಲಿ ಹೃದಯದಿಂದಷ್ಟೇ ಮನುಷ್ಯ ಹಿಂದುಳಿಯುತ್ತಾನೆ.

– ನಾರ್ಮನ್ ವಿನ್ಸೆಂಟ್ ಪೀಲೆ

‘ಉತ್ತರ’ದಲ್ಲಿ ಜಲಪ್ರಳಯದ ಪ್ರಕೋಪ ನಿಸರ್ಗದ್ದಲ್ಲ, ಮಾನವನದೇ ಪ್ರತಾಪ

ಹಠಾತ್ ಮೇಘಸ್ಫೋಟ ಮತ್ತು ಮಹಾಧಾರೆಯಿಂದ ಉತ್ತರ ಭಾರತದ ಏಳು ರಾಜ್ಯಗಳು ತತ್ತರಿಸುತ್ತಿವೆ. ಮನುಷ್ಯನಿರ್ಮಿತ ಕಟ್ಟಡ, ಕಾಲುವೆ, ರಸ್ತೆ, ಸೇತುವೆ, ವಿದ್ಯುತ್ ಗೋಪುರ ಎಲ್ಲವನ್ನೂ ಬುಡಮೇಲಾಗಿಸಿ ಸಾಗುವ ನಿಸರ್ಗದ ಈ ಫೂತ್ಕಾರದಿಂದ, ಕಾರು, ಬಸ್ಸು, ಲಾರಿಗಳೆಲ್ಲ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿರುವ ದೃಶ್ಯಗಳು ಬೀಭತ್ಸ ಎನ್ನಿಸುವಂತಿವೆ. ಹಿಮಾಚಲ ಪ್ರದೇಶ, ಉತ್ತರಾಖಂಡ, ಉತ್ತರಪ್ರದೇಶ, ಹರಿಯಾಣ, ಪಂಜಾಬ್ ಮತ್ತು ರಾಜಸ್ಥಾನ ಎಲ್ಲೆಲ್ಲೂ ಪ್ರಳಯದ ತಾಂಡವ ಕಾಣುತ್ತಿದೆ. 40ಕ್ಕೂ ಹೆಚ್ಚು ಮಂದಿ ಜೀವ ಕಳೆದುಕೊಂಡಿದ್ದಾರೆ. ಕುಲ್ಲು-ಮನಾಲಿಯಲ್ಲಿ ರಾಷ್ಟ್ರೀಯ ಹೆದ್ದಾರಿಯ ಬಹುದೊಡ್ಡ ಭಾಗ ಕುಸಿದು 500ಕ್ಕೂ ಹೆಚ್ಚು ಪ್ರವಾಸಿಗರು ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಲೇಹ್-ಲಡಾಕ್, ಶಿಮ್ಲಾ-ಕಾಲ್ಕಾ ಹೆದ್ದಾರಿ ಭಗ್ನಗೊಂಡಿದೆ. ಪಂಜಾಬಿನಲ್ಲಿ ಸಟ್ಲೇಜ್, ಘಾಘರಾ ನದಿಗಳು ಉಕ್ಕಿ ಹರಿಯುತ್ತಿವೆ. ರಾಜಸ್ಥಾನದ 11 ಜಿಲ್ಲೆಗಳಲ್ಲಿ ಅತಿವೃಷ್ಟಿ ಆಗುತ್ತಿದೆ. ಉತ್ತರಾಖಂಡದಲ್ಲಿ ಬದರಿನಾಥ್ ಹೆದ್ದಾರಿ ಜಖಂಗೊಂಡಿದೆ. ದೆಹಲಿಯಲ್ಲಿ ಯಮುನಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಹರಿಯಾಣದ ಪಂಚಕುಲಾ, ಅಂಬಾಲಾ, ಕುರುಕ್ಷೇತ್ರಗಳಲ್ಲೆಲ್ಲ ‘ಕುರುಕ್ಷೇತ್ರ’ದ ವಿಧ್ವಂಸಕತೆಯ ಚಿತ್ರಣಗಳೇ ಕಾಣುತ್ತಿವೆ.



ನಿಸರ್ಗವನ್ನು ಎಲ್ಲಿ ಮಣಿಸಬೇಕು, ಎಲ್ಲಿ ಅದಕ್ಕೆ ನಾವೇ ಮಣಿಯಬೇಕು ಎಂಬುದನ್ನು ತುರ್ತಾಗಿ ನಿರ್ಣಯಿಸಬೇಕಾದ ಕಾಲಘಟ್ಟದಲ್ಲಿ ನಾವಿದ್ದೇವೆ

ಹಿಮಾಚಲ ಪ್ರದೇಶವೊಂದರಲ್ಲೇ ಒಂದೇ ದಿನದ ಮೇಘಸ್ಫೋಟದಿಂದ ₹ 4,000 ಕೋಟಿಗಳಷ್ಟು ನಷ್ಟವಾಗಿದೆ ಎಂದು ಅಲ್ಲಿನ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಹೇಳಿದ್ದಾರೆ.

ಮುಂಗಾರಿನ ಈ ದಿನಗಳಲ್ಲಿ ಮಳೆಮಾರುತದ ಕೆಲಮಟ್ಟಿನ ತಾಡನ ನಿರೀಕ್ಷಿತವೇ ಆಗಿದ್ದರೂ ಈ ಬಾರಿ ವಾಯವ್ಯ ದಿಕ್ಕಿನಿಂದ ಇನ್ನೊಂದು ಮೇಘಸಮೂಹ ಅನಿರೀಕ್ಷಿತವಾಗಿ ಇದಕ್ಕೆ ಡಿಕ್ಕಿ ಹೊಡೆದಿದ್ದೇ ಇಷ್ಟೊಂದು ವಿರಾಟ್ ಸ್ವರೂಪ ಪಡೆಯಲು ಕಾರಣ ಎಂದು ತಜ್ಞರು ಹೇಳುತ್ತಿದ್ದಾರೆ. ಸಾಮಾನ್ಯವಾಗಿ ಚಳಿಗಾಲದ ಆರಂಭದಲ್ಲಿ ಮೆಡಿಟರೇನಿಯನ್ ಸಮುದ್ರದ ಮೇಲಿಂದ ಬೀಸಿಬರಬೇಕಿದ್ದ ಜಲಮಾರುತ ಈ ಬಾರಿ ಈಗಲೇ ಧಾವಿಸಿ ಬಂದು, ಮಾನ್ಸೂನ್ ಮಳೆಮಾರುತದೊಂದಿಗೆ ಕೈಜೋಡಿಸಿ ಇಮ್ಮಡಿ ಹೊಡೆತ ಕೊಟ್ಟಿದೆ. ದಕ್ಷಿಣ ಭಾರತದ ಕೆಲವೆಡೆ ಮಳೆ ಇನ್ನೂ ಬೇಕಾಗಿದೆಯಾದರೂ ಈಗಿನ ಈ ಜೋಡಿ ತಾಡನದಿಂದಾಗಿ ದೇಶದ ಒಟ್ಟೂ ಮಳೆಯ ವಾರ್ಷಿಕ ಸರಾಸರಿಯನ್ನು ಮೀರಿ ವಾಯವ್ಯದಲ್ಲಿ ವರ್ಷಾಘಾತ ಉಂಟಾಗಿದೆ. ಹೀಗಾದೀತೆಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿತ್ತಾದರೂ ಅದನ್ನು ಪ್ರತಿಬಂಧಿಸುವ ಯಾವ ವಿದ್ಯೆಯೂ ನಮಗೆ ಗೊತ್ತಿಲ್ಲ. ಸಂಕಟದಲ್ಲಿ ಇರುವವರನ್ನು ಪಾರುಮಾಡಲು ಹೆಲಿಕಾಪ್ಟರ್‌ಗಳನ್ನು ಕಳಿಸಬೇಕೆಂದರೂ ವಾತಾವರಣ ತಿಳಿಯಾಗಬೇಕಿದೆ. ಇಂದಿನ ಯುಗದ ವಿಪರ್ಯಾಸ ಏನೆಂದರೆ, ನಮ್ಮ ಅನುಕೂಲಕ್ಕೆಂದು ನಾವು ಗಿಡ-ಮರಗಳನ್ನು ಬೀಳಿಸುತ್ತ, ಗುಡ್ಡ ಬೆಟ್ಟಗಳನ್ನು ಎಲ್ಲೆಂದರಲ್ಲಿ ನೆಲಸಮ ಮಾಡುತ್ತ ಸಾಗುವುದಕ್ಕೆ ‘ಅಭಿವೃದ್ಧಿ’ ಎನ್ನುತ್ತೇವೆ. ಪ್ರಕೃತಿ ತಾನಾಗಿ ಅದೇ ಕೆಲಸಗಳನ್ನು ಮಾಡುತ್ತಿದ್ದರೆ ನಾವು ಅದಕ್ಕೆ ‘ನೈಸರ್ಗಿಕ ಪ್ರಕೋಪ’ ಎನ್ನುತ್ತೇವೆ. ಈಗೀಗಂತೂ ಚಂಡಮಾರುತ, ಕಾಳ್ಗಿಚ್ಚು, ಹಿಮಕುಸಿತ, ಅತಿವೃಷ್ಟಿ, ದೂಳುಮಾರುತ, ಅತಿಬರಗಾಲ ಎಲ್ಲವೂ ಪದೇಪದೇ ಸಂಭವಿಸತೊಡಗಿವೆ, ಮೊದಲಿಗಿಂತ ತೀವ್ರವಾಗುತ್ತಿವೆ. ಇದಕ್ಕೆಲ್ಲ ಇಡೀ ಭೂಮಿಯನ್ನು ಆವರಿಸುತ್ತಿರುವ ಬಿಸಿಪ್ರಳಯವೇ ಕಾರಣವೆಂದು ವಿಜ್ಞಾನಿಗಳು ಎಚ್ಚರಿಸುತ್ತಲೇ ಬಂದಿದ್ದು, ಈಗೀಗಂತೂ ಅದು ನಿಸ್ಸಂಶಯವಾಗಿ ಸಾಬೀತಾಗುತ್ತಿದೆ. ತಾಪಮಾನ ಏರಿಕೆಯನ್ನು ತಡೆಗಟ್ಟುವ ದಿಸೆಯಲ್ಲಿ ಜಾಗತಿಕ ಯತ್ನ ಬೇಕಾಗಿದೆಯಾದರೂ ಬಿಸಿಪ್ರಳಯದ ಪರಿಣಾಮಗಳನ್ನು ಎದುರಿಸಲು ಬೇಕಾದ ಕ್ಷಮತೆ, ಆರ್ಥಿಕ ಬಂಡವಾಳ ಮತ್ತು ನೆಲಮಟ್ಟದ ಪೂರ್ವಸಿದ್ಧತೆಗಳನ್ನು ಆಯಾ ರಾಷ್ಟ್ರಗಳೇ ರೂಪಿಸಿಕೊಳ್ಳಬೇಕಿದೆ. ಇಲ್ಲವಾದರೆ ಅಭಿವೃದ್ಧಿಯ ಹೆಸರಿನಲ್ಲಿ ನಾವು ತೊಡಗಿಸುವ ಬಂಡವಾಳವನ್ನೆಲ್ಲ ಉದ್ರಿಕ್ತ ಹವಾಮಾನವೇ ಕೊಚ್ಚಿಕೊಂಡೊಯ್ಯಲಿದೆ. ಪರಿಹಾರದ ವೆಚ್ಚ, ಮರುನಿರ್ಮಾಣದ ವೆಚ್ಚ ಎಲ್ಲವುಗಳ ಕರಾಳ ಭಾರ ನಾಳಿನ ತಲೆಮಾರನ್ನೂ ತಟ್ಟಲಿದೆ.

ನಮ್ಮ ಈಗಿನ ಅಭಿವೃದ್ಧಿಯ ಸಿದ್ಧಸೂತ್ರಗಳನ್ನು ಇಂದಿನ ಹವಾಗುಣ ಬದಲಾವಣೆಯ ಪ್ರಖರಸತ್ಯದ ಬೆಳಕಿನಲ್ಲಿ ಮತ್ತೆ ಪರಿಶೀಲಿಸಬೇಕಾಗಿದೆ. ಗುಡ್ಡದ ಇಳಿಜಾರು ಹಾಗೂ ನದಿತೀರಗಳಲ್ಲಿ ಅಭಿವೃದ್ಧಿಯ ನೀಲನಕ್ಷೆಯನ್ನು ಬದಲಿಸಬೇಕಿದೆ. ಎತ್ತರದ ಪ್ರದೇಶಗಳಲ್ಲಿ ಅಣೆಕಟ್ಟು-ಕಾಲುವೆ, ಸುರಂಗ-ಸೇತುವೆ, ಹೆದ್ದಾರಿಗಳ ವಿಸ್ತರಣೆ, ವಿದ್ಯುತ್ ಗೋಪುರಗಳ ನಿರ್ಮಾಣದ ಸಿವಿಲ್ ಎಂಜಿನಿಯರಿಂಗ್ ಸೂತ್ರಗಳು ಬದಲಾಗಬೇಕಿದೆ. ಪ್ರವಾಸೋದ್ಯಮದ ಒತ್ತಡದಿಂದಾಗಿ ಶೀಘ್ರ ಬದಲಾಗುತ್ತಿರುವ ಪಟ್ಟಣಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ರೂಪಿಸಲಾದ ನಿಯಮಗಳನ್ನು ಮರುಪರಿಶೀಲಿಸಬೇಕಿದೆ. ವರ್ಷವರ್ಷಕ್ಕೂ ಹೆಚ್ಚುತ್ತಿರುವ ನಿಸರ್ಗ ಪ್ರಕೋಪಗಳನ್ನು ಎದುರಿಸುವುದು ಹೇಗೆ ಎಂಬುದರ ಮೂಲಪಾಠಗಳನ್ನು ದೇಶದ ಪ್ರತಿ ಪಂಚಾಯಿತಿ ಮಟ್ಟದಲ್ಲೂ ನಾಗರಿಕರಿಗೆ ಮನನ ಮಾಡಿಸಬೇಕಿದೆ. ಎಲ್ಲಕ್ಕಿಂತ ಮುಖ್ಯವೆಂದರೆ, ನಿಸರ್ಗವನ್ನು ಎಲ್ಲಿ ಮಣಿಸಬೇಕು, ಎಲ್ಲಿ ಅದಕ್ಕೆ ನಾವೇ ಮಣಿಯಬೇಕು ಎಂಬುದನ್ನು ತುರ್ತಾಗಿ ನಿರ್ಣಯಿಸಬೇಕಾದ ಕಾಲಘಟ್ಟದಲ್ಲಿ ನಾವಿದ್ದೇವೆ. ವಿಶೇಷವಾಗಿ, ಪಶ್ಚಿಮಘಟ್ಟ ಸಾಲು ಮತ್ತು ಹಿಮಾಲಯದ ಬೆಟ್ಟಸಾಲುಗಳಂಥ ಪರಿಸರಸೂಕ್ಷ್ಮ ಪ್ರದೇಶಗಳಲ್ಲಿ ಪ್ರಗತಿಪಥವನ್ನು ನಿರ್ಮಿಸುವ ಧಾವಂತದಲ್ಲಿ ಒಂದು ಹೆಜ್ಜೆಯನ್ನು ಹಿಂದಿಡುವುದೇ ನಮ್ಮ ಸಾಧನೆಯ ಅಳತೆಗೋಲಾಗಬೇಕಿದೆ.

ದಿನದ ಟ್ವೀಟ್

ಮಾದರಿ ವಿಶ್ವವಿದ್ಯಾಲಯ ವ್ಯವಸ್ಥೆ



ಒಂದು ನಗರದಲ್ಲಿ ಒಂದು ದಿನದಂತೆ 12 ದಿನಗಳಿಗೂ ಹೆಚ್ಚು ಕಾಲ ಅಮೆರಿಕದಲ್ಲಿ ಉಳಿದು, ಅಲ್ಲಿನ ಡಜನ್ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ವಾಪಸ್ ಬಂದಿದ್ದೇನೆ. ಅವರ ಸಮಾಜೋ- ಆರ್ಥಿಕ ಮಾದರಿಯ ಬಗ್ಗೆ ನನಗೆ ತಕರಾರುಗಳು ಇರಬಹುದು. ಆದರೆ, ವಾಪಸ್ ಬರುವಷ್ಟರಲ್ಲಿ, ಅವರ ವಿಶ್ವವಿದ್ಯಾಲಯ ವ್ಯವಸ್ಥೆ ಹಾಗೂ ಅದು ಹೊಂದಿರುವ ಸ್ವಾಯತ್ತತೆಯ ಪರವಾದ ದೊಡ್ಡ ಅಭಿಮಾನಿ ಆಗಿಬಿಟ್ಟಿದ್ದೇನೆ. ಭಾರತೀಯ ನೀತಿ ನಿರೂಪಕರಿಗೂ ಈ ಬಗ್ಗೆ ತಿಳಿದೇ ಇರುತ್ತದೆ. ಈ ದಿಸೆಯಲ್ಲಿ ಅವರು ಮಾಡಬೇಕಾದುದು ಬಹಳಷ್ಟಿದೆ.

ಎಸ್.ವೈದ್ಯಸುಬ್ರಮಣಿಯಂ, ಶಿಕ್ಷಣ ತಜ್ಞ

ಕಿಡಿನುಡಿ



ದೆಹಲಿ– ಮೀರಟ್ ಹೆದ್ದಾರಿಯಲ್ಲಿ (ಎಕ್ಸ್‌ಪ್ರೆಸ್‌ವೇ) 8 ಕಿ.ಮೀವರೆಗೂ ಶಾಲಾ ಬಸ್ ತಪ್ಪು ಮಾರ್ಗದಲ್ಲಿ ಸಂಚರಿಸಿದ ಮಾಹಿತಿ ಇದೆ. ಹೆದ್ದಾರಿ ಅಧಿಕಾರಿಗಳು ಏನು ಮಾಡುತ್ತಿದ್ದರು? ನಿದ್ರಿಸುತ್ತಿದ್ದರೇ? ಪೊಲೀಸರು ಏನು ಮಾಡುತ್ತಿದ್ದರು? ನಿರ್ಲಕ್ಷ್ಯ ವಹಿಸಿದ್ದರೇ? 6 ಮುಗ್ಧ ಜೀವಗಳು ಬಲಿಯಾಗಿವೆ. ನಮ್ಮ ದೇಶದಲ್ಲಿ ಮಾನವ ಜೀವಕ್ಕೆ ಕಿಮ್ಮತ್ತೇ ಇಲ್ಲದಂತಾಗಿದೆ. ‘ನೋಡಿ, ಎಷ್ಟು ಕಿ.ಮೀ. ರಸ್ತೆ ನಿರ್ಮಿಸಿದ್ದೇವೆ’ ಎಂದು ಸಚಿವರು ತಮ್ಮ ಬೆನ್ನನ್ನು ತಟ್ಟಿಕೊಳ್ಳುತ್ತಾರೆ. ಈ ಸಾವುಗಳಿಗಾಗಿ ಎಷ್ಟು ಮಂದಿ ತಪ್ಪಿತಸ್ಥ ಅಧಿಕಾರಿಗಳನ್ನು ಬಂಧಿಸಲಾಗುತ್ತದೆ?

ಸಂದೀಪ್ ಮನುಧಾನೆ, ಉದ್ಯಮಿ

25 ವರ್ಷಗಳ ಹಿಂದೆ

ಭಾನುವಾರ, 12-7-1998

• ನಕಲಿ ಅಂಕಪಟ್ಟಿ ಹಾವಳಿ ತಡೆಗೆ ಹಾಲೋಗ್ರಾಂ

ಧಾರವಾಡ, ಜುಲೈ 11– ನಕಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣಪತ್ರಗಳನ್ನು ಸೃಷ್ಟಿಸುವುದನ್ನು ತಡೆಗಟ್ಟಲು ಅಧಿಕೃತ ಅಂಕಪಟ್ಟಿಗಳಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಲಾಂಛನದ ಹಾಲೋಗ್ರಾಮ್ ಬಳಸಲು ಕರ್ನಾಟಕ ವಿಶ್ವವಿದ್ಯಾನಿಲಯ ಆಲೋಚಿಸುತ್ತಿದೆ ಎಂದು ಕುಲಪತಿ ಡಾ. ಎ.ಎಂ.ಪಠಾಣ್ ತಿಳಿಸಿದರು.

ಹಾಲೋಗ್ರಾಂ ಬಳಕೆಯಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ ದೇಶದ ಎರಡನೆಯ ವಿಶ್ವವಿದ್ಯಾನಿಲಯ ಆಗಲಿದೆ. ಕಾಶ್ಮೀರ ವಿಶ್ವವಿದ್ಯಾನಿಲಯ ಈಗಾಗಲೇ ಯಶಸ್ವಿಯಾಗಿ ಬಳಕೆ ಮಾಡಿಕೊಂಡಿದೆ. ಗುಜರಾತಿನ ಪ್ರೌಢಶಾಲಾ ಪರೀಕ್ಷಾ ಮಂಡಳಿಯು ಹಾಲೋಗ್ರಾಂ ಬಳಸಿದ್ದು, ನಕಲು ಮಾಡುವ ಪ್ರಯತ್ನವನ್ನು ತಡೆಗಟ್ಟಬಹುದು ಎನ್ನುವುದು ದೃಢಪಟ್ಟಿದೆ. ವಿಶ್ವವಿದ್ಯಾನಿಲಯದ ಲಾಂಛನದ ಹಾಲೋಗ್ರಾಂ ಪೂರೈಸಲು ಫ್ರಾನ್ಸ್ ದೇಶದ ಸಂಸ್ಥೆಯೊಂದನ್ನು ಸಂಪರ್ಕಿಸಲಾಗಿದೆ. ಹಾಲೋಗ್ರಾಂ ಅನ್ನು ನಕಲು ಮಾಡಲು ಅಥವಾ ಅಳಿಸಲು ಸಾಧ್ಯವಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ

ಗುರುವಾರ, 12-7-1973

• ‘ರಾಜ್ಯದಿಂದ ಐದನೇ ಯೋಜನಾ ಗಾತ್ರದಲ್ಲಿ ಕಡಿತ ಇಲ್ಲ’

ಬೆಂಗಳೂರು, ಜುಲೈ 11– ಐದನೇ ಯೋಜನಾ ಗಾತ್ರವನ್ನು ಕಡಿತಗೊಳಿಸಬೇಕೆಂಬ ಯೋಜನಾ ಆಯೋಗದ ಮನವಿಯನ್ನು ಮೈಸೂರು ಸರ್ಕಾರ ತಿರಸ್ಕರಿಸಿದೆ. ಇದರೊಂದಿಗೆ, 300 ಕೋಟಿ ರೂಪಾಯಿಗಳ ಯೋಜನೇತರ ವೆಚ್ಚ ಒಳಗೊಂಡ 1,650 ಕೋಟಿ ರೂಪಾಯಿಗಳನ್ನು ಮೀಸಲಿಡಲು ನಿರ್ಧರಿಸಿದೆ.

ಶೇಕಡ 8.5ರಷ್ಟು ಬೆಳವಣಿಗೆ ದರದ ನಿರೀಕ್ಷೆ ಹೊಂದಿದ ರಾಜ್ಯದ ಐದನೇ ಯೋಜನಾ ಕರಡಿಗೆ ಒಪ್ಪಿಗೆ ಅಂತಿಮಗೊಂಡಿದ್ದು, ಮುಂದಿನ ವಾರ ಅದನ್ನು ಯೋಜನಾ ಆಯೋಗಕ್ಕೆ ಕಳುಹಿಸುವ ಸಾಧ್ಯತೆಯಿದೆ. ರಾಜ್ಯ ಸರ್ಕಾರವು ಮೈಸೂರು ರಾಜ್ಯದಲ್ಲಿ ತಲಾ ಆದಾಯವನ್ನು ರಾಷ್ಟ್ರೀಯ ಸರಾಸರಿ ಮಟ್ಟಕ್ಕೆ ಕೊಂಡೊಯ್ಯುವ ಭರವಸೆ ಹೊಂದಿದೆ. ಒಂದೊಮ್ಮೆ ಯೋಜನಾ ಗಾತ್ರವನ್ನು ತಗ್ಗಿಸಿದರೆ ಬಡತನದ ವಿರುದ್ಧದ ತನ್ನ ಸಮರವು ಪರಿಣಾಮಕಾರಿಯಾಗಿ ಇರುವುದಿಲ್ಲ ಎಂದು ರಾಜ್ಯವು ಆಯೋಗಕ್ಕೆ ತಿಳಿಸಿದೆ.

ಇಡೀ ಸಮಾಜದಲ್ಲಿ ಸಂಸದೀಯ ನಡೆ– ನುಡಿಗೆ ನಿಜದ ನೆಲೆ ಒದಗಿಸಬೇಕಾಗಿದೆ

ಹಾದಿ ತಪ್ಪಿದ ಸಂಸದೀಯ ನಡೆ–ನುಡಿ



ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ನಮ್ಮ ದೇಶವು ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯನ್ನು ಜಾರಿಗೆ ತಂದು ಏಳು ದಶಕಗಳು ಮೀರಿವೆ. ಡಾ. ಅಂಬೇಡ್ಕರ್ ಅವರು ಕಟ್ಟಿಕೊಟ್ಟ ಸಂವಿಧಾನದಿಂದ ಇದು ಸಾಧ್ಯವಾಗಿದೆ. ಪ್ರಜಾಪ್ರಭುತ್ವದಲ್ಲಿ ಸಂಸದೀಯ ನಡೆ–ನುಡಿಗಳಿಗೆ ಮನ್ನಣೆ ನೀಡಬೇಕು. ಪಕ್ವಗೊಂಡ ಪ್ರಜಾಸತ್ತಾತ್ಮಕ ಪರಿಭಾಷೆಯು ಮುನ್ನೆಲೆಗೆ ಬರಬೇಕು. ಆದರೆ ನಮ್ಮ ಸಮಾಜದ ಸಂಕೀರ್ಣತೆ ಹೇಗಿದೆಯೆಂದರೆ, ಪುರೋಹಿತಶಾಹಿ, ಬಂಡವಾಳಶಾಹಿ ಮತ್ತು ಊಳಿಗಮಾನ್ಯ ಪದ್ಧತಿಯ ಗುಣಲಕ್ಷಣಗಳು ವಿವಿಧ ಪ್ರಮಾಣದಲ್ಲಿ ಸಮ್ಮಿಶ್ರಣಗೊಂಡು, ಪ್ರಜಾಪ್ರಭುತ್ವದ ಪರಿಕಲ್ಪನೆ ಮತ್ತು ಪರಿಭಾಷೆಗೆ ಧಕ್ಕೆ ತರುವ ಮನೋಪ್ರವೃತ್ತಿಯು ಮುನ್ನೆಲೆಗೆ ಬರುತ್ತಿದೆ. ವ್ಯಕ್ತಿಕೇಂದ್ರಿತ ಚರ್ಚೆಗಳಿಗೆ ಆದ್ಯತೆ ಸಿಗುತ್ತಿದೆ.

ಈಗ ಕೆಲವು ನಿದರ್ಶನಗಳನ್ನು ನೋಡೋಣ. ಚುನಾವಣೆಗಳು ಹತ್ತಿರ ಬಂದಂತೆ, ಮಾಧ್ಯಮದವರು ‘ನಿಮ್ಮ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಯಾರು? ಪ್ರಧಾನಮಂತ್ರಿ ಅಭ್ಯರ್ಥಿ ಯಾರು?’ ಎಂದು ಕೇಳುತ್ತಾರೆ. ಕೆಲವು ಪಕ್ಷದವರು ಇನ್ನಿತರ ಪಕ್ಷದವರನ್ನು ಇದೇ ಪ್ರಶ್ನೆ ಕೇಳುತ್ತಾರೆ. ಈ ಪ್ರವೃತ್ತಿಯು ಸಂಸದೀಯ ಪ್ರಜಾಪ್ರಭುತ್ವದ ನೀತಿ ನಿಯಮಗಳಿಗೆ ವಿರುದ್ಧವಾದುದೆಂಬ ಸತ್ಯವನ್ನು ಇವರೆಲ್ಲರೂ ಬದಿಗೊತ್ತುತ್ತಾರೆ.


ಮುಖ್ಯಮಂತ್ರಿ ಮತ್ತು ಪ್ರಧಾನಮಂತ್ರಿ ಅಭ್ಯರ್ಥಿಯನ್ನು ಮೊದಲೇ ಘೋಷಣೆ ಮಾಡುವುದರಿಂದ ಕ್ರಮವಾಗಿ ಶಾಸಕರು ಮತ್ತು ಸಂಸದರ ಹಕ್ಕನ್ನು ಕಸಿದುಕೊಂಡಂತೆ ಆಗುತ್ತದೆ. ಕೆಲವೊಮ್ಮೆ ಶಾಸಕರು ಮತ್ತು ಸಂಸದರು ಮುಖ್ಯಮಂತ್ರಿ ಹಾಗೂ ಪ್ರಧಾನಮಂತ್ರಿಯ ಆಯ್ಕೆಯ ಹಕ್ಕನ್ನು ತಂತಮ್ಮ ಪಕ್ಷದ ಹೈಕಮಾಂಡ್‌ಗೆ ವರ್ಗಾಯಿಸುತ್ತಾರಾದರೂ ಇಲ್ಲಿ ತಾಂತ್ರಿಕ ಅಗತ್ಯವನ್ನು ಸ್ವಯಂ ಒಪ್ಪಿಗೆಯಿಂದ ಪೂರೈಸಲಾಗುತ್ತದೆ. ಆದರೆ ಚುನಾವಣೆಗೆ ಮುಂಚೆಯೇ ಮುಖ್ಯಮಂತ್ರಿ ಮತ್ತು ಪ್ರಧಾನಮಂತ್ರಿ ಅಭ್ಯರ್ಥಿಯನ್ನು ಘೋಷಿಸುವುದು, ಅದಕ್ಕಾಗಿ ಒತ್ತಾಯಿಸುವುದು ತಾತ್ವಿಕವಾಗಿಯಾಗಲಿ, ತಾಂತ್ರಿಕವಾಗಿಯಾಗಲಿ ಸಂಸದೀಯ ನಡೆಯಾಗುವುದಿಲ್ಲ.

ಸಂವಿಧಾನದ 75ನೇ ವಿಧಿ ಪ್ರಕಾರ ಪ್ರಧಾನ ಮಂತ್ರಿಯ ಹುದ್ದೆ ಸೃಷ್ಟಿಯಾಗುತ್ತದೆ. 75(1)ರಿಂದ 75(6)ರವರೆಗಿನ ವಿಧಿಗಳಲ್ಲಿ ಅರ್ಹತೆ, ಆಯ್ಕೆಯ ವಿಧಾನ, ಅಧಿಕಾರ ವ್ಯಾಪ್ತಿಯ ವಿವರಗಳಿವೆ. 79ನೇ ವಿಧಿ ಪ್ರಕಾರ ಸಂಸತ್ತು ರಚಿತವಾಗುತ್ತದೆ. ಅಂತೆಯೇ 163ನೇ ವಿಧಿ ಅನ್ವಯ ಮುಖ್ಯಮಂತ್ರಿಯ ಹುದ್ದೆಯನ್ನು ಸೃಷ್ಟಿಸಲಾಗುತ್ತದೆ ಮತ್ತು 168ನೇ ವಿಧಿ ಪ್ರಕಾರ ವಿಧಾನ ಮಂಡಲಗಳ ರಚನೆಯಾಗುತ್ತದೆ. ವಿಧಾನಮಂಡಲ ಮತ್ತು ಸಂಸತ್ತಿನ ರಚನೆ ಆಗುವುದಕ್ಕೆ ಮುಂಚೆಯೇ ಮುಖ್ಯಮಂತ್ರಿ ಹಾಗೂ ಪ್ರಧಾನಿ ಅಭ್ಯರ್ಥಿಯನ್ನು ಘೋಷಣೆ ಮಾಡುವುದು ಸಂವಿಧಾನದ ಈ ಎಲ್ಲ ವಿಧಿಗಳ ಉಲ್ಲಂಘನೆಯಾಗುತ್ತದೆ.

ಮಾಧ್ಯಮದವರು ಸಮೀಕ್ಷೆ ನಡೆಸಿ, ಯಾರು ಮುಖ್ಯಮಂತ್ರಿ ಆಗಬೇಕು, ಯಾರು ಪ್ರಧಾನಮಂತ್ರಿ ಆಗಬೇಕು ಎಂದು ಕೇಳಿ ಫಲಿತಾಂಶ ಪ್ರಕಟಿಸುವುದು ಕೂಡ ಸಂಸದೀಯವಲ್ಲದ ಅಸಂಗತ ಪ್ರಕ್ರಿಯೆ. ಯಾಕೆಂದರೆ, ಜನರು ತಮ್ಮಿಚ್ಛೆಯ ಶಾಸಕ ಹಾಗೂ ಸಂಸದರನ್ನು ಆಯ್ಕೆ ಮಾಡಿ ಅವರಿಗೆ ಮುಖ್ಯಮಂತ್ರಿ ಮತ್ತು ಪ್ರಧಾನಮಂತ್ರಿ ಆಯ್ಕೆಯ ಹಕ್ಕನ್ನು ವರ್ಗಾಯಿಸುತ್ತಾರೆಯೇ ವಿನಾ ತಾವೇ ನೇರವಾಗಿ ಆಯ್ಕೆ ಮಾಡುವುದಿಲ್ಲ. ಎಷ್ಟೋ ಸಾರಿ ಸಮೀಕ್ಷೆಯಲ್ಲಿ ಗರಿಷ್ಠ ಜನಪ್ರಿಯತೆ ಗಳಿಸಿದವರು ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿ ಆಗುವುದಿಲ್ಲ. ಯಾಕೆಂದರೆ ಆಯ್ಕೆಯ ಸಂಸದೀಯ ಪ್ರಕ್ರಿಯೆಯೇ ಬೇರೆ ಇರುತ್ತದೆ.

ಇನ್ನೊಂದು ಅಂಶವನ್ನೂ ಇಲ್ಲಿ ಹೇಳಬೇಕು. ಇಂದು ರಾಜಕಾರಣದಲ್ಲಿ ವಂಶಾಡಳಿತ ಮತ್ತು ಕುಟುಂಬ ರಾಜಕಾರಣದ ಪ್ರಶ್ನೆ ರಾಷ್ಟ್ರೀಯ ಸಮಸ್ಯೆಯೆಂಬಂತೆ ಚರ್ಚಿತವಾಗುತ್ತಿದೆ. ಚುನಾವಣೆಗೆ ಮುಂಚೆ ಮುಖ್ಯಮಂತ್ರಿ, ಪ್ರಧಾನಮಂತ್ರಿ ಅಭ್ಯರ್ಥಿಯ ಘೋಷಣೆ ಮಾಡುವುದರಲ್ಲಿ ಆಂಶಿಕವಾಗಿಯಾದರೂ ವಂಶಾಡಳಿತದ ಚಹರೆಯಿದೆ. ಇದನ್ನು ಹೀಗೆ ವಿವರಿಸಬಹುದು: ವಂಶಾಡಳಿತದಲ್ಲಿ ಉತ್ತರಾಧಿಕಾರಿಯನ್ನು ಮೊದಲೇ ನಿರ್ಧರಿಸಲಾಗಿರುತ್ತದೆ. ಇದು ರಾಜಪ್ರಭುತ್ವ ಪದ್ಧತಿಯ ನಡೆ. ಇಲ್ಲಿ ಆಯ್ಕೆಯ ಪ್ರಶ್ನೆ ಇಲ್ಲವೇ ಇಲ್ಲ. ನೇರ ನಾಮನಿರ್ದೇಶನ ಮಾತ್ರ ಇರುತ್ತದೆ. ಆದ್ದರಿಂದ ಚುನಾವಣೆಗೆ ಮುಂಚೆಯೇ ಉತ್ತರಾಧಿಕಾರಿ ಅಭ್ಯರ್ಥಿ ಘೋಷಣೆಯು ರಾಜಪ್ರಭುತ್ವದ ಅರ್ಥಾತ್ ವಂಶಾಡಳಿತದ ಪಳೆಯುಳಿಕೆಯಂತೆ ಕಾಣುತ್ತದೆ.

ಈಗ ನೇರವಾಗಿ ವಂಶಾಡಳಿತ ಮತ್ತು ಕುಟುಂಬ ರಾಜಕಾರಣದ ವಿಷಯಕ್ಕೆ ಬರೋಣ. ಇವೆರಡೂ ಒಂದೇ ಅಲ್ಲ. ವಂಶಾಡಳಿತದಲ್ಲಿ ಆಯ್ಕೆಗೆ ಅವಕಾಶ ಇರುವುದಿಲ್ಲ. ಕುಟುಂಬ ರಾಜಕಾರಣವು ಆಯ್ಕೆಯಿಂದ ಹೊರಗುಳಿಯಲು ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ಈಗ ವಂಶಾಡಳಿತವಿಲ್ಲ. ನಿರ್ದಿಷ್ಟ ವಂಶದವರು ಅಧಿಕಾರಕ್ಕೆ ಬರಬೇಕಾದರೂ ಚುನಾವಣೆಯ ಆಯ್ಕೆಯನ್ನು ಎದುರಿಸಬೇಕಾಗುತ್ತದೆ. ಚುನಾವಣೆಯಲ್ಲಿ ಒಂದೇ ಕುಟುಂಬದವರನ್ನು ಗೆಲ್ಲಿಸುವ ಅಥವಾ ಸೋಲಿಸುವ ಹಕ್ಕು ಜನರಿಗೆ ಇದ್ದೇ ಇರುತ್ತದೆ. ಇಷ್ಟಕ್ಕೂ ಕುಟುಂಬ ರಾಜಕಾರಣವು ಆಯಾ ಕುಟುಂಬದ ಅಭ್ಯರ್ಥಿಗಳಿಗೆ ಚುನಾವಣೆಯಲ್ಲಿ ಒಂದು ಶಕ್ತಿಶಾಲಿ ಚಿಮ್ಮುಹಲಗೆ ಆಗುತ್ತದೆಯೇ ವಿನಾ ಸದಾ ಅವರನ್ನು ಗೆಲ್ಲಿಸುತ್ತದೆ ಎಂದು ಹೇಳಲಾಗದು. ಕುಟುಂಬದ ಪ್ರಬಲ ಪ್ರಭಾವಳಿ ಇದ್ದೂ ಸೋತವರ ನಿದರ್ಶನಗಳಿವೆ. ಇದು ಪ್ರಜಾಪ್ರಭುತ್ವದ ಶಕ್ತಿ. ಇಷ್ಟಾಗಿಯೂ ಕುಟುಂಬ ರಾಜಕಾರಣವೇ ಅತಿಯಾಗಿ ಇತರರ ಅವಕಾಶವನ್ನು ಕದ್ದರೆ, ಆಯಾ ಪಕ್ಷಗಳ ಒಳಗೇ ಪ್ರತಿರೋಧ ಹುಟ್ಟಬೇಕು.



ಕುಟುಂಬ ರಾಜಕಾರಣವು ಈಗ ಬಹುಪಾಲು ಪಕ್ಷಗಳಲ್ಲಿದ್ದು, ಕೆಲ ಪಕ್ಷಗಳಿಗೆ ಅದು ಆಸರೆಯೂ ಆಗಿರುವ ವಿಚಿತ್ರ ನಮ್ಮೆದುರು ಇದೆ. ಇಷ್ಟಾಗಿಯೂ ಅದು ಆಯಾ ಪಕ್ಷಗಳ ಆಂತರಿಕ ಸಮಸ್ಯೆಯೇ ವಿನಾ ರಾಷ್ಟ್ರೀಯ ಸಮಸ್ಯೆಯಲ್ಲ. ಪಕ್ಷಗಳ ಆಂತರಿಕ ಸಮಸ್ಯೆಯನ್ನು ರಾಷ್ಟ್ರೀಯ ಸಮಸ್ಯೆಯಂತೆ ಬಿಂಬಿಸುವ ಬದಲು ಈಗ ಪಕ್ಷಾಂತರ ಪ್ರವೃತ್ತಿಯನ್ನು ಒಂದು ರಾಷ್ಟ್ರೀಯ ಸಮಸ್ಯೆ ಎಂದು ಪರಿಗಣಿಸಬೇಕಾಗಿದೆ. ಪಕ್ಷಾಂತರ ನಿಷೇಧ ಕಾಯ್ದೆಯನ್ನು ಮತ್ತಷ್ಟು ಬಲಪಡಿಸಿ, ಜನರ ಆಯ್ಕೆಯ ಹಕ್ಕಿಗೆ ಬೆಲೆ ತರಬೇಕಾಗಿದೆ. ನಿರ್ದಿಷ್ಟ ಪಕ್ಷದ ಮೂರನೇ ಎರಡು ಭಾಗದಷ್ಟು ಶಾಸಕರು, ಸಂಸದರು ಪಕ್ಷಾಂತರ ಮಾಡಿದರೆ, ಅವರ ಸ್ಥಾನಗಳಿಗೆ ಚ್ಯುತಿಯಿಲ್ಲ ಎಂಬ ಈಗಿನ ನಿಯಮವನ್ನು ಬದಲಾಯಿಸಿ, ಸಂಖ್ಯೆಗಳ ಲೆಕ್ಕ ಮಾಡದೆ, ಇಡೀ ಪಕ್ಷದ ಸಮಸ್ತ ಶಾಸಕ-ಸಂಸದರು ಪಕ್ಷಾಂತರ ಮಾಡಿದರೂ ಅವರ ಸ್ಥಾನ ಚ್ಯುತಿ ಮಾಡಬೇಕು. ಈ ದಿಸೆಯಲ್ಲಿ ತಳಸ್ಪರ್ಶಿ ಚರ್ಚೆ-ಚಿಂತನೆಗಳು ನಡೆದು, ರಾಜಕೀಯ ನೈತಿಕತೆ ಮತ್ತು ತಾತ್ವಿಕತೆಗಳ ನೆಲೆಯಲ್ಲಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಬೇಕು.

ಪಕ್ಷಾಂತರದ ಜೊತೆಗೆ ಭ್ರಷ್ಟಾಚಾರವು ಒಂದು ರಾಷ್ಟ್ರೀಯ ಸಮಸ್ಯೆಯಾಗಿದೆ. ಆದರೆ ಬಹುಪಾಲು ಪಕ್ಷಗಳಿಗೆ ಇದು ಸಮಸ್ಯೆಯಾಗಿ ಕಾಡುತ್ತಿಲ್ಲ; ಸಹಜವೆಂಬಂತೆ ಕಾಣುತ್ತಿದೆ. ವಿಶೇಷವಾಗಿ, ಚುನಾವಣೆ ಮತ್ತು ಭ್ರಷ್ಟಾಚಾರದ ಸಂಬಂಧವು ಈಗ ರಹಸ್ಯವಾಗಿ ಉಳಿದಿಲ್ಲ. ಆದ್ದರಿಂದ ಭ್ರಷ್ಟಾಚಾರವಿಲ್ಲದ ಚುನಾವಣೆಗೆ ಅಗತ್ಯ ಕ್ರಮ ಕೈಗೊಳ್ಳುವುದು ಪ್ರಜಾಪ್ರಭುತ್ವದ ರಾಷ್ಟ್ರೀಯ ಆದ್ಯತೆಯಾಗಬೇಕು.

ಸಲ್ಲದ ಹಾಗೂ ಇಲ್ಲದ ವಿಷಯಗಳನ್ನು ರಾಷ್ಟ್ರೀಯ ಸಮಸ್ಯೆಯಂತೆ ಪ್ರಚುರಪಡಿಸುವ ಬದಲು ಜನರ ಸಮಸ್ಯೆಗಳ ಚರ್ಚೆ ಮುನ್ನೆಲೆಗೆ ಬರಬೇಕು. ಮಹಿಳೆ ಮತ್ತು ದಲಿತರ ಮೇಲಿನ ದೌರ್ಜನ್ಯಗಳು ನಿಂತಿಲ್ಲ, ರೈತರ ಸಮಸ್ಯೆಗಳಿಗೆ ಪೂರ್ಣ ಪರಿಹಾರ ಸಿಕ್ಕಿಲ್ಲ. ಬೆಲೆಯೇರಿಕೆಗೆ ಕಡಿವಾಣವಿಲ್ಲ. ಬಡವರಿಗೆ ಕೊಡುವ ಸೌಲಭ್ಯಗಳನ್ನು ಬಿಟ್ಟಿಭಾಗ್ಯವೆಂದು ಹೀಗಳೆಯುವವರು ಬಂಡವಾಳಶಾಹಿಗಳಿಗೆ ಲಕ್ಷಾಂತರ ಕೋಟಿಗಳ ರಿಯಾಯಿತಿ ತೋರುವುದನ್ನು ಪ್ರಶ್ನಿಸುವುದಿಲ್ಲ. ಈ ಮಧ್ಯೆ ನಿರುದ್ಯೋಗ ಮತ್ತು ಹಸಿವಿನ ಪ್ರಮಾಣ ಏರುತ್ತಿದೆ. ಇವೆಲ್ಲವೂ ತುರ್ತು ಪರಿಹಾರವನ್ನು ಬಯಸುವ ರಾಷ್ಟ್ರೀಯ ಸಮಸ್ಯೆಗಳಾಗಿವೆ.

ಮೇಲ್ಮನೆಗಳಿಗೆ ನಾಮನಿರ್ದೇಶನ ಮಾಡುವಾಗ ಬಹಳಷ್ಟು ಸಾರಿ ಸಂವಿಧಾನದ ಆಶಯವನ್ನು ಉಲ್ಲಂಘಿಸಿ ತಂತಮ್ಮ ಪಕ್ಷದವರಿಗೇ ಅವಕಾಶ ಕಲ್ಪಿಸುವ ಪ್ರವೃತ್ತಿ ಸಹಜ ನಡೆಯಾಗಿಬಿಟ್ಟಿದೆ.

ಅಂತೆಯೇ ವ್ಯಕ್ತಿಕೇಂದ್ರಿತ ಹುಸಿ ವೈಭವೀಕರಣ ಹಾಗೂ ವ್ಯಕ್ತಿನಿಂದೆಯ ಕ್ಷುಲ್ಲಕ ರಾಜಕಾರಣಗಳು ‘ಬಹುಪಾಲು’ ಪಕ್ಷಗಳ ಪ್ರವೃತ್ತಿಯಾಗಿವೆ. ಜೊತೆಗೆ ನಂಜು ನಾಲಿಗೆಯ ನುಡಿನೇತಾರರು ಸಂಸದೀಯ ಸಂವೇದನೆಯನ್ನು ನಾಶ ಮಾಡುತ್ತಿದ್ದಾರೆ. ಇಂಥ ನಡೆ–ನುಡಿಗಳು ರಾಜಕೀಯ ಕ್ಷೇತ್ರದ ‘ಕೆಲವು’ ನೇತಾರರಲ್ಲಿ ಮಾತ್ರವಲ್ಲ, ಇತರ ಕ್ಷೇತ್ರದವರಲ್ಲೂ ಕಾಣಿಸುತ್ತಿವೆ. ಆದ್ದರಿಂದ ಎಲ್ಲ ಕ್ಷೇತ್ರದವರೂ ಸೇರಿ ಇಡೀ ಸಮಾಜದಲ್ಲಿ ಸಂಸದೀಯ ನಡೆ–ನುಡಿಗಳಿಗೆ ನಿಜದ ನೆಲೆ ಒದಗಿಸಬೇಕಾಗಿದೆ.

ಚುರುಮುರಿ



ಕಲಾಪ ಕನ್ನಡ

• ಮಣ್ಣೆರಾಜು

‘ಸಂಧಿ ಅಂದ್ರೇನು ಗೊತ್ತೇನ್ರಿ? ಸಮಾಸ ಗೊತ್ತೇನ್ರಿ?...’ ಎಂದು ಸಿ.ಎಂ. ಸಿದ್ದರಾಮಯ್ಯ ಅವರು ಕೇಳಿದ್ದಕ್ಕೆ ಸದನದ ಸದಸ್ಯರು ಕ್ಷಣ ಗಲಿಬಿಲಿಯಾದರು...’ ಎಂದಳು ಸುಮಿ.

‘ಸ್ಕೂಲಿನಲ್ಲಿ ಕಲಿತ ಸಂಧಿ, ಸಮಾಸ ಈಗ ಎಷ್ಟು ಜನರಿಗೆ ನೆನಪಿದೆಯೋ ಗೊತ್ತಿಲ್ಲ’ ಅಂದ ಶಂಕ್ರಿ.

‘ಆಗ ಕಲಿತದ್ದು ಈಗಲೂ ಸಿದ್ದರಾಮಯ್ಯ ಅವರಿಗೆ ನೆನಪಿದೆಯಂತೆ. ಕನ್ನಡ ಭಾಷೆ, ಸಾಹಿತ್ಯ ಪ್ರೇಮ ಬೆಳೆಸಿಕೊಳ್ಳಿ ಅಂತ ಸಹಸದಸ್ಯರಿಗೆ ಸಲಹೆ ಮಾಡಿದರು. ಸಾಹಿತಿಗಳ ಸ್ಮರಣೆ ಮಾಡಿ, ಸಾಹಿತ್ಯದ ಸಾಲು, ಕವನದ ಸಾರ ಹೇಳಿ ಮೊನ್ನೆ ಗಣಿತದೊಂದಿಗೆ ಸಾಹಿತ್ಯ ಬೆರೆಸಿ ಬಜೆಟ್ ಮಂಡಿಸಿದರು’.

‘ಕಲಾಪದಲ್ಲಿ ಸದಸ್ಯರು ಬಳಸಬೇಕಾದ ಸಿರಿಗನ್ನಡ ಎಲ್ಲೆ ಮೀರಿ ಉರಿಗನ್ನಡ ಆಗಬಾರದು ಎಂಬ ಕಾಳಜಿಯಿಂದ ಅವರು ಹೀಗೆ ಹೇಳಿರಬಹುದು’.

‘ಇರಬಹುದು, ಸಲೀಸಾಗಿ ಚರ್ಚಿಸುವ ಸಹಜ ಕನ್ನಡ, ವ್ಯಂಗ್ಯ-ವಿಡಂಬನೆಯಿಂದ ನಗು ತರಿಸುವ ಲಘು ಕನ್ನಡ ಬಳಸಿದರೆ ಸದನದ ಸದಭಿರುಚಿ ಹೆಚ್ಚುತ್ತದೆ’.

‘ಮೈಸೂರು ಕನ್ನಡ, ಮಂಡ್ಯ ಕನ್ನಡ, ಮಂಗಳೂರು ಕನ್ನಡ, ಹುಬ್ಬಳ್ಳಿ ಕನ್ನಡ, ಬೆಂಗಳೂರಿನ ನಾನ್ ಕನ್ನಡ ಹೀಗೆ ಯಾವುದೇ ಕನ್ನಡ ಬಳಸಿದರೂ ಅರ್ಥವಾಗುತ್ತದೆ, ಅಪಾರ್ಥವೇನೂ ಆಗುವುದಿಲ್ಲ’.

‘ಸ್ಪೀಕರ್ ಖಾದರ್ ಅವರ ಕನ್ನಡವನ್ನು ಅಪಾರ್ಥ ಮಾಡಿಕೊಂಡ ಯತ್ನಾಳರು, ಸ್ಪೀಕರ್ ಟು ಕನ್ನಡ ಆ್ಯಪ್ ಸಿದ್ಧಪಡಿಸಿಕೊಡಿ ಅಂತ ಕೇಳಿಕೊಂಡರು’.

‘ಅದು ಅವರ ಆಡುಭಾಷೆಯ ಕನ್ನಡ. ಖಾದರ್ ಕನ್ನಡ, ಸಿದ್ದರಾಮಯ್ಯ ಕನ್ನಡ, ಬೊಮ್ಮಾಯಿ ಕನ್ನಡ, ಎಚ್‌ಡಿಕೆ ಕನ್ನಡ, ಯತ್ನಾಳ್ ಕನ್ನಡ, ಜಮೀರ್ ಕನ್ನಡ ಎನ್ನುವ ಹಲವಾರು ಆಡುನುಡಿಗಳಿವೆ. ಎಲ್ಲ ನುಡಿಯಲ್ಲೂ ಕನ್ನಡದ ಘನತೆ, ಧನ್ಯತೆ ಇದೆ. ವಿವಿಧತೆಯ ಆಡುಭಾಷೆಗಳಲ್ಲಿ ಏಕತೆಯ ನಾಡುಭಾಷೆ ಇದೆ. ಎಲ್ಲವೂ ಒಂದಾಗಿ ಕಲಾಪದಲ್ಲಿ ಕಲರ್‌ಫುಲ್ ಕನ್ನಡದ ಕಲರವ ಮೊಳಗುತ್ತಿದೆ...’ ಎಂದು ಶಂಕ್ರಿ ಅಭಿಮಾನಗೊಂಡ.

ಚರ್ಚೆ

ಅಂಕ ನೀಡಿಕೆ: ಭ್ರಮಾತ್ಮಕ ಮಾನವೀಯತೆ?!

ಬೇಜವಾಬ್ದಾರಿಯಿಂದ ಮೌಲ್ಯಮಾಪನ ಮಾಡುವ ಶಿಕ್ಷಕರಿಂದ ಮಕ್ಕಳಿಗೆ ಅನಗತ್ಯವಾಗಿ ಹೆಚ್ಚು ಅಂಕಗಳು ಪ್ರಾಪ್ತವಾಗುವ ಸಾಧ್ಯತೆ ಇರುತ್ತದೆ

• ಪು.ಸೂ.ಲಕ್ಷ್ಮೀನಾರಾಯಣ ರಾವ್

‘ಅಂಕ ಗಳಿಕೆಗೆ ಅನೈತಿಕ ಮಾದರಿ’ ಎಂಬ ಎಚ್.ಕೆ.ಶರತ್ ಅವರ ಲೇಖನ (ಸಂಗತ, ಜೂನ್ 26) ಚಿಂತನಾರ್ಹವಾಗಿದೆ. ‘ಮೌಲ್ಯಮಾಪನ ಮಾಡಿದವರು ಕಡಿಮೆ ಅಂಕ ನೀಡಿರುವ ನಿದರ್ಶನಗಳು ಮಾಧ್ಯಮ-ಗಳಲ್ಲಿ ಸುದ್ದಿಯಾದಂತೆ, ಹೆಚ್ಚು ಅಂಕ ನೀಡಿರುವುದು ಸುದ್ದಿ ಆಗುವುದಿಲ್ಲ. ಅಷ್ಟಾಗಿ ಚರ್ಚೆಗೂ ಒಳಪಡುವುದಿಲ್ಲ. ಮೌಲ್ಯಮಾಪನ ವ್ಯವಸ್ಥೆಯಲ್ಲಿ ಯಾವುದೇ ಉತ್ತರಕ್ಕೆ ನೀಡಬೇಕಿರುವ ಅಂಕಗಳಿಗಿಂತ ಕಡಿಮೆ ಅಂಕಗಳನ್ನು ನೀಡಿದ್ದರೆ ಅದನ್ನು ಪತ್ತೆ ಹಚ್ಚಿ ಸರಿಪಡಿಸಲು ಇರುವಷ್ಟು ಅವಕಾಶ, ಹೆಚ್ಚು ಅಂಕ ನೀಡಿದ್ದರೆ ಅದನ್ನು ಸರಿಪಡಿಸುವ ದಿಸೆಯಲ್ಲಿ ಇಲ್ಲ’ ಎಂಬ ಲೇಖಕರ ಮಾತುಗಳು ಗಮನಾರ್ಹ.

ಬಹಳಷ್ಟು ಮಂದಿ ಮೌಲ್ಯಮಾಪಕರ ಅಸಡ್ಡೆಯೇ ಇದಕ್ಕೆ ಕಾರಣ ಎನ್ನಬಹುದು. ನಾನೂ ಅನೇಕ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೌಲ್ಯಮಾಪಕನಾಗಿ ಕಾರ್ಯನಿರ್ವಹಿಸಿದ್ದೇನೆ. ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ನಾನಿನ್ನೂ ಒಂದನೇ ಪ್ಯಾಕೆಟ್‌ನಲ್ಲಿರುವ ಉತ್ತರಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನೇ ಮುಗಿಸಿರುವುದಿಲ್ಲ, ಆಗಲೇ ಕೆಲವರು ಎರಡೂ ಪ್ಯಾಕೆಟ್‌ಗಳನ್ನು ಮುಗಿಸಿ ಗೆಳೆಯರೊಂದಿಗೆ ಕಾಫಿ ಕುಡಿಯಲು ತೆರಳುತ್ತಿರುತ್ತಾರೆ. ನಮ್ಮಂಥವರನ್ನು ನೋಡಿ ಸ್ವಲ್ಪ ವ್ಯಂಗ್ಯದ ಮಾತುಗಳೂ ಕೇಳಿಬರುತ್ತವೆ.


ಕೆಲವು ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯಲ್ಲಿರುವ ಪ್ರಶ್ನೆಗಳನ್ನೇ ಉತ್ತರದ ಹಾಗೆ ಬರೆಯುತ್ತಾ ಹೋಗುತ್ತಾರೆ. ಪ್ರಶ್ನಾರ್ಥಕ ಚಿಹ್ನೆ ಇರುವುದಿಲ್ಲ ಅಷ್ಟೆ. ಉದಾಹರಣೆಗೆ, ‘ವಿಶ್ವಾಮಿತ್ರನು ದಶರಥನ ಮೇಲೆ ಕೋಪಗೊಳ್ಳಲು ಕಾರಣವೇನು’ ಎಂಬ ಪ್ರಶ್ನೆಗೆ ಕೆಲವು ವಿದ್ಯಾರ್ಥಿಗಳು, ‘ವಿಶ್ವಾಮಿತ್ರನು ದಶರಥನ ಮೇಲೆ ಕೋಪಗೊಳ್ಳಲು ಕಾರಣವೇನೆಂದರೆ’ ಎಂದು ಆರಂಭಿಸಿ ನಂತರ, ‘ಅಕ್ಷರಗಳು ಗುಂಡಾಗಿರಲಿ, ಪ್ರಶ್ನೆಯ ಸಂಖ್ಯೆಯನ್ನು ಸರಿಯಾಗಿ ನಮೂದಿಸಿ, ಕಾಗುಣಿತದೋಷ ಇಲ್ಲದ ಗುಂಡಾದ ಬರಹಕ್ಕೆ ಹೆಚ್ಚು ಅಂಕ ನೀಡಲಾಗುವುದು...’ ಹೀಗೆ ಪ್ರಶ್ನೆಪತ್ರಿಕೆಯ ಮೊದಲಲ್ಲಿ ಮುದ್ರಿಸಿರುವ ಸೂಚನೆಗಳಿಂದ ಮೊದಲ್ಗೊಂಡು ಪ್ರಶ್ನೆಗಳನ್ನೇ ನಕಲು ಮಾಡಿ, ಅಂಕಗಳ ಆಧಾರದ ಮೇಲೆ ಎರಡು, ಮೂರು, ನಾಲ್ಕು ಪ್ಯಾರಾಗಳಲ್ಲಿ ಬರೆದಿರುತ್ತಾರೆ.

ಇನ್ನು ಕೆಲವರು ತಮಗೆ ತೋಚಿದ ಏನೇನೋ (ಸಾಮಾನ್ಯವಾಗಿ ಸಿನಿಮಾಗಳ ವಿಷಯ) ಬರೆದು ಬಿಡುತ್ತಾರೆ. ಓದದೆ ಸುಮ್ಮನೆ ಕಣ್ಣುಹಾಯಿಸಿದರೆ, ಅದು ಸರಿಯಾದ ಉತ್ತರದ ಹಾಗೆಯೇ ಭಾಸವಾಗುತ್ತದೆ. ಈ ರೀತಿ ಮೌಲ್ಯಮಾಪಕರನ್ನು ಯಾಮಾರಿಸುವುದರಲ್ಲಿ ಕೆಲವು ವಿದ್ಯಾರ್ಥಿಗಳು ತುಂಬ ಸೃಜನಶೀಲರಾ-ಗಿರುತ್ತಾರೆ. ಬೇಗ ಮೌಲ್ಯಮಾಪನ ಕಾರ್ಯ ಮುಗಿಸಿ ಕೈ ತೊಳೆದುಕೊಂಡರೆ ಸಾಕು ಎಂಬ ಸ್ವಭಾವವನ್ನು ರೂಢಿಸಿಕೊಂಡ ಶಿಕ್ಷಕರು ಸರಿ ಉತ್ತರ ಅಲ್ಲದ ಇಂತಹ ಬರಹಗಳಿಗೂ ಅಂಕಗಳನ್ನು ನೀಡಿರುತ್ತಾರೆ. ಹೀಗೆ ಹೆಚ್ಚಿನ ಅಂಕಗಳು ಪ್ರಾಪ್ತವಾಗಿರುತ್ತವೆ.

ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದು, ಪ್ರಸ್ತುತ ನಿವೃತ್ತರಾಗಿರುವ ಗೆಳೆಯರಾದ ಕೆ.ಎಸ್.ರಾಮಮೂರ್ತಿ ಅವರು ಶಿಕ್ಷಕರ ಇಂತಹ ಬೇಜವಾಬ್ದಾರಿ ವರ್ತನೆಯ ಬಗ್ಗೆ ಮನನೊಂದು, ‘ನೀವು ಯಾಕೆ ಈ ಅನ್ಯಾಯಗಳ ಬಗ್ಗೆ ಪತ್ರಿಕೆಗೆ ಬರೆಯಬಾರದು?’ ಎಂದು ನನಗೆ ಹಿಂದೊಮ್ಮೆ ಸೂಚಿಸಿದ್ದರು.

ಶಾಲಾ ಹಂತಗಳಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಅಪರೂಪಕ್ಕೆ ಎಂಬಂತೆ ಕೆಲವು ಮಕ್ಕಳು ಬಂದು, ‘ಸಾರ್, ನನ್ನ ಈ ತಪ್ಪು ಉತ್ತರಕ್ಕೆ ಅಂಕ ಕೊಟ್ಟಿದ್ದೀರ’ ಎಂತಲೊ ಅಥವಾ ‘ಅಂಕಗಳನ್ನು ಕೊಡುವಾಗ ಹೆಚ್ಚು ಅಂಕ ಹಾಕಿದ್ದೀರಿ, ಕಡಿಮೆ ಮಾಡಿ’ ಎಂತಲೊ ಕೇಳಿದ್ದಿದೆ. ಆದರೆ ಪಬ್ಲಿಕ್ ಪರೀಕ್ಷೆಯ ಸಂದರ್ಭದಲ್ಲಿ ಹೀಗೆ ಆಗುವ, ಅಂದರೆ ‘ನನಗೆ ಬಂದಿರುವ ಅಂಕಗಳು ಹೆಚ್ಚಾಗಿವೆ, ಕಡಿಮೆ ಮಾಡಿ’ ಎಂದು ಅರ್ಜಿಸಿಕೊಳ್ಳುವುದು ಬಹುಶಃ ಇಲ್ಲವೇ ಇಲ್ಲ ಅನಿಸುತ್ತದೆ.

ಪ್ರೌಢಶಾಲಾ ಶಿಕ್ಷಕನಾಗಿ ವೃತ್ತಿಜೀವನವನ್ನು ಕಳೆದ ನಾನು, ವ್ಯಾಸಂಗದ ದೃಷ್ಟಿಯಲ್ಲಿ ತುಂಬಾ ಹಿಂದುಳಿದ ತರಗತಿಯ ಅಧ್ಯಾಪಕನಾಗಿ ಕಾರ್ಯನಿರ್ವಹಿಸಿದ್ದುಂಟು. ಮೂರೂ ವರ್ಷ ಆ ತರಗತಿಯ ಜವಾಬ್ದಾರಿ ನನ್ನದೇ. 8, 9 ಮತ್ತು 10ನೆಯ ತರಗತಿಗಳಲ್ಲಿ ನಾನೇ ಅವರಿಗೆ ಮಾಸಿಕ, ಅರ್ಧವಾರ್ಷಿಕ ಮತ್ತು ವಾರ್ಷಿಕ ಪರೀಕ್ಷೆಗಳ ಪ್ರಗತಿಪತ್ರವನ್ನು ಸಿದ್ಧಗೊಳಿಸಿ ಪೋಷಕರ ಅವಗಾಹನೆಗೆ ಕಳಿಸುತ್ತಿದ್ದೆ. ಆ ಮೂರೂ ವರ್ಷಗಳಲ್ಲಿ ಒಂದೇ ಒಂದು ಸಾರಿಯೂ ಆ ತರಗತಿಯ ಉತ್ತೀರ್ಣದ ಫಲಿತಾಂಶ ಶೇ 5 ಅನ್ನು ದಾಟಿರಲಿಲ್ಲ. ನನಗೆ ಆತಂಕ. ಆದರೆ ಹತ್ತನೇ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಮಾತ್ರ ಅದೇ ವಿದ್ಯಾರ್ಥಿಗಳ ಉತ್ತೀರ್ಣದ ಫಲಿತಾಂಶ ಶೇ 40 ಅನ್ನು ದಾಟಿತ್ತು. ಇದಕ್ಕೆ ಕಾರಣವೇನು ಎಂದು ಖಚಿತವಾಗಿ ಇಂದಿಗೂ ಗೊತ್ತಿಲ್ಲ. ಆದರೆ ಪರೀಕ್ಷೆಯಲ್ಲಿನ ನಕಲು ಮತ್ತು ಮೌಲ್ಯಮಾಪನ ದೋಷ ಎರಡೂ ಕಾರಣ ಇದ್ದಿರಬಹುದು ಎಂದು ಅನಿಸುತ್ತದೆ.



ಪಬ್ಲಿಕ್ ಪರೀಕ್ಷೆಗಳಲ್ಲಿ, ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ, ಬಿಟ್ಟ ಸ್ಥಳ ತುಂಬಿರಿ ಎಂಬಂಥ ವಸ್ತುನಿಷ್ಠ ಪ್ರಶ್ನೆಗಳಿಗೆ ಉತ್ತರಗಳನ್ನು ಪ್ರತಿ ಪರೀಕ್ಷಾ ಕೊಠಡಿಗೆ ಹೋಗಿ ಮಕ್ಕಳಿಗೆ ‘ಬರ್ಕೊಳ್ರೋ’ ಎಂದು ಹೇಳಿಕೊಟ್ಟು ನಕಲು ಮಾಡಿಸುವುದು ತಮ್ಮ ಬೋಧನಾ ಪ್ರಕ್ರಿಯೆಯ ಒಂದು ಭಾಗ ಎಂದೇ ಭಾವಿಸಿರುವ ಶಿಕ್ಷಕರೂ ಇದ್ದಾರೆ (ತದನಂತರ ತಿದ್ದಿಕೊಂಡವರೂ ಇದ್ದಾರೆ). ಅದು ತಪ್ಪು ಎಂಬುದಕ್ಕಿಂತ ‘ನಮ್ಮ ಮಕ್ಕಳು ಪಾಪ ಪಾಸಾಗಿ ಹೋಗಲಿ’ ಎಂಬ ಭ್ರಮಾತ್ಮಕ ‘ಮಾನವೀಯತೆ’ ಕ್ರಿಯಾಶೀಲವಾಗಿರುತ್ತದೆ. ಈ ಪ್ರಕ್ರಿಯೆ ಮುಖ್ಯೋಪಾಧ್ಯಾಯರ ಅಥವಾ ಆಡಳಿತ ಮಂಡಳಿಯವರ ಸೂಚನೆಯ ಮೇರೆಗೆ ನಡೆದಿರುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ಇಂದು ಅನೈತಿಕತೆ ಸರ್ವವ್ಯಾಪಿಯಾಗಿದೆ. ಅದೇ ‘ಯುಗಧರ್ಮ’ ಎನ್ನಿಸುವಷ್ಟು ಸಮೂಹ ಸನ್ನಿ ಉಂಟಾಗಿದೆ. ಇಂತಹ ಸಂದರ್ಭದಲ್ಲಿ ನೈತಿಕತೆಯನ್ನು ಹುಡುಕುವುದು ನಿರರ್ಥಕವೆನಿಸದೇ?

ವಾಚಕರ ವಾಣಿ

ಹೊಸ ತಾಲ್ಲೂಕು: ಚಿಂತಿಸಿ ಹೆಜ್ಜೆ ಇಡಿ

‘ವೈಜ್ಞಾನಿಕ ಮಾನದಂಡಗಳ ಆಧಾರದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸಲು ಪ್ರತ್ಯೇಕ ಮಾರ್ಗಸೂಚಿಗಳನ್ನು ರೂಪಿಸಲಾಗುವುದು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿರುವುದು (ಪ್ರ.ವಾ., ಜುಲೈ 11) ಉತ್ತಮ ನಡೆಯಾಗಿದೆ. ಜನಸಂಖ್ಯೆಗೆ ಅನುಗುಣವಾಗಿ, ಅಲ್ಲಿನ ಪ್ರದೇಶದ ವ್ಯಾಪ್ತಿಗನುಸಾರ ಆಗಾಗ್ಗೆ ಹೊಸ ತಾಲ್ಲೂಕುಗಳಿಗೆ ಬೇಡಿಕೆ ಬರುವುದು ಸಹಜ. ನೂತನವಾಗಿ ಅಧಿಕಾರಕ್ಕೆ ಬಂದವರು ತಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಪಡೆಯಲು ಈ ರೀತಿ ಘೋಷಿಸುವುದು ಸಂತೋಷ!

ಆದರೆ ಈ ಹಿಂದೆ ಘೋಷಿಸಿರುವ ಹೊಸ ತಾಲ್ಲೂಕುಗಳು ಯಾವುದೇ ರೀತಿಯ ಮೂಲ ಸೌಲಭ್ಯ, ಅಭಿವೃದ್ಧಿಯನ್ನು ಕಾಣದೆ ಸೊರಗಿರುವುದನ್ನೂ ನೋಡಬಹುದಾಗಿದೆ. ಒಂದು ಹೊಸ ತಾಲ್ಲೂಕು ರಚನೆಯೆಂದರೆ ತಮಾಷೆಯ ವಿಚಾರವಲ್ಲ. ಅಲ್ಲಿನ ಸರ್ವಾಂಗೀಣ ಅಭಿವೃದ್ಧಿಗೆ ಒತ್ತು ಕೊಡಬೇಕಾದುದು ಅವಶ್ಯಕ ಹಾಗೂ ಅನಿವಾರ್ಯ. ಸರ್ಕಾರಕ್ಕೆ ಬಹಳಷ್ಟು ವ್ಯಯವಾಗುತ್ತದೆ. ಜನಸಾಮಾನ್ಯರಿಗೆ ಸಹ ಆ ಪ್ರದೇಶ ಅಭಿವೃದ್ಧಿಯಾದಾಗ ಆಡಳಿತ ಪಕ್ಷದ ಕುರಿತು ಕೃತಜ್ಞತಾಭಾವ ಮೂಡುತ್ತದೆ. ಬರೀ ಘೋಷಣೆ ಮಾಡಿ, ಅಭಿವೃದ್ಧಿ ಎನ್ನುವುದು ಮರೀಚಿಕೆಯಾದರೆ ಆಡಳಿತದ ಕುರಿತು ತಿರಸ್ಕಾರ ಮೂಡುತ್ತದೆ. ಹೀಗಾಗಿ, ಘೋಷಣೆ ಮಾಡುವ ಮೊದಲು ಈ ಕುರಿತು ಚಿಂತಿಸಿ ಹೆಜ್ಜೆ ಇಡುವುದು ಒಳ್ಳೆಯದು.

ಎಚ್.ಎನ್.ಕಿರಣ್ ಕುಮಾರ್ ಹಳೇಹಳ್ಳಿ, ಗೌರಿಬಿದನೂರು

ಮುನಿ ಹತ್ಯೆ: ಸಾಮಾಜಿಕ ಮಾಧ್ಯಮದ ಪ್ರಭಾವ?

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿ ಗ್ರಾಮದಲ್ಲಿ ನಡೆದ ಜೈನ ಮುನಿಯ ಕೊಲೆ ಮತ್ತು ಆನಂತರದ ಶವ ವಿಸರ್ಜನೆಯ ಪ್ರಕರಣವನ್ನು ಖಂಡಿಸಲು ಶಬ್ದಗಳು ಸಾಲವು. ಇಂತಹ ಕ್ರೂರ ಕೃತ್ಯದ ಹಿಂದೆ, ಇತ್ತೀಚಿನ ದಿನಗಳಲ್ಲಿ ಮುಂಬೈ, ದೆಹಲಿ ಮತ್ತು ಇತರ ಕೆಲವು ಸ್ಥಳಗಳಲ್ಲಿ ಲಿವ್ ಇನ್ ಸಂಬಂಧದಲ್ಲಿ ನಡೆದ ಸಂಗಾತಿಗಳ ಕೊಲೆಗಳು ಮತ್ತು ನಂತರ ಶವಗಳನ್ನು ತುಂಡರಿಸಿ ವಿವಿಧ ರೀತಿಯಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳ ಪ್ರಭಾವ ಇರಬಹುದು. ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ಅಂತಹ ಕೊಲೆಗಳನ್ನು ವೈಭವೀಕರಿಸುವ ರೀತಿಯಲ್ಲಿನ ವಿವರಗಳ ಪ್ರಭಾವ ಈ ಪೈಶಾಚಿಕ ಕೊಲೆ ಮತ್ತು ಶವ ವಿಲೇವಾರಿಯ ಹಿಂದೆಯೂ ಇರಬಹುದು. ಸಾಮಾಜಿಕ ಮಾಧ್ಯಮಗಳ ದುಷ್ಪರಿಣಾಮ ಅಲ್ಲಲ್ಲಿ ಬೇರೆ ಬೇರೆ ರೀತಿಯಿಂದ ವ್ಯಕ್ತಗೊಳ್ಳುತ್ತಲೇ ಇರುತ್ತದೆ. ಪೊಲೀಸ್ ವಿಚಾರಣೆಯಲ್ಲಿ ಈ ಅಂಶವೂ ಸ್ಪಷ್ಟಗೊಳ್ಳಬೇಕು. ಕೊಲೆಯಂತಹ ಕ್ರೂರ ಅಪರಾಧಗಳ ರಂಜನೀಯ ನಿರೂಪಣೆಗಳಿಗೆ ಮಾಧ್ಯಮಗಳಲ್ಲಿ ನಿಯಂತ್ರಣ ಇರುವುದು ಅಗತ್ಯ.

ವೆಂಕಟೇಶ ಮಾಚಕನೂರ, ಧಾರವಾಡ

ದಾನಿಗಳ ಕೊರತೆಯಿಲ್ಲ, ಆದರೆ...

ಶಾಲೆ, ಕಾಲೇಜು, ಆಸ್ಪತ್ರೆ ಕಟ್ಟಡ, ಶೌಚಾಲಯ ನಿರ್ಮಾಣದಂತಹ ಅಭಿವೃದ್ಧಿ ಕೆಲಸಗಳಿಗೆ ದಾನಿಗಳ ಸಹಕಾರ ಇರಲಿ ಎಂದು ತಾ.ಸಿ.ತಿಮ್ಮಯ್ಯ ಪ್ರಸ್ತಾಪಿಸಿದ್ದಾರೆ (ವಾ.ವಾ., ಜುಲೈ 10). ಸಮಾಜದಲ್ಲಿ ದಾನಿಗಳ ಕೊರತೆಯಿಲ್ಲ. ಆದರೆ ಅವರನ್ನು ಸರಿಯಾದ ಸಮಯದಲ್ಲಿ ಭೇಟಿ ಮಾಡಿ, ಅವರ ಮನಸ್ಸಿಗೆ ತಟ್ಟುವಂತೆ, ಮುಟ್ಟುವಂತೆ ತಮ್ಮ ಶಾಲಾ ಕಾಲೇಜಿನ ಸಮಸ್ಯೆಗಳನ್ನು ವಿವರಿಸಿ, ಸಹಾಯ ಕೋರುವ ಮುಖ್ಯಸ್ಥರ ಕೊರತೆಯಿದೆ. ಶಾಲೆಗೆ ಬೇಕಾದ ಪೀಠೋಪಕರಣಗಳು, ಪಾಠೋಪಕರಣಗಳು, ಅಲ್ಮೆರಾಗಳು, ತರಗತಿ ಕೊಠಡಿಗಳು, ಸಭಾಂಗಣಗಳು, ಶೌಚಾಲಯ, ಅಡುಗೆಮನೆ... ಹೀಗೆ ಅಗತ್ಯವಿರುವ ಎಲ್ಲವನ್ನೂ ದಾನಿಗಳಿಂದ ಸಹಾಯ ಪಡೆದು ಪೂರೈಸಿಕೊಳ್ಳಬಹುದು.

ಬೆಂಗಳೂರು ಮತ್ತು ಸುತ್ತಮುತ್ತ ಇರುವ ಸರ್ಕಾರಿ ಶಾಲಾ ಕಾಲೇಜುಗಳಿಗಂತೂ ಇಂತಹ ಅವಕಾಶಗಳು ದಂಡಿಯಾಗಿವೆ. ಮುಖ್ಯೋಪಾಧ್ಯಾಯರು, ಪ್ರಾಂಶುಪಾಲರಿಗೆ ದಾನಿಗಳ ಬಳಿ ಹೋಗಿ ತಮ್ಮ ಶಿಕ್ಷಣ ಸಂಸ್ಥೆಗಳ ಕೊರತೆಗಳನ್ನು ಹೇಳಿಕೊಳ್ಳುವುದಕ್ಕೆ ಸಂಕೋಚ, ಕೆಲವು ವೇಳೆ ಉದಾಸೀನ, ಇನ್ನು ಕೆಲವು ವೇಳೆ ಶಾಲಾ ಕಾಲೇಜಿಗೆ ಸಮಯಕ್ಕೆ ಸರಿಯಾಗಿ ಬರುವುದು, ಇರುವ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಪಾಠ-ಪ್ರವಚನ ಮಾಡುವುದು, ಸಮಯ ಮುಗಿದ ಮೇಲೆ ಮನೆಗೆ ಹೋಗುವುದು, ಈ ಗಾಣದೆತ್ತಿನ ಸ್ವಭಾವ ಅವರಲ್ಲಿ ಇರುವುದು. ದಾನಿಗಳನ್ನು ಬೆಂಬಿಡದೆ ಬೆನ್ನು ಹತ್ತಿ, ತಮ್ಮ ಸಂಸ್ಥೆಗೆ ಅಗತ್ಯವಿರುವ ಸೌಲಭ್ಯಗಳನ್ನು ಶತಾಯಗತಾಯ ಪಡೆದುಕೊಳ್ಳಲೇಬೇಕು ಎಂಬ ದೃಢ ಮನಸ್ಸು, ಪ್ರಯತ್ನ ಯಾರಲ್ಲಿ ಇರುತ್ತದೋ, ಆ ಶಾಲೆ ಕಾಲೇಜುಗಳಿಗೆ ಸಹಾಯದ ಮಹಾಪೂರವೇ ಹರಿದುಬರುವುದರಲ್ಲಿ ಸಂದೇಹವಿಲ್ಲ. ಇದಕ್ಕೆ ನಿದರ್ಶನಗಳು ಇವೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಶೈಕ್ಷಣಿಕ ಪ್ರವಾಸ: ಉಚಿತ ವ್ಯವಸ್ಥೆ ಇರಲಿ

ಮಕ್ಕಳ ಜ್ಞಾನ ವೃದ್ಧಿ ಹಾಗೂ ಮನರಂಜನೆಗಾಗಿ ಹೆಚ್ಚಿನ ಶಾಲೆಗಳಲ್ಲಿ ವಾರ್ಷಿಕ ಶಾಲಾ ಪ್ರವಾಸವನ್ನು ಹಮ್ಮಿಕೊಳ್ಳಲಾಗುತ್ತದೆ. ಇಂತಹ ಸಂದರ್ಭದಲ್ಲಿ ಅಧ್ಯಾಪಕರು ಮಕ್ಕಳಿಗೆ ಪ್ರವಾಸ ಶುಲ್ಕವನ್ನು ಭರಿಸುವಂತೆ ಕೇಳಿಕೊಂಡಾಗ, ಅನೇಕರಿಗೆ ಅಷ್ಟು ಸುಲಭವಾಗಿ ದುಡ್ಡನ್ನು ಹೊಂದಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಬಹುತೇಕ ಮಕ್ಕಳು ಬಡ ಕುಟುಂಬಗಳಿಗೆ ಸೇರಿದವರಾಗಿರುತ್ತಾರೆ. ಹೀಗಾಗಿ, ಪ್ರವಾಸಕ್ಕೆ ತೆರಳಲು ಪೋಷಕರು ತಮ್ಮ ಮಕ್ಕಳಿಗೆ ಅಷ್ಟು ಸುಲಭವಾಗಿ ಅನುಮತಿ ನೀಡುವುದಿಲ್ಲ. ಸರ್ಕಾರವು ಮಕ್ಕಳ ಹಿತದೃಷ್ಟಿಯಿಂದ, ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗಾಗಿ ಉಚಿತ ಶಾಲಾ ಪ್ರವಾಸದ ವ್ಯವಸ್ಥೆಯನ್ನು ಮಾಡಬೇಕು. ಅದು ಸಾಧ್ಯವಿಲ್ಲ ಎಂದಾದರೆ, ಕನಿಷ್ಠಪಕ್ಷ ಖರ್ಚಾಗುವ ಒಟ್ಟು ಮೊತ್ತದಲ್ಲಿ ಶೇ 50ರಷ್ಟನ್ನಾದರೂ ಶಿಕ್ಷಣ ಇಲಾಖೆ ಭರಿಸಿ ಮಕ್ಕಳಿಗೆ ಅನುಕೂಲವಾಗುವಂತೆ ನೋಡಿಕೊಳ್ಳಬೇಕು.

ಶಿಕ್ಷಕರು ಕೂಡ ಮಕ್ಕಳನ್ನು ಪ್ರತಿಬಾರಿ ಬಹಳ ದೂರದ ಪ್ರದೇಶಕ್ಕೆ ಕರೆದೊಯ್ಯುವ ಬದಲು ತಮ್ಮ ಹತ್ತಿರದಲ್ಲಿ ಇರುವಂತಹ ಪ್ರದೇಶಗಳ ದರ್ಶನ ಮಾಡಿಸಬೇಕು. ಎಷ್ಟೋ ಸಂದರ್ಭಗಳಲ್ಲಿ ತಾವು ವಾಸಿಸುವ ಜಿಲ್ಲೆ ಅಥವಾ ತಮ್ಮ ಊರಿನ ಇತಿಹಾಸದ ಬಗ್ಗೆಯೇ ನಮ್ಮಲ್ಲಿ ಹೆಚ್ಚಿನವರಿಗೆ ತಿಳಿವಳಿಕೆ ಇರುವುದಿಲ್ಲ. ಅಧ್ಯಾಪಕರು ಮಕ್ಕಳಿಗೆ ತಮ್ಮ ಊರಿನ ಇತಿಹಾಸ, ವೈಶಿಷ್ಟ್ಯ ಹಾಗೂ ಅಲ್ಲಿನ ವೈಭವಗಳನ್ನು ಪರಿಚಯಿಸುವಂತಹ ಕೆಲಸವನ್ನು ಮೊದಲು ಮಾಡಬೇಕು.

ರಿಯಾಝ್ ಅಹ್ಮದ್, ರೋಣ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಬಹುತ್ವ, ಸಾಂಸ್ಕೃತಿಕ ವೈವಿಧ್ಯ ಉಳಿಸಿ

‘ಭಾರತಕ್ಕೆ ಈಗ ಏಕರೂಪ ನಾಗರಿಕ ಸಂಹಿತೆಯ ಅಗತ್ಯವೂ ಇಲ್ಲ, ಈ ಹಂತದಲ್ಲಿ ಭಾರತವು ಅದಕ್ಕೆ ಸಿದ್ಧವಾಗಿಯೂ ಇಲ್ಲ’ ಎಂದು ಕಾನೂನು ಆಯೋಗವು 2018ರಲ್ಲಿ ಕೇಂದ್ರ ಸರ್ಕಾರಕ್ಕೆ ನೀಡಿದ್ದ ‘ಕೌಟುಂಬಿಕ ಕಾನೂನುಗಳ ಸುಧಾರಣೆ’ ಸಮಾಲೋಚನಾ ವರದಿಯಲ್ಲಿ ಹೇಳಿತ್ತು. ದೇಶದಲ್ಲಿನ ಸಾಂಸ್ಕೃತಿಕ ವೈವಿಧ್ಯ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಬೇಕು ಎಂದು ಆಯೋಗವು ಹೇಳಿತ್ತು. ವೈಯಕ್ತಿಕ ಕಾನೂನುಗಳಲ್ಲಿ ಇರುವ ಕೊರತೆಗಳನ್ನು ನೀಗಿಸಬೇಕು ಎಂದೂ ಹೇಳಿತ್ತು

ಏಕರೂಪ ನಾಗರಿಕ ಸಂಹಿತೆ | ‘ಕೌಟುಂಬಿಕ ಕಾನೂನುಗಳ ಸುಧಾರಣೆ’ ಸಮಾಲೋಚನಾ ವರದಿ-2018

ಪ್ರಜಾವಾಣಿ ವಾರ್ತೆ

ವೈಯಕ್ತಿಕ ಕಾನೂನುಗಳ ಬದಲಿಗೆ ಏಕರೂಪ ನಾಗರಿಕ ಸಂಹಿತೆಯನ್ನು ರಚಿಸುವ ಬಗ್ಗೆ ಸಮಾಲೋಚನೆ ನಡೆಸಿ ಎಂದು ಕೇಂದ್ರ ಸರ್ಕಾರವು ಹೇಳಿದೆ. ಇದರ ಸಲುವಾಗಿ ನಾವು ವೈಯಕ್ತಿಕ ಕಾನೂನುಗಳಲ್ಲಿ ಇರುವ ತಾರತಮ್ಯವನ್ನು ಹೋಗಲಾಡಿಸುವ ವಿಚಾರಕ್ಕೆ ಗಮನ ನೀಡುತ್ತೇವೆ. ಆದರೆ ಈ ಕಾರ್ಯ ನಿರ್ವಹಿಸುವಲ್ಲಿ, ಭಾರತದ ಸಂಸ್ಕೃತಿ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿರುವ ಬಹುತ್ವ ಮತ್ತು ವೈವಿಧ್ಯವನ್ನು ರಕ್ಷಿಸುವುದಕ್ಕೆ ನಾವು ಕಟಿಬದ್ಧರಾಗಿದ್ದೇವೆ:–

ಏಕರೂಪ ನಾಗರಿಕ ಸಂಹಿತೆ ರಚನೆ ಬಗ್ಗೆ ಕೇಂದ್ರ ಸರ್ಕಾರಕ್ಕೆ ಕಾನೂನು ಸಚಿವಾಲಯವು 2018ರಲ್ಲಿ ಸಲ್ಲಿಸಿದ್ದ ಸಮಾಲೋಚನಾ ವರದಿಯ ಪೀಠಿಕೆಯಲ್ಲಿರುವ ಮಾತುಗಳಿವು.

ಸಮಾಲೋಚನಾ ವರದಿ ನೀಡುವಂತೆ 2016ರಲ್ಲಿ ಕೇಂದ್ರ ಸರ್ಕಾರವು ಆದೇಶ ನೀಡಿತ್ತು. ಅದರನ್ವಯ ಆಯೋಗವು ಸಾರ್ವಜನಿಕ ಪ್ರಶ್ನಾವಳಿಯನ್ನು ನೀಡಿತ್ತು, ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಗುಂಪುಗಳ ಜತೆಗೆ ಸಮಾಲೋಚನೆ ನಡೆಸಿತ್ತು ಮತ್ತು ಕಾನೂನು ತಜ್ಞರೊಂದಿಗೂ ವಿಸ್ತೃತ ಚರ್ಚೆ ನಡೆಸಿತ್ತು. ಈ ಎಲ್ಲಾ ಸಮಾಲೋಚನೆಯ ಸಂದರ್ಭದಲ್ಲಿ ವೈಯಕ್ತಿಕ ಕಾನೂನುಗಳ ಅಡಿಯಲ್ಲಿ ನಡೆಯುತ್ತಿರುವ ತಾರತಮ್ಯಗಳನ್ನು ಮತ್ತು ದುಷ್ಟ ಆಚರಣೆಗಳನ್ನು ಹೋಗಲಾಡಿಸಬೇಕು ಎಂಬ ಅಭಿಪ್ರಾಯವೇ ಹೆಚ್ಚು ವ್ಯಕ್ತವಾಗಿದೆ ಎಂದು ಆಯೋಗವು ತನ್ನ ವರದಿಯಲ್ಲಿ ವಿವರಿಸಿದೆ. ವೈಯಕ್ತಿಕ ಕಾನೂನುಗಳಲ್ಲಿ ಇರುವ ವೈವಿಧ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಹೇಳುತ್ತಲೇ, ಸಾಮಾಜಿಕ ಅನ್ಯಾಯಗಳನ್ನು ಹೋಗಲಾಡಿಸಬೇಕು ಎಂದೂ ಆಯೋಗವು ಪ್ರತಿಪಾದಿಸಿತ್ತು.

‘ಭಾರತದ ವೈವಿಧ್ಯವನ್ನು ನಾವು ಸಂಭ್ರಮಿಸಬಹುದು ಮತ್ತು ಸಂಭ್ರಮಿಸಬೇಕು. ಈ ವೈವಿಧ್ಯವನ್ನು ಭಾರತವು ಇತಿಹಾಸದುದ್ದಕ್ಕೂ ಸಂಭ್ರಮಿಸುತ್ತಲೇ ಬಂದಿದೆ. ವಿಶ್ವದ ಬಹುತೇಕ ದೇಶಗಳು ಈಗ ಭಿನ್ನತೆಗಳನ್ನು ಗುರುತಿಸುವ ಮತ್ತು ಭಿನ್ನತೆಗಳಿಗೆ ಮಾನ್ಯತೆ ನೀಡುವುದರತ್ತ ಹೋಗುತ್ತಿವೆ. ಭಿನ್ನತೆಗಳು ಇರುವ ಮಾತ್ರಕ್ಕೇ ಅಲ್ಲಿ ತಾರತಮ್ಯ ಇದೆ ಎಂದಾಗುವುದಿಲ್ಲ. ಬದಲಿಗೆ ಭಿನ್ನತೆಗಳು, ಒಂದು ಪ್ರಬಲ ಪ್ರಜಾಪ್ರಭುತ್ವದ ಪ್ರತೀಕ’ ಎಂದು ಆಯೋಗವು ಹೇಳಿತ್ತು.

ದೇಶದ ಸಂವಿಧಾನವು ದೇಶದ ಜನಕ್ಕೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದೆ. ಧಾರ್ಮಿಕ ಸ್ವಾತಂತ್ರ್ಯ ಎಂಬುದು ಧರ್ಮದ ಆಚರಣೆ ಮಾತ್ರವಲ್ಲ. ಬದಲಿಗೆ ಧರ್ಮದ ಪ್ರಚಾರವೂ ಹೌದು. ಇವೆಲ್ಲವನ್ನೂ ಒಳಗೊಂಡ ಧಾರ್ಮಿಕ ಸ್ವಾತಂತ್ರ್ಯವನ್ನು ನಾವು ರಕ್ಷಿಸಬೇಕಿದೆ. ವೈಯಕ್ತಿಕ ಕಾನೂನುಗಳು ಧಾರ್ಮಿಕ ವಿಧಿವಿಧಾನಗಳು, ಕಟ್ಟುಪಾಡುಗಳು, ಸಂಪ್ರದಾಯಗಳನ್ನು ಆಧರಿಸಿವೆ. ಅವುಗಳ ಆಧಾರದಲ್ಲಿ ರೂಪಿತವಾಗಿರುವ ವೈಯಕ್ತಿಕ ಕಾನೂನುಗಳನ್ನು ತೆಗೆದುಹಾಕುವುದು ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ. ದೇಶದ ಪ್ರತಿಯೊಬ್ಬ ನಾಗರಿಕನಿಗೆ ಧಾರ್ಮಿಕ ಅಸ್ಮಿತೆಯೂ ಬಹಳ ಮುಖ್ಯವಾದುದು. ಭಾಷೆ, ಸಂಸ್ಕೃತಿ ಮತ್ತು ವೈಯಕ್ತಿಕ ಕಾನೂನುಗಳು ಈ ಧಾರ್ಮಿಕ ಅಸ್ಮಿತೆಯನ್ನು ರೂಪಿಸುತ್ತವೆ. ಅಂತಹ ಧಾರ್ಮಿಕ ಅಸ್ಮಿತೆಯನ್ನು ಉಳಿಸಿಕೊಳ್ಳಬೇಕು. ಆದರೆ, ತಾರತಮ್ಯ ಮತ್ತು ಅನ್ಯಾಯವನ್ನು ಹೋಗಲಾಡಿಸಬೇಕು ಎಂದು ಮಹಿಳಾ ಗುಂಪೊಂದು ಸಲಹೆ ನೀಡಿತ್ತು ಎಂದು ಆಯೋಗವು ತನ್ನ ವರದಿಯಲ್ಲಿ ಉಲ್ಲೇಖಿಸಿತ್ತು.

ವೈಯಕ್ತಿಕ ಕಾನೂನುಗಳ ವಿಚಾರದಲ್ಲಿ ದೇಶದಲ್ಲಿ ಏಕರೂಪತೆ ತರಬೇಕು ಎಂದು ಪಟ್ಟು ಹಿಡಿದರೆ, ಅದು ದೇಶದ ಏಕತೆಗೆ ಧಕ್ಕೆಯಾಗಬಹುದು ಎಂದು ಆಯೋಗವು ಆತಂಕ ವ್ಯಕ್ತಪಡಿಸಿತ್ತು. ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವಲ್ಲಿ, ಈಶಾನ್ಯ ಭಾರತದ ರಾಜ್ಯಗಳ ಬುಡಕಟ್ಟು ಸಮುದಾಯಗಳ ವಿಶೇಷ ಹಕ್ಕುಗಳನ್ನು ಏನು ಮಾಡಬೇಕು ಎಂಬುದನ್ನು ಚರ್ಚಿಸುವಾಗ ಆಯೋಗವು ಈ ಮಾತು ಹೇಳಿತ್ತು. ‘ಏಕರೂಪ ನಾಗರಿಕ ಸಂಹಿತೆಯನ್ನು ರೂಪಿಸಲು ಹೊರಟಾಗ, ದೇಶದ ಸಾಂಸ್ಕೃತಿಕ ವೈವಿಧ್ಯಕ್ಕೆ ಧಕ್ಕೆ ತರಬಾರದು ಎಂಬುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕು. ಏಕರೂಪತೆಯನ್ನು ತರಲೇಬೇಕು ಎಂದು ಹಟ ಹಿಡಿಯುವುದು, ದೇಶದ ಸಾಂಸ್ಕೃತಿಕ ವೈವಿಧ್ಯವನ್ನು ಹಾಳುಗೆಡಹುವ ಮಟ್ಟಕ್ಕೆ ಹೋಗಬಾರದು. ಹಾಗೆ ಆದರೆ, ಅದು ದೇಶದ ಭೌಗೋಳಿಕ ಏಕತೆಗೆ ಬೆದರಿಕೆಯಾಗಬಹುದು’ ಎಂದು ಕಳವಳ ವ್ಯಕ್ತಪಡಿಸಿತ್ತು.

ಏಕರೂಪ ನಾಗರಿಕ ಸಂಹಿತೆಯನ್ನು ರೂಪಿಸುವಾಗ ವೈಯಕ್ತಿಕ ಕಾನೂನುಗಳನ್ನು ಪರಿಗಣಿಸಲೇಬಾರದು ಎಂಬ ಅಭಿಪ್ರಾಯ ಸಂವಿಧಾನ ರಚನಾ ಸಭೆಯ ಚರ್ಚೆಗಳಲ್ಲಿ ವ್ಯಕ್ತವಾಗಿತ್ತು. ಹಾಗೆ ಮಾಡಿದ್ದರೆ, ಅದು ಸಂವಿಧಾನವು ದೇಶದ ನಾಗರಿಕರಿಗೆ ಕೊಡಮಾಡಿರುವ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತಿತ್ತು. ದೇಶದ ನಾಗರಿಕರ ಧಾರ್ಮಿಕ ವಿಚಾರಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದು ಎಂಬ ಅಭಿಪ್ರಾಯ ಅಲ್ಲಿ ವ್ಯಕ್ತವಾಗಿತ್ತು. ಹೀಗಾಗಿಯೇ ಸರ್ಕಾರವು ಕಡ್ಡಾಯವಾಗಿ ಜಾರಿ ಮಾಡಬೇಕು ಎಂದು ಒತ್ತಾಯಿಸಲು ಸಾಧ್ಯವಿಲ್ಲದ ರಾಜ್ಯನೀತಿ ನಿರ್ದೇಶಕ ತತ್ವಗಳ ಅಡಿಯಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಸೇರಿಸಲಾಗಿದೆ ಎಂದು ಕಾನೂನು ಆಯೋಗವು ತಾನು ಸರ್ಕಾರಕ್ಕೆ ಸಲ್ಲಿಸಿದ್ದ ಸಮಾಲೋಚನಾ ವರದಿಯಲ್ಲಿ ಪ್ರತಿಪಾದಿಸಿತ್ತು.



‘ಅನ್ಯಾಯವನ್ನು ಹೋಗಲಾಡಿಸಬೇಕು’

ವೈಯಕ್ತಿಕ ಕಾನೂನುಗಳನ್ನು ಏಕೆ ತೆಗೆದುಹಾಕಬೇಕು ಎಂದು ಹೇಳುವಾಗಲೆಲ್ಲಾ, ಅವುಗಳಲ್ಲಿ ಇರುವ ಕೆಲವು ಕೆಟ್ಟ/ತಾರತಮ್ಯದಿಂದ ಕೂಡಿದ ಆಚರಣೆಗಳನ್ನು ಮುಂದಿಡಲಾಗುತ್ತದೆ. ಈ ಎಲ್ಲಾ ಕಾನೂನುಗಳಿಂದ ಮಹಿಳೆ ಅನ್ಯಾಯಕ್ಕೆ ಒಳಗಾಗುತ್ತಾಳೆ ಎಂಬ ವಾದವನ್ನು ಮುಂದಿಡಲಾಗುತ್ತದೆ. ಈ ರೀತಿಯ ಪ್ರತಿಪಾದನೆಯನ್ನು ಪದೇ ಪದೇ ಸಾರ್ವಜನಿಕವಾಗಿ ಮಂಡಿಸಲಾಗುತ್ತದೆ ಮತ್ತು ಚರ್ಚಿಸಲಾಗುತ್ತದೆ. ಅವುಗಳಲ್ಲಿ ನ್ಯೂನತೆ ಇದೆ ಎಂದ ಮಾತ್ರಕ್ಕೇ ಇಡೀ ಕಾನೂನನ್ನು ತೆಗೆದುಹಾಕುವುದು ಸರಿಯಾಗುವುದಿಲ್ಲ. ಬದಲಿಗೆ ಆ ನ್ಯೂನತೆಯನ್ನು ಸರಿಪಡಿಸಬೇಕಾಗುತ್ತದೆ ಮತ್ತು ಆ ಅನ್ಯಾಯವನ್ನು ಹೋಗಲಾಡಿಸಬೇಕು. ಏಕರೂಪ ನಾಗರಿಕ ಸಂಹಿತೆ ಸಂಬಂಧ ಸಾರ್ವಜನಿಕರಿಂದ ಬಂದಿದ್ದ ಸಲಹೆಗಳಲ್ಲೂ ಇದೇ ಅಭಿಪ್ರಾಯ ವ್ಯಕ್ತವಾಗಿತ್ತು ಎಂದು ಆಯೋಗವು ವರದಿಯಲ್ಲಿ ವಿವರಿಸಿತ್ತು.

‘ಅಭಿಪ್ರಾಯ ಸಂಗ್ರಹಕ್ಕೆಂದು ನಾವು ಸಾರ್ವಜನಿಕರಿಗೆ ನೀಡಲಾಗಿದ್ದ ಪ್ರಶ್ನಾವಳಿಗಳಿಗೆ ಸಾವಿರಾರು ಮುಸ್ಲಿಂ ಮಹಿಳೆಯರೂ ಉತ್ತರಿಸಿದ್ದರು. ಮುಸ್ಲಿಮರು ಮಾತ್ರವಲ್ಲದೆ, ಬೇರೆ ಧರ್ಮದವರೂ ತ್ರಿವಳಿ ತಲಾಖ್‌ನಂತಹ ಪದ್ಧತಿಯನ್ನು ತೆಗೆದುಹಾಕಬೇಕು ಎಂದು ಹೇಳಿದ್ದರು. ಈ ದಿಸೆಯಲ್ಲಿ ವೈಯಕ್ತಿಕ ಕಾನೂನುಗಳಲ್ಲಿ ಇರುವ ಅನ್ಯಾಯವನ್ನು ಸರಿಪಡಿಸುವಾಗ ದೇಶದಲ್ಲಿರುವ ಎಲ್ಲಾ ಧರ್ಮಗಳ ವೈಯಕ್ತಿಕ ಕಾನೂನುಗಳನ್ನೂ ಪರಿಗಣಿಸಬೇಕಾಗುತ್ತದೆ. ಜತೆಗೆ ಎಲ್ಲಾ ಧರ್ಮಗಳ ಸಂಪ್ರದಾಯಗಳು ಮತ್ತು ಆಚರಣೆಗಳನ್ನೂ ಪರಿಗಣಿಸಬೇಕಾಗುತ್ತದೆ ಎಂಬುದನ್ನು ನಾವು ಒತ್ತಿ ಹೇಳುತ್ತೇವೆ’ ಎಂದು ವರದಿಯಲ್ಲಿ ಹೇಳಲಾಗಿತ್ತು.

ವೈಯಕ್ತಿಕ ಕಾನೂನುಗಳಲ್ಲಿ ಇರುವ ಬಹುದೊಡ್ಡ ಸಮಸ್ಯೆ ಅಸಮಾನತೆಯದ್ದು ಎಂಬುದು ಸಾರ್ವಜನಿಕರಿಂದ ವ್ಯಕ್ತವಾಗಿದ್ದ ಅಭಿಪ್ರಾಯ. ಈ ಅಸಮಾನತೆಗೆ ಯಾವಾಗಲೂ ಗುರಿಯಾಗುವುದು ಮಹಿಳೆಯೇ. ಮಹಿಳೆಯನ್ನು ಕೀಳಾಗಿ ನೋಡುವ, ಅವರ ಮೇಲೆ ದೌರ್ಜನ್ಯಕ್ಕೆ ಆಸ್ಪದ ನೀಡುವ ದುಷ್ಟ ಆಚರಣೆಗಳು ಧಾರ್ಮಿಕ ಸ್ವಾತಂತ್ರ್ಯದ ಹೆಸರಿನಲ್ಲಿ ರಕ್ಷಣೆ ಪಡೆಯುತ್ತವೆ. ಸತಿ ಪದ್ಧತಿ, ವೈವಾಹಿಕ ದಾಸ್ಯ, ದೇವದಾಸಿ ಪದ್ಧತಿ, ವರದಕ್ಷಿಣೆ, ತ್ರಿವಳಿ ತಲಾಖ್ (ಈಗ ಅಪರಾಧೀಕರಣಗೊಳಿಸಲಾಗಿದೆ), ಬಾಲ್ಯ ವಿವಾಹದಂತಹ ದುಷ್ಟ ಆಚರಣೆಗಳು ಧಾರ್ಮಿಕ ಆಚರಣೆಗಳ ಹೆಸರಿನಲ್ಲಿ ರಕ್ಷಣೆ ಪಡೆಯುತ್ತವೆ. ಆದರೆ, ಧಾರ್ಮಿಕ ಸ್ವಾತಂತ್ರ್ಯ ಮತ್ತು ಧಾರ್ಮಿಕ ಆಚರಣೆಗಳ ಹೆಸರಿನಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯನ್ನು ಸಹಿಸಿಕೊಳ್ಳಬೇಕಿಲ್ಲ. ಹೀಗಾಗಿ ಇಂತಹ ನ್ಯೂನತೆಗಳನ್ನು ಸರಿಪಡಿಸಬೇಕು ಎಂದು ಆಯೋಗವು ತನ್ನ ವರದಿಯಲ್ಲಿ ಹೇಳಿತ್ತು.

‘ಜಾತ್ಯತೀತ ಎಂಬುದು ಬಹುತ್ವಕ್ಕೆ ವಿರುದ್ಧವಲ್ಲ’

ಜಾತ್ಯತೀತ ಮತ್ತು ಬಹುಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಾದ ಅಗತ್ಯವಿದೆ. ಜಾತ್ಯತೀತ ಎಂಬುದು ಏಕರೂಪತೆ ಎಂಬುದಲ್ಲ. ಬದಲಿಗೆ ಅದು ಭಿನ್ನದನಿಗಳನ್ನೂ ಒಳಗೊಳ್ಳುತ್ತದೆ. ಸಂವಿಧಾನ ರಚನಾ ಸಭೆಯ ಚರ್ಚೆಯ ಸಂದರ್ಭದಲ್ಲಿ ಇದನ್ನು ಸ್ಪಷ್ಟವಾಗಿ ಪ್ರತಿಪಾದಿಸಲಾಗಿದೆ. ಭಾರತದ ಸಂದರ್ಭದಲ್ಲಿ ಜಾತ್ಯತೀತ ಮತ್ತು ಬಹುಸಂಸ್ಕೃತಿ ಎಂಬುದು ತತ್ವಜ್ಞಾನಿಗಳ, ರಾಜಕೀಯ ನಿಪುಣರ ಮತ್ತು ಇತಿಹಾಸ ತಜ್ಞರಿಗೆ ಸೀಮಿತವಾದ ಪರಿಕಲ್ಪನೆಗಳಲ್ಲ. ಬದಲಿಗೆ ಈ ಪರಿಕಲ್ಪನೆಗಳು ಭಾರತದ ಜನಸಾಮಾನ್ಯರ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಹೀಗಾಗಿ ಜಾತ್ಯತೀತ ಎಂಬುದನ್ನು ಬಹುದನಿಗಳನ್ನೂ ಒಳಗೊಳ್ಳುವ ಪರಿಕಲ್ಪನೆ ಎಂದೇ ನೋಡಬೇಕು ಎಂದು ಕಾನೂನು ಆಯೋಗವು ಹೇಳಿತ್ತು.

‘ಎಲ್ಲಾ ಸ್ವರೂಪದ ಭಿನ್ನತೆಗಳು ಮತ್ತು ಭಿನ್ನಾಭಿಪ್ರಾಯಗಳಿಗೆ ಅವಕಾಶವಿದ್ದಾಗ ಮಾತ್ರ ಜಾತ್ಯತೀತ ಎಂಬುದು ನಿಜವಾದ ಅರ್ಥದಲ್ಲಿ ಇದೆ ಎಂದಾಗುತ್ತದೆ. ಈ ಭಿನ್ನತೆ ಎಂಬುದು ಧಾರ್ಮಿಕವಾದುದು ಮಾತ್ರವಲ್ಲ, ಬದಲಿಗೆ ಪ್ರಾದೇಶಿಕವಾದ ಭಿನ್ನತೆಗಳನ್ನೂ ಒಳಗೊಂಡಿದೆ. ಬಹುಸಂಖ್ಯಾತರ ಅಬ್ಬರದಲ್ಲಿ ಈ ಭಿನ್ನದನಿಗಳು ಅಡಗಿಹೋಗದಂತೆ ಜಾತ್ಯತೀತ ತತ್ವವು ನೋಡಿಕೊಳ್ಳುತ್ತದೆ. ಜಾತ್ಯತೀತ ಎಂಬುದು ಎಂದಿಗೂ ಬಹುತ್ವಕ್ಕೆ ವಿರುದ್ಧವಾದುದಲ್ಲ. ಬದಲಿಗೆ ಸಾಂಸ್ಕೃತಿಕ ಭಿನ್ನತೆಗಳನ್ನು ಶಾಂತಿಯುತವಾಗಿ ಕಾಯ್ದುಕೊಳ್ಳುತ್ತದೆ’ ಎಂದು ಆಯೋಗವು ತನ್ನ ವರದಿಯಲ್ಲಿ ಹೇಳಿತ್ತು.

ಇಬ್ಬರು ವ್ಯಕ್ತಿಗಳ ವಿವಾಹವನ್ನು ದೇಶದ ಬೇರೆ ವೇರೆ ವೈಯಕ್ತಿಕ ಕಾನೂನುಗಳು ಬೇರೆ ಬೇರೆ ರೀತಿ ವ್ಯಾಖ್ಯಾನಿಸುತ್ತವೆ. ಇವುಗಳನ್ನು ಏಕರೂಪಗೊಳಿಸುವ ಪ್ರಕ್ರಿಯೆಯಲ್ಲಿ ಶ್ರೇಷ್ಠ–ಕನಿಷ್ಠ ಎಂಬ ಶ್ರೇಣಿ ವ್ಯವಸ್ಥೆಗೆ ಆಸ್ಪದ ನೀಡಬಾರದು ಎಂದು ಆಯೋಗವು ಅಭಿಪ್ರಾಯಪಟ್ಟಿತ್ತು. ‘ವಿವಾಹಕ್ಕೆ ಸಂಬಂಧಿಸಿದ ವೈಯಕ್ತಿಕ ಕಾನೂನುಗಳ ನಿಲುವುಗಳನ್ನು ಪರಸ್ಪರ ಗೌರವಿಸಬೇಕು ಮತ್ತು ಅವುಗಳನ್ನು ಒಂದರ ವಿರುದ್ಧ ಬೇರೊಂದು ಎಂಬಂತೆ ಎತ್ತಿಕಟ್ಟುವ ಕೆಲಸವಾಗಬಾರದು. ಜತೆಗೆ ಇವುಗಳನ್ನು ಶ್ರೇಣಿ ವ್ಯವಸ್ಥೆಗೆ ಒಳಪಡಿಸಿ, ಯಾವುದೋ ಒಂದು ನಿಲುವು ಶ್ರೇಷ್ಠ ಮತ್ತು ಇನ್ನೊಂದು ನಿಲುವು ಕನಿಷ್ಠ ಎಂದು ಮಾಡಬಾರದು’ ಎಂದು ಆಯೋಗವು ಪ್ರತಪಾದಿಸಿತ್ತು.

ಆಧಾರ: ಕಾನೂನು ಆಯೋಗದ ‘ಕೌಟುಂಬಿಕ ಕಾನೂನುಗಳ ಸುಧಾರಣೆ’ ಸಮಾಲೋಚನಾ ವರದಿ–2018

ಸಿನಿ ಬಿಟ್ಸ್

ಜಪಾನ್‌ನಲ್ಲೂ ರಾಕಿ ಭಾಯ್ ಹವಾ!

ಕಳೆದ ವರ್ಷ ಏಪ್ರಿಲ್‌ನಲ್ಲಿ ‘ಕೆ.ಜಿ.ಎಫ್. ಚಾಪ್ಟರ್ 2’ ಬಿಡುಗಡೆಯಾದ ಬಳಿಕ ರಾಕಿಂಗ್ ಸ್ಟಾರ್ ಯಶ್ ತಮ್ಮ ಮುಂದಿನ ಚಿತ್ರದ ಬಗ್ಗೆ ಯಾವುದೇ ಸುಳಿವು ಬಿಟ್ಟುಕೊಟ್ಟಿಲ್ಲ. ಸದ್ಯ ತಮ್ಮ 19ನೇ ಸಿನಿಮಾದ ತಯಾರಿಯಲ್ಲಿ ಅವರು ತೊಡಗಿಸಿಕೊಂಡಿದ್ದಾರೆ. ಇದರ ಘೋಷಣೆ ಅಧಿಕೃತವಾಗಿ ಇನ್ನಷ್ಟೇ ಆಗಬೇಕಿದೆ. ಈ ಸಂದರ್ಭದಲ್ಲೇ ‘ರಾಕಿ ಭಾಯ್’ ಜಪಾನ್‌ಗೆ ಹೆಜ್ಜೆ ಇಡಲಿದ್ದಾರೆ.

‘ಕೆ.ಜಿ.ಎಫ್’ ಸರಣಿ ಜಪಾನ್‌ನಲ್ಲಿ ಬಿಡುಗಡೆಯಾಗಲಿದೆ. ಈ ಕುರಿತು ಯಶ್ ಇನ್‌ಸ್ಟಾಗ್ರಾಂನಲ್ಲಿ ವಿಡಿಯೊ ಅಪ್‌ಲೋಡ್ ಮಾಡಿದ್ದಾರೆ. ‘ಜಪಾನ್ ಜನತೆಗೆ ನನ್ನ ನಮಸ್ಕಾರ. ನಾನು ಯಶ್’ ಎಂದು ಜಪಾನಿ ಭಾಷೆಯಲ್ಲೇ ಮಾತು ಆರಂಭಿಸಿ, ‘ಕೆಜಿಎಫ್ ಚಾಪ್ಟರ್ 1 ಹಾಗೂ 2 ಜಪಾನ್‌ನಲ್ಲಿ ಬಿಡುಗಡೆಯಾಗುತ್ತಿದೆ. ಕೆಜಿಎಫ್ ಎನ್ನುವುದು ಆ್ಯಕ್ಷನ್ ಪ್ಯಾಕೇಜ್. ಜಪಾನ್ ಫಾಸ್ಟನ್ ಯುವರ್ ಸೀಟ್‌ಬೆಲ್ಟ್’ ಎಂದಿದ್ದಾರೆ ಯಶ್.

ಯಶ್ ನಟನೆಯ, ಪ್ರಶಾಂತ್ ನೀಲ್ ನಿರ್ದೇಶನದ ಕೆ.ಜಿ.ಎಫ್ ಚಾಪ್ಟರ್–2 ಯಶ್ ಸಿನಿಗ್ರಾಫ್‌ನಲ್ಲಿ ದೊಡ್ಡ ತಿರುವು ನೀಡಿದ ಸಿನಿಮಾ. ಈ ಸಿನಿಮಾ ಮೊದಲ ದಿನವೇ ಬಾಕ್ಸ್ ಆಫೀಸ್‌ನಲ್ಲಿ ₹134.5 ಕೋಟಿ ಬಾಚಿತ್ತು. ಸಿನಿಮಾ ಜಗತ್ತಿನಾದ್ಯಂತ ₹1,400 ಕೋಟಿ ಗಳಿಸಿತ್ತು. ‘ಜುಲೈ 14ಕ್ಕೆ ಜಪಾನ್‌ನಲ್ಲಿ ಕೆ.ಜಿ.ಎಫ್ ಸರಣಿ ಬಿಡುಗಡೆಯಾಗುತ್ತಿದೆ. ಕಳೆದ ನಾಲ್ಕೈದು ತಿಂಗಳಿಂದ ಸಿನಿಮಾ ಬಿಡುಗಡೆ ಮಾತುಕತೆ ನಡೆಯುತ್ತಿತ್ತು. ಆರ್‌ಆರ್‌ಆರ್ ಸಿನಿಮಾ ವಿತರಣೆ ಮಾಡಿದವರೇ ಅಲ್ಲಿ ಕೆಜಿಎಫ್ ಸಿನಿಮಾ ಸರಣಿ ಬಿಡುಗಡೆ ಮಾಡುತ್ತಿದ್ದಾರೆ. ಕೆಜಿಎಫ್ ಕನ್ನಡ ಆವೃತ್ತಿಯನ್ನು ಜಪಾನ್ ಭಾಷೆಯ ಸಬ್‌ಟೈಟಲ್‌ನೊಂದಿಗೆ 31 ನಗರಗಳ 65 ಪರದೆಗಳಲ್ಲಿ ಪ್ರದರ್ಶಿಸಲಾಗುವುದು.’ ಎಂದು ಹೊಂಬಾಳೆ ಫಿಲ್ಮ್ಸ್‌ನ ಚಲುವೇಗೌಡ ತಿಳಿಸಿದರು. ❖



ಯಶ್

ಆ.10ಕ್ಕೆ ‘ಜೈಲರ್’ ರಿಲೀಸ್

ಈ ವರ್ಷದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಸೂಪರ್‌ಸ್ಟಾರ್ ರಜನಿಕಾಂತ್ ನಟನೆಯ ‘ಜೈಲರ್’ ಕೂಡ ಒಂದು. ಸಿನಿಮಾದ ವಿಶೇಷ ಏನೆಂದರೆ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಸೇರಿದಂತೆ ದಕ್ಷಿಣ ಭಾರತೀಯ ಚಿತ್ರರಂಗದ ದಿಗ್ಗಜ ಕಲಾವಿದರೂ ಈ ಸಿನಿಮಾದ ಭಾಗವಾಗಿದ್ದಾರೆ.

ಸದ್ಯ ‘ಕಾವಾಲಾಯ್ಯ..’ ಹಾಡಿನ ಮೂಲಕ ಸದ್ದು ಮಾಡುತ್ತಿರುವ ಈ ಸಿನಿಮಾ ಆಗಸ್ಟ್ 10ಕ್ಕೆ ತಮಿಳು, ಕನ್ನಡ ಹಾಗೂ ತೆಲುಗು ಭಾಷೆಯಲ್ಲಿ ಬೆಳ್ಳಿತೆರೆಯಲ್ಲಿ ಬಿಡುಗಡೆಯಾಗಲಿದೆ. ಸನ್ ಪಿಕ್ಚರ್ಸ್ ನಿರ್ಮಾಣ ಮಾಡುತ್ತಿರುವ ಈ ಸಿನಿಮಾವನ್ನು ನೆಲ್ಸನ್ ದಿಲೀಪ್ ಕುಮಾರ್ ನಿರ್ದೇಶಿಸಿದ್ದಾರೆ. ಇದೇ ಮೊದಲ ಬಾರಿಗೆ ರಜನಿಕಾಂತ್ ಜೊತೆ ಶಿವರಾಜ್‌ಕುಮಾರ್, ಬಾಲಿವುಡ್ ನಟ ಜಾಕಿ ಶ್ರಾಫ್, ಮಲಯಾಳಂ ಸೂಪರ್‌ಸ್ಟಾರ್ ಮೋಹನ್‌ಲಾಲ್, ಟಾಲಿವುಡ್ ನಟ ಸುನಿಲ್, ನಾಗಬಾಬು, ನಟಿ ರಮ್ಯಾ ಕೃಷ್ಣ, ತಮನ್ನಾ ಭಾಟಿಯಾ ನಟಿಸಿದ್ದಾರೆ.

‘ಅಣ್ಣಾತ್ತೆ’ ಬಳಿಕ ರಜನಿಕಾಂತ್ ನಟಿಸಿರುವ 169ನೇ ಸಿನಿಮಾ ‘ಜೈಲರ್’. ರಾಕ್‌ಸ್ಟಾರ್ ಅನಿರುದ್ಧ್ ರವಿಚಂದರ್ ಅವರ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ‘ಜೈಲರ್’ ಸಿನಿಮಾದ ಚಿತ್ರೀಕರಣ ಚೆನ್ನೈ, ಮಂಗಳೂರು, ಹೈದರಾಬಾದ್, ಕೇರಳ ಸೇರಿದಂತೆ ಹಲವೆಡೆ ನಡೆದಿದೆ. ❖



ಜೈಲರ್
ರಜನಿಕಾಂತ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತ ಮಾತೆಯ ಕಿರೀಟವನ್ನು ತೆಗೆಸಿ, ತಲೆಗೆ ಬಿಳಿ ಬಟ್ಟೆ ತೊಡಿಸಿ, ನಮಾಜ್ ಮಾಡುತ್ತಿರುವಂತೆ ತೋರುವ ಮಕ್ಕಳ ಕಿರುನಾಟಕದ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ‘ದೆಹಲಿಯ ಸರ್ಕಾರಿ ಶಾಲೆಯಲ್ಲಿ ನಡೆಯುತ್ತಿರುವುದು ಇದು! ಭಾರತ ಮಾತೆಯ ಕಿರೀಟವನ್ನು ತೆಗೆಸಿ, ಮಕ್ಕಳ ಕೈಯಲ್ಲಿ ಕಲಿಮಾ ಓದಿಸಲಾಗುತ್ತಿದೆ. ಇದು ಕೇಜ್ರಿವಾಲ್ ಅವರ ದೆಹಲಿ ಶಾಲೆ ಮಾದರಿ’ ಎಂಬ ಬರಹದೊಂದಿಗೆ ಮಕ್ಕಳ ಕಿರುನಾಟಕದ ವಿಡಿಯೊವನ್ನು ಫೇಸ್‌ಬುಕ್ ಹಾಗೂ ಟ್ವಿಟರ್‌ಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ಸ್ವಾತಂತ್ರ್ಯ ದಿನದ ಅಂಗವಾಗಿ 2022ರಲ್ಲಿ ಉತ್ತರ ಪ್ರದೇಶದ ಲಖನೌನ ಮಾಲ್ವಿಯಾ ನಗರದ ಶಿಶು ಮಂದಿರ ಶಾಲೆಯ ಮಕ್ಕಳು ಅಭಿನಯಿಸಿದ ಕಿರುನಾಟಕ ಇದಾಗಿದೆ. ಅಂದಿನಿಂದ ಇಂದಿನವರೆಗೂ ಈ ವಿಡಿಯೊವು ತಪ್ಪು ಮಾಹಿತಿಯೊಂದಿಗೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಲೇ ಇದೆ. ಈ ವಿಡಿಯೊ ಕುರಿತು ಮಾಲ್ವಿಯಾ ನಗರದ ಪೊಲೀಸ್ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ. ‘ಸೌಹಾರ್ದದ ಸಂದೇಶ ಸಾರುವುದಕ್ಕಾಗಿ ಮಕ್ಕಳು ಈ ಕಿರುನಾಟಕವನ್ನು ಅಭಿನಯಿಸಿದ್ದಾರೆ. ಇಸ್ಲಾಂ, ಸಿಖ್, ಕ್ರೈಸ್ತ, ಹಿಂದೂ ಹೀಗೆ ನಾನಾ ಧರ್ಮದ ಪ್ರಕಾರವಾಗಿ ದೇವರಿಗೆ ಪ್ರಾರ್ಥನೆ ಸಲ್ಲಿಸುವ ವಿಧವನ್ನು ಭಾರತ ಮಾತೆಯ ಮೂಲಕ ತೋರಿಸಲಾಗಿತ್ತು’ ಎಂದು ಅವರು ಹೇಳಿದ್ದಾರೆ. ಸುಳ್ಳು ಸುದ್ದಿ ಹರಡುವವರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಲಖನೌ ಪೊಲೀಸರು ತಮ್ಮ ಟ್ವಿಟರ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. ಜೊತೆಗೆ, ಇದು ದೆಹಲಿ ಶಾಲೆಯ ವಿಡಿಯೊವಲ್ಲ, ಬದಲಿಗೆ ಲಖನೌನ ಶಾಲೆಯೊಂದರ ವಿಡಿಯೊ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಬೆರಗಿನ ಬೆಳಕು
ಗುರುರಾಜ ಕರಜಗಿ



ಹಗುರಾದ ಬದುಕು

ಜೋಳಿಗೆಯ ಪಿಡಿದು ನೀನೂರಿನೂರಿಗೆ ನಡೆದು |
ಹೇಳುತ್ತ ಹಾಡುಗಳ, ಭಾರಗಳ ಮರೆತು ||
ಬೀಳು ಮೇಲುಗಳೆಣಿಕೆಯಿಂ ಮನವನಲುಗಿಸದೆ |
ಬಾಳ ನಡೆಸುವುದೆಂದೊ? – ಮಂಕುತಿಮ್ಮ || **925**

ಪದ-ಅರ್ಥ: ಪಿಡಿದು = ಹಿಡಿದು, ನೀನೂರಿನೂರಿಗೆ = ನೀನು + ಊರಿನ್(ಊರಿನಿಂದ) + ಊರಿಗೆ, ಮೇಲುಗಳೆಣಿಕೆಯಿಂ = ಮೇಲುಗಳ + ಎಣಿಕೆಯಿಂ-(ಎಣಿಕೆಯಿಂದ), ಮನವನಲುಗಿಸದೆ = ಮನವನು- + ಅಲುಗಿಸದೆ, ನಡೆಸುವುದೆಂದೊ = ನಡೆಸುವುದು + ಎಂದೊ.

ವಾಚ್ಯಾರ್ಥ: ಜೋಳಿಗೆಯನ್ನು ಹಿಡಿದು, ಊರಿಂದೂರಿಗೆ ಹಾಡುತ್ತ, ಭಾರಗಳನ್ನೆಲ್ಲ ಮರೆತು ನಡೆದು, ಬೀಳು ಸೋಲುಗಳನ್ನು ಚಿಂತಿಸದೆ, ಮನವನ್ನು ಕಲಕಿಸಿಕೊಳ್ಳದೆ, ಬಾಳನ್ನು ನಡೆಸುವುದೆಂದು?

ವಿವರಣೆ: ಈ ಕಗ್ಗ ಹೇಳುವುದು ಜೀವನ್ಮುಕ್ತನ ಲಕ್ಷಣಗಳನ್ನು. ಜೀವನ್ಮುಕ್ತಿ ಎಂಬುವುದು ಮನುಷ್ಯನ ಆಂತರಿಕ ಪರಮ ಸ್ವಾತಂತ್ರ್ಯ. ಆ ಸ್ವಾತಂತ್ರ್ಯವೆ ನಿತ್ಯಸುಖಕ್ಕೆ ಕಾರಣ. ರಶಿಯಾದ ಅನುಭಾವಿ ಲೇಖಕಿ, ಚಿಂತಕಿ. ಹೆಲೆನಾ ಬ್ಲಾವಾಸ್ಕಿ, “ಯಾರ ಮನಸ್ಸು ಅತ್ಯಂತ ಪ್ರಶಾಂತವಾಗಿದೆಯೊ, ಒಂದಿಷ್ಟೂ ವಿಲಿತವಾಗುವುದಿಲ್ಲವೊ ಅವನೇ ಮುಕ್ತ” ಎನ್ನುತ್ತಾರೆ. ಅಂದರೆ ಮುಕ್ತತೆ ಮನಸ್ಸಿನ ನಿರಾಳತೆಯನ್ನು ಅವಲಂಬಿಸಿದೆ. ಮುಕ್ತನಾದವನು ಪ್ರಪಂಚದಲ್ಲೇ ಇರುತ್ತಾನೆ. ಆ ಪ್ರಪಂಚ ಅವನಲ್ಲಿ ಇಲ್ಲ. ಎಲ್ಲವನ್ನೂ ಸಾಕ್ಷಿಯಂತೆ ನೋಡುತ್ತಾನೆ. ಆದರೆ ಯಾವುದೂ ಅವನದಲ್ಲ. ಹೊರಗೆ ಸಾಕಾರವಾದ ಸಂಭ್ರಮದ ಜಗತ್ತು, ಒಳಗೆ ನಿರಾಕಾರವಾದ ನಿರ್ವಯಲು. ಒಬ್ಬ ಮನುಷ್ಯ ಸಂಗೀತ ಕಚೇರಿಗೆ ಹೋದ. ಅಲ್ಲಿ ಕೊಳಲುವಾದನದ ಕಾರ್ಯಕ್ರಮ. ಅದೇನು ಸಂಗೀತ! ಅದೆಂಥ ವಾದ್ಯ! ಅವನ ಮನಸ್ಸು ಅವರ್ಣನೀಯವಾದ ಸಂತೋಷದಿಂದ ತುಂಬಿ ಹೋಯಿತು. ಕಾರ್ಯಕ್ರಮ ಮುಗಿದ ಮೇಲೆ ವೇದಿಕೆಯ ಮೇಲೆ ಹೋದ. ಕೊಳಲುವಾದಕನ ಅಪ್ಪಣೆ ಪಡೆದು ಕೊಳಲುಗಳನ್ನೆಲ್ಲ ಮುಟ್ಟಿನೋಡಿದ. ಅಯ್ಯೋ ಅವೆಲ್ಲ ಬಿದಿರಿನ ತುಂಡುಗಳು! ಕೊಳಲಿನ ಒಳಗೆ ಇಣುಕಿ ನೋಡಿದ. ಅಲ್ಲೇನಿದೆ? ಬರೀ ಖಾಲಿ. ವಾದಕನನ್ನು ಕೇಳಿದ, “ಒಳಗಡೆ ಏನೂ ಇಲ್ಲ, ಆದರೆ ಈ ಅದ್ಭುತ ನಾದ ಬಂದದ್ದು ಹೇಗೆ? ಎಲ್ಲಿಂದ?” ವೇಣುವಾದಕ ಮೆಲ್ಲನೆ ನಕ್ಕು ಹೇಳಿದ, “ಗೆಳೆಯಾ ಅದು ಖಾಲಿಯಾಗಿದ್ದರಿಂದಲೇ ಆ ಸುಮಧುರ ನಾದ ಬಂದದ್ದು. ಅದು ತುಂಬಿದ್ದರೆ ಯಾವ ಧ್ವನಿಯೂ ಹೊರಡುತ್ತಿರಲಿಲ್ಲ”. ಹೊರಗಡೆಗೆ ಕೊಳಲಿನ ಹೊಳಪಿದೆ ಆದರೆ ಒಳಗೆ ಖಾಲಿ. ಹೀಗೆ ಒಳಗೆ ಖಾಲಿಯಾಗುವುದೇ ಜೀವನ್ಮುಕ್ತನ ಲಕ್ಷಣ. ಅದನ್ನೇ ಕಗ್ಗ ಹೇಳುತ್ತದೆ. ನನ್ನ ಪದವಿಗಳ, ಅಧಿಕಾರಗಳ, ಹಮ್ಮುಬಿಮ್ಮುಗಳ ಕುಣಿಕೆಗಳನ್ನು- ಕಳೆದುಕೊಂಡು, ದಾಸನಂತೆ ಜೋಳಿಗೆಯನ್ನು ಹಿಡಿದು ಊರಿಂದೂರಿಗೆ ಹಾಡುತ್ತ ನಡೆದು, ಬದುಕಿನ ಭಾರಗಳನ್ನು ಕಳೆದು, ಜೀವನದಲ್ಲಿ ಬಂದ ಮೇಲು ಬೀಳುಗಳನ್ನು ಮರೆತು, ಮನವನ್ನು ಏಕಾಗ್ರಗೊಳಿಸಿ ಬಾಳ ನಡೆಸು ಎನ್ನುತ್ತದೆ. ಹಾಗೆ ನಡೆಯುವುದು ಸಾಧ್ಯವಾದೀತೇ? ತಲೆಯಲ್ಲಿ ಸತ್ಯದ ಬೆಳಕು, ಹೃದಯದಲ್ಲಿ ಪ್ರೇಮದ ಗಂಗೆ ಹರಿದಾಗ ಸಾಧ್ಯವಾದೀತು.

ಗುಂಡಣ್ಣ



ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜುಲೈ 12, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದಶಮಿ ಗಂ. 18-00 ನಕ್ಷತ್ರ: ಭರಣಿ ಗಂ. 19-44 ಯೋಗ: ಧೃತಿ ಗಂ. 09-40 ಕರಣ: ವಣಿಜ ಗಂ. 05-59, ಮಿಥುನ ಮಾಸದ 27 ನೇ ದಿನ, ಮಳೆನಕ್ಷತ್ರ: ಪುನರ್ವಸು 2.
ರಾಹುಕಾಲ: ಮಧ್ಯಾಹ್ನ 12-00 - 01-30,
ಸೂರ್ಯೋದಯ: 06-14 ಸೂರ್ಯಾಸ್ತ: 06-58,
ಮುಸ್ಲಿಂ ದಿನಾಂಕ: 23 ಜುಲ್‌ಹಿಜಾ
ಅದೃಷ್ಟ ಸಂಖ್ಯೆ: 1, 11

ಮೇಷ: ಕೆಲಸದಲ್ಲಿದ್ದ ಸಣ್ಣಪುಟ್ಟ ತೊಡಕು ನಿವಾರಿಸಿಕೊಳ್ಳುವುದನ್ನು ಸ್ವಂತವಾಗಿ ಅಭ್ಯಾಸಿಸಿ. ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭವು ಒದಗಿ ಬರಲಿದೆ. ದೇವರ ದರ್ಶನ ಆತ್ಮವಿಶ್ವಾಸವನ್ನು ಹೆಚ್ಚಿಸಲಿದೆ.

ವೃಷಭ: ಸಹೋದರನ ಮೂಲಕ ಜಮೀನಿನ ಖರೀದಿ ವಿಚಾರದ ಮಾತುಕತೆಗಳು ಜರುಗುವುದು. ದೇವಸ್ಥಾನದಲ್ಲಿನ ವಿಶೇಷ ಕಾರ್ಯಕ್ರಮಗಳಿಗೆ ಸಹಾಯ ಅಪೇಕ್ಷಿಸುವವರ ವಿಚಾರದಲ್ಲಿ ಮುಂಜಾಗ್ರತೆ ಇರಲಿ.

ಮಿಥುನ: ಮೇಲಧಿಕಾರಿಗಳು ನಿಮ್ಮ ಮೇಲಿಟ್ಟಿದ್ದ ಭರವಸೆ ಹುಸಿಯಾಗದಂತೆ ಕಾರ್ಯನಿರ್ವಹಿಸಲು ಅಶಕ್ತರಾಗುವ ಸಂಭವವಿದೆ. ಅವಿವಾಹಿತರಿಗೆ ಕಂಕಣ ಬಲ ಕೂಡಿ ಬರಲಿದೆ. ಬೆಲೆಬಾಳುವ ವಸ್ತು ಕಳೆದುಕೊಳ್ಳುವ ಸಾಧ್ಯತೆಗಳಿದೆ.

ಕರ್ಕಾಟಕ: ಗೃಹಕೃತ್ಯದ ಜವಾಬ್ದಾರಿ ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ. ನಿರುದ್ಯೋಗಿ ಯುವಕರು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಕ್ಕೆ ಪ್ರಯತ್ನಪಡಬಹುದು. ಮಕ್ಕಳ ಆರೋಗ್ಯದಲ್ಲಿ ಕೊರತೆ ಇರುವುದಿಲ್ಲ.

ಸಿಂಹ: ಉತ್ತಮ ಒಡನಾಟ ಹೊಂದಿರುವ ವ್ಯಕ್ತಿಗಳೊಂದಿಗೆ ವ್ಯವಹಾರಿಕವಾಗಿ ಲಾಭತರುವ ಆಲೋಚನೆ ಹಂಚಿಕೊಳ್ಳುವುದರಿಂದ ವಿವಿಧ ರೀತಿಯಲ್ಲಿ ನಷ್ಟ ಆಗುವುದು. ಬಿಳಿ ಬಣ್ಣ ಶುಭತರಲಿದೆ.

ಕನ್ಯಾ: ಆರ್ಥಿಕವಾಗಿ ಅಭಿವೃದ್ಧಿಯಿದೆ. ಸಾಲಕ್ಕೆಂದು ಅಡವಿಟ್ಟಿದ್ದ ನಿಮ್ಮ ಆಭರಣವು ಋಣ ಪರಿಹಾರವಾಗಿ ಕೈ ಸೇರಲಿದೆ. ಪರಿವಾರದವರೊಡನೆ ಸಂಚಾರ ಮಾಡುವಂಥ ಸಾಧ್ಯತೆ ಇದೆ.

ತುಲಾ: ಬ್ಯಾಂಕ್ ನೌಕರರಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ಯಾವುದೋ ಮೂಲದಿಂದ ಬಂದ ಹಣ ದೇವ ಕಾರ್ಯಗಳಿಗೆ ಉಪಯೋಗಿಸುವುದು ಒಳ್ಳೆಯದು. ಸಂದಿಗ್ಧ ಪರಿಸ್ಥಿತಿ ಧೈರ್ಯದಿಂದ ಎದುರಿಸುವಿರಿ.

ವೃಶ್ಚಿಕ: ಕೌಶಲವನ್ನು ತೋರಲು ಹೆಚ್ಚಿನ ಅವಕಾಶಗಳು ನಿಮಗೆದುರಾಗಲಿದೆ. ದಿನದಿಂದ ದಿನಕ್ಕೆ ಹೊಸ ಹೊಸ ಪ್ರಯತ್ನವಿರಲಿ. ತಂದೆಯ ಮನಸ್ಸಿಗೆ ನೋವಾಗುವ ಸಂಗತಿಯು ನಿಮ್ಮಿಂದ ನಡೆಯಲಿದೆ.

ಧನು: ಪರಿಶ್ರಮಕ್ಕೆ ತಕ್ಕಂಥಹ ಆದಾಯವಿಲ್ಲದೆ ಸೊರಗಿದ್ದ ಅತಿ ಹೆಚ್ಚಿನ ವರಮಾನದ ಮಾರ್ಗವನ್ನು ಆಪ್ತ ಸ್ನೇಹಿತರೊಬ್ಬರು ತೋರುವರು. ಎಲೆಕ್ಟ್ರಿಕಲ್ ಕಂಟ್ರಾಕ್ಟರುಗಳಿಗೆ ಸರ್ಕಾರದಿಂದ ಉತ್ತಮ ಅವಕಾಶ ಸಿಗಲಿವೆ.

ಮಕರ: ಕ್ಷಣಿಕ ಸುಖಗಳಿಗೆ ಗಮನ ನೀಡದೆ, ಮುಖ್ಯ ವಿಷಯಗಳ ಬಗ್ಗೆ ಗಂಭೀರವಾಗಿ ಆಲೋಚಿಸುವುದು ನಿಮ್ಮ ಏಳಿಗೆಗೆ, ಅಭಿವೃದ್ಧಿಗೆ ಮೆಟ್ಟಿಲುಗಳಾಗುವುದು. ಕಂದಾಯ ಇಲಾಖೆಯವರಿಗೆ ಬಿಡುವಿಲ್ಲದ ಕೆಲಸಗಳು.


ಕುಂಭ: ಮನೆಯಲ್ಲಿ ಅಣ್ಣ-ತಮ್ಮಂದಿರ ಆಂತರಿಕ ವ್ಯವಹಾರಗಳು ಒಂದು ಹಂತ ತಲುಪುತ್ತವೆ. ದೇವರ ಅನುಗ್ರಹದಿಂದ ಎಲ್ಲಾ ಕೆಲಸದಲ್ಲೂ ಜಯಶಾಲಿಯಾಗುವ ಲಕ್ಷಣವಿರುವುದು. ಶೀತದಬಾಧೆಯು ಕಾಡಬಹುದು.

ಮೀನ: ವಿದೇಶಿ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದ ಮಾಡಿಕೊಳ್ಳುವಂಥ ದೊಡ್ಡ ದೊಡ್ಡ ತೀರ್ಮಾನಗಳನ್ನು ತೆಗೆದುಕೊಳ್ಳಲು ಬಹಳ ಸಮಂಜಸವಲ್ಲವೆಂದು ಕಂಡು ಸರಿಯಾದ ಹಾದಿಯಲ್ಲಿ ನಡೆಯುವಿರಿ.

ಪದಬಂಧ 5377
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಭಾಷೆಯನ್ನು ಹೀಗೆ ತರ್ಜುಮೆ ಮಾಡಿ (4)
5.ಮಲಯದಲ್ಲಿರುವ ಶ್ರೀಗಂಧ (4)
6.ಯಮನಿದ್ದಾಗ ಕಂಡ ಸೂತ್ರ (3)
9.ಜನರ ಬಳಿ ಬಂದಿರುವ ಆಳು (3)
10.ಹವನದ ಹತ್ತಿರ ಕಾಣಿಸಿದ ಕುದುರೆ ಮುಖ (5)
11.ತಡಸಲು ಬಳಿ ಇರುವ ಸಮುದ್ರ (3)
12.ಕರದಿಂದ ಶುರುವಾಗಿರುವ ಉತ್ಸವ (3)
14.ಕನ್ನ ಹಾಕಿ ಕದ್ದೊಯ್ದು ಚಾಳೀಸು! (4)
15.ಕೆಂಪು ಬಣ್ಣದ ಗುಲಾಬಿ (4)

ಮೇಲಿಂದ ಕೆಳಕ್ಕೆ
1. ಆ ಬಾಗಿಲಿನ ಬಳಿಯಿರುವ ನಿರ್ಭಾಗ್ಯ ಹೆಂಗಸು (4)
2.ಅಸುರನಲ್ಲೇ ದೇವತೆಯನ್ನು ಹುಡುಕಿ! (2)
3.ಜಯವನ್ನು ಗಳಿಸಿರುವ ಒಡೆಯ (4)
7.ಮಹಡಿಯಿಂದ ಕಾಣಿಸಿದ ಭವ್ಯವಾದ ಸೌಧ (3)
8.ಕಳವಳಪಟ್ಟು ತಿಂದಿರುವ ತುತ್ತು (3)
9.ಜನರ ಹತ್ತಿರವಿರುವ ಸೀತೆಯ ತಂದೆ (3)
11.ಕರುವಿಗೆ ತೋರಿದ ದಯೆ (4)
13.ಗಡಿಯ ಬಳಿ ತೋರಿದ ಅವಸರ (4)
15.ಉರಿಯುತ್ತಿರುವ ಇದ್ದಿಲು (2)



5376ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಲ್ಲವಿ 3.ಉಪವಾಸ
5.ಕರ 6.ಅನುಮತಿ
8.ತಾತಾ 9.ಉಮೇದು
10.ವಧು 11.ವನವಾಸ
12.ಮಂಗ 14.ನದೀತೀರ
15.ರಸಜ್ಞ

ಮೇಲಿಂದ ಕೆಳಕ್ಕೆ:
1.ಪತ್ನಿ 2.ವಿಧುರ
4.ಸದ್ಗತಿ 5.ಕರತಾಡನ
6.ಆಮದು 7.ಮದುವಣಿಗ
9.ಉಲ್ಲಾಸ 11.ವದನ
12.ಮಂದಿರ 13.ಯಜ್ಞ

ಸುಡೊಕು 5763

	7			5		2		8
5		4	1		8			
	8			7			5	
	6		9	3		1		2
2		5						
	3			8	2	5		6
			5		6		2	
3		2						
	5			2		4		1

ಆಡುವುದು ಹೇಗೆ?


ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5762 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಷೇರುಪೇಟೆ ವಹಿವಾಟು

273



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19355
ಇಂದಿನ ಅಂತ್ಯ	19439
▲	83
ದಿನದ ಗರಿಷ್ಠ	19515

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹122;436

ದ್ವಿತಳಿ (ಬಿ.ವಿ) ₹300;542

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹465
12 ಮೊಟ್ಟೆಗೆ	₹66

ಮೈಸೂರು

100 ಮೊಟ್ಟೆಗೆ	₹467

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1715(1720)
ಸೋಯಾ (ರಿಫೈನ್ಡ್)	₹950(945)
ಸೂರ್ಯಕಾಂತಿ (ರಿಫೈನ್ಡ್)	₹950(940)
ಪಾಮೋಲಿನ್	₹864(865)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1,500-1,800
ಮಧ್ಯಮ	₹1,200-1,500
ಸಣ್ಣ	₹800-1,200

ಕೊಬ್ಬರಿ ಧಾರಣೆ

ಅರಸೀಕೆರೆ	₹7500-8988
ಕೆ.ಆರ್.ಪೇಟೆ (ಇತರ)	₹7700-7750
ತುರುವೇಕೆರೆ	₹8900-8900

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹130

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು -	495-500

ಅಡಿಕೆ

ಬಂಟ್ವಾಳ

ಕೋಕ	12500-25000
ಹೊಸತು	27500-41500
ಹಳತು	46000-49000

ಕುಂದಾಪುರ

ಹಳೆಚಾಲಿ	43500-47000
ಹೊಸಚಾಲಿ	37000-41500

ಶಿರಸಿ

ಬೆಟ್ಟೆ	40099-47699
ಬಿಳಿಗೋಟು	27899-35499
ಚಾಲಿ	37569-40411
ಕೆಂಪುಗೋಟು	24899-37801
ರಾಶಿ	47199-52899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14,200	14200	14200	159.85ಸೆಂಟ್ಸ್
ಎಸಿ	7,280	7200	7250	
ಆರ್‌ಪಿ	10,100	10350	10200	ಲಂಡನ್
ಆರ್‌ಸಿ	5,960	232	5900	2576 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

11-7-2023

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1725(1730)
ಒಂದು ವಾರದ ಡೆಲಿವರಿ	1720(1725)
ಸೋಯಾ ಕಚ್ಚಾ	885(890)
ಪಾಮ್ ವಾರದ ಡೆಲಿವರಿ	862(863)
ಸೂರ್ಯಕಾಂತಿ ಎಣ್ಣೆ ಕಚ್ಚಾ	860(850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58700(58500)
ಬೆಳ್ಳಿ ಕೆ.ಜಿ 70900(70700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರತ್ಯೇಕವಾಗಿ ಇರಲಿರುವ ಫಾಕ್ಸ್‌ಕಾನ್

ನವದೆಹಲಿ (ಪಿಟಿಐ): ಸೆಮಿಕಂಡಕ್ಟರ್ ತಯಾರಿಕೆಗೆ ವೇದಾಂತ ಸಮೂಹದ ಜೊತೆ ಮಾಡಿಕೊಂಡಿದ್ದ ಒಪ್ಪಂದದಿಂದ ಹಿಂದೆ ಸರಿಯುತ್ತಿರುವುದಾಗಿ ಹೇಳಿರುವ ಫಾಕ್ಸ್‌ಕಾನ್ ಕಂಪನಿಯು, ಸೆಮಿಕಂಡಕ್ಟರ್ ಮತ್ತು ಡಿಸ್‌ಪ್ಲೆ ತಯಾರಿಕಾ ಯೋಜನೆಗೆ ಕೇಂದ್ರದಿಂದ ಉತ್ತೇಜನಕ್ಕೆ ಅರ್ಜಿ ಸಲ್ಲಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದೆ.

'ಭಾರತದಲ್ಲಿ ಹಾಗೂ ಭಾರತದ ಆಚೆಗೆ ನಾವು ಬಹುಬಗೆಯ ಪಾಲುದಾರರನ್ನು ಬಯಸುತ್ತೇವೆ. ಭಾರತವು ಮುಂದಿನ ಹಂತಕ್ಕೆ ದಾಪುಗಾಲು ಇರಿಸುವುದನ್ನು ಆ ಪಾಲುದಾರರೂ ಬಯಸಬೇಕು. ಅಲ್ಲದೆ, ನಾವು ಹೊಂದಿರುವ ವಿಶ್ವದರ್ಜೆಯ ತಯಾರಿಕಾ ವ್ಯವಸ್ಥೆ ಹಾಗೂ ಪೂರೈಕೆ ವ್ಯವಸ್ಥೆಯ ನಿರ್ವಹಣೆಗೆ ಕೊಡುಗೆ ನೀಡುವವರಾಗಿರಬೇಕು' ಎಂದು ಕಂಪನಿ ಮಂಗಳವಾರ ಹೇಳಿದೆ.

ವೇದಾಂತ ಜೊತೆಗಿನ ಪಾಲುದಾರಿಕೆಯಿಂದ ಹೊರಬಂದಿರುವ ಕುರಿತು ಪ್ರತಿಕ್ರಿಯಿಸಿರುವ ಫಾಕ್ಸ್‌ಕಾನ್, ಇದು ಎರಡೂ ಕಂಪನಿಗಳು ಸಮ್ಮತಿಯೊಂದಿಗೆ ತೆಗೆದುಕೊಂಡಿರುವ ತೀರ್ಮಾನ ಎಂದು ಹೇಳಿದೆ. 'ಹೊಸದೊಂದು ಪ್ರದೇಶದಲ್ಲಿ ಸೆಮಿಕಂಡಕ್ಟರ್‌ಗಳ ತಯಾರಿಕೆಯು ಸವಾಲಿನ ಕೆಲಸ. ಆದರೆ ನಾವು ಭಾರತದಲ್ಲಿ ಹೂಡಿಕೆ ಮಾಡುವ ವಿಚಾರದಲ್ಲಿ ಬದ್ಧತೆ ಹೊಂದಿದ್ದೇವೆ' ಎಂದು ತಿಳಿಸಿದೆ.



ನ್ಯಾಟೊ ಶೃಂಗಸಭೆ ಆರಂಭದ ಮೊದಲ ದಿನ ವಿಲ್ನಿಯಸ್‌ನಲ್ಲಿ ಮಂಗಳವಾರ ಉಕ್ರೇನ್ ಬೆಂಬಲಿಗರು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಭಾವಚಿತ್ರ ಪ್ರದರ್ಶಿಸಿದ್ದು, ಸದಸ್ಯತ್ವ ನೀಡಬೇಕು ಎಂಬ ಬೇಡಿಕೆ ಕುರಿತು ಗಮನಸೆಳೆದರು –ಎಎಫ್‌ಪಿ ಚಿತ್ರ

'ಉಕ್ರೇನ್‌ಗೆ ನ್ಯಾಟೊ ಸದಸ್ಯತ್ವ, ಒಮ್ಮತವಿಲ್ಲ'

ವಿಲ್ನಿಯಸ್ (ಎಪಿ): 'ಉಕ್ರೇನ್‌ಗೆ ನ್ಯಾಟೊ ಸದಸ್ಯತ್ವ ನೀಡುವ ಕುರಿತು ವೇಳಾಪಟ್ಟಿ ನಿಗದಿಪಡಿಸಿಲ್ಲ. ಮೈತ್ರಿ ರಾಷ್ಟ್ರಗಳು ಸಮ್ಮತಿಸಿದಾಗ ಹಾಗೂ ಷರತ್ತುಗಳಿಗೆ ಬದ್ಧವಾದಾಗ ಸದಸ್ಯತ್ವ ಸಿಗಲಿದೆ' ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೊನ್‌ಟೆನ್‌ಬರ್ಗ್ ಹೇಳಿದ್ದಾರೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಈ ಬಗ್ಗೆ ನಿರಾಸೆ ವ್ಯಕ್ತಪಡಿಸಿದ್ದು, 'ಮೈತ್ರಿ ರಾಷ್ಟ್ರಗಳನ್ನು ಗೌರವಿಸುತ್ತೇವೆ. ಸದಸ್ಯತ್ವ ಗೌರವಕ್ಕೆ ಉಕ್ರೇನ್ ಅರ್ಹವಾಗಿದೆ' ಎಂದು ಟ್ವೀಟ್ ಮಾಡಿದ್ದಾರೆ. 'ಸದಸ್ಯತ್ವಕ್ಕೆ ಇದು ಸಕಾಲವಲ್ಲ ಎಂಬ ಅಭಿಪ್ರಾಯವನ್ನು 'ಅಸಂಬದ್ಧ' ಎಂದು ಟೀಕಿಸಿದರು.

ಈ ಕುರಿತು ಸುದ್ದಿಗಾರರ ಜೊತೆಗೆ ಮಾತನಾಡಿದ ಜೆನ್ಸ್ ಸ್ಟೊನ್‌ಟೆನ್‌ಬರ್ಗ್ ಅವರು, 'ಉಕ್ರೇನ್, ನ್ಯಾಟೊ ಸದಸ್ಯ ರಾಷ್ಟ್ರವಾಗಲಿದೆ. ಅದಕ್ಕೆ ಬೇಕಾಗಿರುವ ಕ್ರಿಯಾಯೋಜನೆಯನ್ನು ರೂಪಿಸಲಾಗುವುದು. ಸದಸ್ಯತ್ವ ವಿಚಾರದಲ್ಲಿ ಉಕ್ರೇನ್ ಒಂದು ಹೆಜ್ಜೆ ಮುಂದಿಟ್ಟಂತಾಗಿದೆ' ಎಂದು ಹೇಳಿದರು.

ಉಕ್ರೇನ್‌ಗೆ ಹಲವು ರಾಷ್ಟ್ರಗಳು ಶಸ್ತ್ರಾಸ್ತ್ರಗಳ ನೆರವು ನೀಡುತ್ತಿದ್ದರೂ, ನ್ಯಾಟೊಗೆ ಸೇರ್ಪಡೆ ಕುರಿತಂತೆ 31 ಸದಸ್ಯ ರಾಷ್ಟ್ರಗಳಲ್ಲಿ ಸಹಮತ ಮೂಡಲಿಲ್ಲ. ಆದರೆ, ಸದಸ್ಯತ್ವ ಪಡೆಯಲು ಇರುವ ಅಡೆತಡೆಗಳನ್ನು ತ್ವರಿತವಾಗಿ ನಿವಾರಿಸಲು ಮುಖಂಡರು ನಿರ್ಧರಿಸಿದರು.

ಉಕ್ರೇನ್ ಈಗ ರಷ್ಯಾ ವಿರುದ್ಧ ಗೆಲ್ಲುವುದು ಮುಖ್ಯ. ಯುದ್ಧಕ್ಕೆ ತೆರೆ ಬೀಳದೇ ಸದಸ್ಯತ್ವ ನೀಡುವ ವಿಷಯದ ಚರ್ಚೆ ನಡೆಯುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಸ್ವೀಡನ್‌ಗೆ ಸದಸ್ಯತ್ವ: ಇನ್ನೊಂದೆಡೆ ನ್ಯಾಟೊ ಸದಸ್ಯ ರಾಷ್ಟ್ರವಾಗಿ ಸ್ವೀಡನ್‌ಗೆ ಮಾನ್ಯ ಮಾಡಲು ನ್ಯಾಟೊ ಶೃಂಗಸಭೆ ತೀರ್ಮಾನಿಸಿತು. ಈ ವಿಷಯವನ್ನು ಪ್ರಕಟಿಸಿದ ಅಮೆರಿಕ ಅಧ್ಯಕ್ಷ ಜೋ ಬೈಡನ್, 'ಇದು, ಐತಿಹಾಸಿಕ ಕ್ಷಣ' ಎಂದು ಬಣ್ಣಿಸಿದರು.

ಪ್ರಮುಖಾಂಶಗಳು

- ಉಕ್ರೇನ್‌ಗೆ 40 ಹೆಚ್ಚುವರಿ 'ಮರ್ದೆರ್' ಯುದ್ಧ ವಾಹನಗಳು ಹಾಗೂ 25 ಹಳೆಯ 'ಲೆಪರ್ಡ್ 1' ಟ್ಯಾಂಕ್‌ಗಳು, 2 'ಪೇಟ್ರಿಯಾಟ್' ಕ್ಷಿಪಣಿಗಳು ಸೇರಿದಂತೆ ಹಲವು ಶಸ್ತ್ರಾಸ್ತ್ರಗಳ ನೆರವು ಒದಗಿಸಲು ಜರ್ಮನಿ ನಿರ್ಧರಿಸಿದೆ. ಇದರ ಮೌಲ್ಯ ₹ 6,337 ಕೋಟಿ ಎಂದು ಅಂದಾಜಿಸಲಾಗಿದೆ.
- ಶೃಂಗಸಭೆಯಲ್ಲಿ 50 ಸಾವಿರ ವಿದೇಶಿ ಆಹ್ವಾನಿತರು, 2400 ಪ್ರತಿನಿಧಿಗಳು ಭಾಗವಹಿಸಿದ್ದಾರೆ. ವಿವಿಧ 40 ರಾಷ್ಟ್ರಗಳ ಅಧ್ಯಕ್ಷರು ಅಥವಾ ಪ್ರಧಾನಮಂತ್ರಿಗಳು ಸೇರಿದ್ದಾರೆ. ಈ ಹಿನ್ನೆಲೆಯಲ್ಲಿ ಭದ್ರತೆಗಾಗಿ ಲಿಥುವೇನಿಯ ಸೇನೆಯ ಒಟ್ಟು 12000 ಸಿಬ್ಬಂದಿಯನ್ನು ನಿಯೋಜಿಸಿದೆ.
- ಸದಸ್ಯ ರಾಷ್ಟ್ರಗಳು ರಕ್ಷಣೆಗಾಗಿ ಆದಾಯದ ಶೇ 2ರಷ್ಟನ್ನು ವಿನಿಯೋಗಿಸಬೇಕು ಎಂದು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಸಲಹೆ ಮಾಡಿದ್ದಾರೆ. ನ್ಯಾಟೊ ಕಳೆದ ವಾರ ಬಿಡುಗಡೆ ಮಾಡಿದ್ದ ವರದಿಯಂತೆ, 31 ಸದಸ್ಯ ರಾಷ್ಟ್ರಗಳಲ್ಲಿ 11 ರಾಷ್ಟ್ರಗಳು ಈ ಗುರಿ ಸಾಧಿಸಿವೆ.

ರಷ್ಯಾ ನಿಲುವಿನಲ್ಲಿ ಕಾಣದ ಬದಲಾವಣೆ

ವಿಲ್ನಿಯಸ್ (ರಾಯಿಟರ್ಸ್): ಅಣ್ವಸ್ತ್ರಗಳಿಗೆ ಸಂಬಂಧಿಸಿದಂತೆ ರಷ್ಯಾದ ನಿಲುವಿನಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ ಎಂದು 'ನ್ಯಾಟೊ'ದ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೊಲ್‌ಟೆನ್‌ಬರ್ಗ್ ಹೇಳಿದ್ದಾರೆ.

ಬೆಲಾರಸ್‌ನಲ್ಲಿ ಅಣ್ವಸ್ತ್ರ ಸಜ್ಜಿತ ಶಸ್ತ್ರಾಸ್ತ್ರಗಳನ್ನು ದಾಸ್ತಾನು ಮಾಡುವ ತೀರ್ಮಾನವನ್ನು ರಷ್ಯಾ ಪ್ರಕಟಿಸಿದ ಹಿಂದೆಯೇ ನ್ಯಾಟೊ ಈ ಕುರಿತು ಪ್ರತಿಕ್ರಿಯಿಸಿದೆ. 'ರಷ್ಯಾದ ನಿಲುವು ದುಡುಕಿನದ್ದು ಹಾಗೂ ಅಪಾಯಕಾರಿಯಾದುದು' ಎಂದು ನ್ಯಾಟೊ ಪ್ರತಿಕ್ರಿಯಿಸಿದೆ.

ನ್ಯಾಟೊ ಸದಸ್ಯ ರಾಷ್ಟ್ರಗಳು ರಷ್ಯಾದ ನಡೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿವೆ. ಸದ್ಯ, ರಷ್ಯಾದ ನಿಲುವಿನಲ್ಲಿ ಯಾವುದೇ ಬದಲಾವಣೆ ಕಾಣಿಸುತ್ತಿಲ್ಲ. ಆದರೆ, ನಾವು ಎಚ್ಚರಿಕೆಯಿಂದ ಗಮನಿಸುತ್ತಿದ್ದೇವೆ ಎಂದು ಸ್ಟೊಲ್‌ಟೆನ್‌ಬರ್ಗ್ ಅವರು ಹೇಳಿದರು.



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಉಮೇಶ ಆರ್, ಊರು ತಿಳಿಸಿಲ್ಲ

- **ಪ್ರಶ್ನೆ: ನಾನು ಇಂಡಿಯನ್ ಬ್ಯಾಂಕ್‌ನಲ್ಲಿ ವೈಯಕ್ತಿಕ ಸಾಲ ₹6.40 ಲಕ್ಷ ಪಡೆದಿದ್ದು, ಅದರ ಇಎಂಐ ₹11,093. 84 ತಿಂಗಳ ಪಾವತಿಸ. ನಾನು ಈ ಸಾಲವನ್ನು ಬೇಗನೆ ತೀರಿಸಲು ಮತ್ತು ಬಡ್ಡಿ ಕಡಿಮೆ ಮಾಡಲು ಯಾವ ರೀತಿಯಲ್ಲಿ ಇಎಂಐ ಕಟ್ಟಬೇಕು?**

ಉತ್ತರ: ವೈಯಕ್ತಿಕ ಸಾಲವನ್ನು ನಿಮ್ಮ ಆದಾಯ, ಸಿಬಿಲ್ ಅಂಕದ ಆಧಾರದ ಮೇಲೆ ನೀಡಲಾಗುತ್ತದೆ. ಇದನ್ನು ಪಡೆಯುವುದು ಇಂದಿನ ದಿನಗಳಲ್ಲಿ ಸುಲಭ. ಆಧಾರದ ಅಗತ್ಯ ಇಲ್ಲದೆ ಇದನ್ನು ನೀಡಲಾಗುತ್ತದೆ. ಹಾಗಾಗಿಯೇ ಇಂತಹ ಸಾಲಗಳ ಮೇಲಿನ ಬಡ್ಡಿಯು ಅಡಮಾನ ಸಾಲಗಳ ಬಡ್ಡಿಗಿಂತ ತುಸು ದುಬಾರಿ. ನಿಮ್ಮ ಸಾಲವನ್ನು ಅವಧಿಗೆ ಮೊದಲೇ ಪಾವತಿಸುವುದಕ್ಕೆ ಷರತ್ತುಗಳನ್ನು ವಿಧಿಸಲಾಗಿದೆಯೇ ಎನ್ನುವುದನ್ನು ತಿಳಿಯಿರಿ. ಅನಂತರ, ನಿಮ್ಮಲ್ಲಿರುವ ಹೆಚ್ಚುವರಿ ಉಳಿತಾಯದ ಮೊತ್ತವನ್ನು ಸಾಲ ಮರುಪಾವತಿಗೆ ಉಪಯೋಗಿಸಿಕೊಳ್ಳುವ ಬಗ್ಗೆ ಯೋಚಿಸಿ. ಈ ಮೇಲಿನ ಅಂಶಗಳನ್ನು ಪರಿಗಣಿಸಿದ ನಂತರ, ಕೆಳಗೆ ತಿಳಿಸಿರುವ ಯಾವುದಾದರೂ ಸೂಕ್ತ ವಿಧಾನ ಅನುಸರಿಸಿ ನಿಮ್ಮ ಸಾಲದ ಹೊರೆ ತಗ್ಗಿಸಬಹುದು.

1. ಸಾಲ ಬಾಕಿ ವರ್ಗಾವಣೆ: ಕಡಿಮೆ ಬಡ್ಡಿ ನಿಗದಿ ಮಾಡಿರುವ ಇತರ ಯಾವುದಾದರೂ ಬ್ಯಾಂಕ್‌ಗೆ ಸಾಲವನ್ನು ವರ್ಗಾಯಿಸಿಕೊಳ್ಳಲು ಅವಕಾಶ ಇದೆಯೇ ಎಂಬುದನ್ನು ವಿಚಾರಿಸಿ. ಈ ನಿರ್ಧಾರ ಕೈಗೊಳ್ಳುವ ಮೊದಲು, ಒಟ್ಟಾರೆ ನಿಮ್ಮ ಪ್ರಸ್ತುತ ಬಡ್ಡಿ ಪಾವತಿಗಿಂತ ಕಡಿಮೆ ವೆಚ್ಚವಾಗುವ ಬಗ್ಗೆ ಖಾತ್ರಿಪಡಿಸಿಕೊಳ್ಳಿ.

2. ಪೂರ್ವ ಪಾವತಿ: ನಿಮ್ಮಲ್ಲಿರುವ ಯಾವುದೇ ಹೆಚ್ಚುವರಿ ಮೊತ್ತ ಬಳಸಿ ಸಾಲವನ್ನು ಅವಧಿಗೆ ಮೊದಲೇ ಪಾವತಿ ಮಾಡುವತ್ತ ಗಮನ ಹರಿಸಿ. ಇದು ನೇರವಾಗಿ ನಿಮ್ಮ ಬಡ್ಡಿ ಹಾಗೂ ಇಎಂಐ ಮೊತ್ತ ಕಡಿಮೆ ಮಾಡುವಲ್ಲಿ ನೆರವಾಗುತ್ತದೆ. ಕೆಲವು ಬ್ಯಾಂಕುಗಳು ಕನಿಷ್ಠ 6ರಿಂದ 12 ತಿಂಗಳ ನಂತರವಷ್ಟೇ ಇಂತಹ ಅವಧಿಪೂರ್ವ ಮರುಪಾವತಿಗೆ ಅವಕಾಶ ಕೊಡುತ್ತವೆ. ಅವಧಿಪೂರ್ವ ಪಾವತಿಗೆ ಕೆಲವು ಬ್ಯಾಂಕುಗಳು ಬಾಕಿ ಇರುವ ಸಾಲದ ಅವಧಿಯ ಆಧಾರದಲ್ಲಿ ಶೇಕಡ 4ರವರೆಗೆ ಶುಲ್ಕ ವಿಧಿಸುತ್ತವೆ. ಈ ಬಗ್ಗೆ ವಿಚಾರಿಸಿ.

3. ಕಡಿಮೆ ಬಡ್ಡಿ ದರಕ್ಕಾಗಿ ಬ್ಯಾಂಕ್‌ನೊಂದಿಗೆ ಮಾತುಕತೆ ನಡೆಸಿ: ಮೇಲಿನ ಅಂಶಗಳಿಂದ ನಿಮಗೆ ಪ್ರಯೋಜನ ಆಗುವುದಿಲ್ಲ ಎಂದಾದರೆ, ತಮ್ಮ ಬ್ಯಾಂಕ್‌ನೊಂದಿಗೆ ಉತ್ತಮ ಗ್ರಾಹಕ ಸಂಬಂಧ ಹೊಂದುವ ದೃಷ್ಟಿಯಲ್ಲಿ ಪ್ರಸ್ತುತ ಸಾಲದ ಮೇಲಿನ ಬಡ್ಡಿ ದರ ಕಡಿಮೆ ಮಾಡಲು ಅವಕಾಶ ಕಲ್ಪಿಸಬಹುದು. ಕೆಲವೊಮ್ಮೆ ಗ್ರಾಹಕರ ಬ್ರ್ಯಾಂಡ್ ನಿಷ್ಠೆ ಹೆಚ್ಚಿಸಲು ಮತ್ತು ಹೆಚ್ಚಿನ ಗ್ರಾಹಕರನ್ನು ಆಕರ್ಷಿಸಲು ಬ್ಯಾಂಕುಗಳು ತಮ್ಮ ಹಾಲಿ ಗ್ರಾಹಕರಿಗೆ ಅವರ ಆರ್ಥಿಕ ಗಟ್ಟಿತನ ಆಧರಿಸಿ ವಿನಾಯಿತಿ ನೀಡುವ ನಿರ್ಧಾರ ಕೈಗೊಳ್ಳುತ್ತವೆ. ನೀವು ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗಿಯಾಗಿದ್ದರೆ, ಸಿಬಿಲ್ ಅಂಕ ಉತ್ತಮವಾಗಿದ್ದರೆ ಅಂತಹ ಅವಕಾಶಗಳು ಅಧಿಕವಾಗಿರುತ್ತವೆ.

ಕೆಂಪರಾಜ್ ಕೆ. ಗೌಡ, ಮೈಸೂರು

- **ಪ್ರಶ್ನೆ: ಒಂದು ಷೇರು ಬ್ರೋಕರ್‌ನಿಂದ ಮತ್ತೊಂದು ಬ್ರೋಕರ್‌ಗೆ ನನ್ನ ಎಲ್ಲ ಷೇರುಗಳನ್ನು ವರ್ಗಾಯಿಸಬಹುದೇ? ವರ್ಗಾಯಿಸಬಹುದಾದರೆ ಹೇಗೆ? ಇದಕ್ಕಾಗಿ ಪ್ರತ್ಯೇಕ ತೆರಿಗೆ ಅಥವಾ ಇನ್ನಾವುದೇ ಶುಲ್ಕ ಕಟ್ಟಬೇಕಾಗುತ್ತದೆಯೇ?**

ಉತ್ತರ: ನಿಮ್ಮ ಪ್ರಶ್ನೆಗೆ ಸ್ಥೂಲವಾಗಿ ಉತ್ತರಿಸುವುದಾದರೆ, ಯಾವುದೇ ಷೇರು ಹೂಡಿಕೆದಾರರು ತಮ್ಮ ಡಿಮ್ಯಾಟ್ ಖಾತೆಗಳನ್ನು ಒಂದು ಬ್ರೋಕಿಂಗ್ ಸಂಸ್ಥೆಯಿಂದ ಇನ್ನೊಂದು ಕಡೆಗೆ ವರ್ಗಾಯಿಸಲು ಯಾವುದೇ ತೊಡಕುಗಳಿಲ್ಲ. ಕೆಲವೊಂದು ಬಾರಿ ಕಾರಣಾಂತರದಿಂದ ನಾವು ಅನೇಕ ಡಿಮ್ಯಾಟ್ ಖಾತೆಗಳನ್ನು ತೆರೆದಿರುತ್ತೇವೆ. ಆದರೆ ನಂತರ ಯಾವುದೋ ವ್ಯವಹಾರವನ್ನು ಸುಲಭ ಆಗಿಸಿಕೊಳ್ಳಲಿಕ್ಕಾಗಿ ಒಂದು ಬ್ರೋಕಿಂಗ್ ಕಂಪನಿಯ ಹಿಡಿತದಲ್ಲಿರುವ ನಮ್ಮ ಷೇರುಗಳನ್ನು ಇನ್ನೊಂದು ಬ್ರೋಕಿಂಗ್ ಕಂಪನಿಗೆ ವರ್ಗಾಯಿಸಬೇಕಾದಾಗ ಕೆಲವು ಅಗತ್ಯ ಪತ್ರ ವ್ಯವಹಾರ - ದಾಖಲೆಗಳ ವರ್ಗಾವಣೆ ಇತ್ಯಾದಿಗಳನ್ನು ಮಾಡುವ ಮೂಲಕ ಇದನ್ನು ವರ್ಗಾಯಿಸಿಕೊಳ್ಳಬಹುದು.

ನಿಮ್ಮ ಆಯ್ಕೆಯ ಹೊಸ ಷೇರು ಬ್ರೋಕರ್‌ನೊಂದಿಗೆ ವರ್ಗಾವಣೆಗೆ ಸಂಬಂಧಿಸಿದ ಫಾರ್ಮ್ ಭರ್ತಿ ಮಾಡುವ ಮೂಲಕ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಇದಕ್ಕಾಗಿ ಅಸ್ತಿತ್ವದಲ್ಲಿರುವ ಬ್ರೋಕರ್‌ನಿಂದ ಡೆಲಿವರಿ ಇನ್‌ಸ್ಟ್ರಕ್ಷನ್ ಸ್ಲಿಪ್ (DIS) ಪಡೆದುಕೊಳ್ಳಿ, ಅಗತ್ಯವಿರುವಂತೆ ಪ್ರಸ್ತುತ ಡಿಮ್ಯಾಟ್ ಖಾತೆಯ ವಿವರಗಳನ್ನು ಭರ್ತಿ ಮಾಡಿ ಮತ್ತು ಅದನ್ನು ವರ್ಗಾಯಿಸುವ ಷೇರುಗಳ ಮಾಹಿತಿಯೊಂದಿಗೆ ಅವರಿಗೆ ಸಲ್ಲಿಸಿ. ಕೆಲವು ಷೇರು ಬ್ರೋಕರ್‌ಗಳು ತಮ್ಮ ವೆಬ್‌ಸೈಟ್‌ನಲ್ಲಿಯೇ ಈ ವರ್ಗಾವಣೆ ಪ್ರಕ್ರಿಯೆಗೆ ವ್ಯವಸ್ಥೆ ಮಾಡಿರುತ್ತಾರೆ. ಅಂತಹ ಸುಲಭ ಅವಕಾಶದ ಬಗ್ಗೆ ವಿಚಾರಿಸಿ. ಈ ಸಂಪೂರ್ಣ ಪ್ರಕ್ರಿಯೆಯನ್ನು ಕೈಗೊಳ್ಳಲು, ನಿಮ್ಮ ಹಳೆಯ ಬ್ರೋಕರ್ ವರ್ಗಾವಣೆ ಶುಲ್ಕ ವಿಧಿಸಬಹುದು. ಹೆಚ್ಚುವರಿಯಾಗಿ, ನಿಮ್ಮ ಖಾತೆ ಅಥವಾ ದಾಖಲೆಗಳಲ್ಲಿ ಯಾವುದೇ ವ್ಯತ್ಯಾಸಗಳಿದ್ದಲ್ಲಿ ಅದನ್ನು ಸರಿಪಡಿಸಿಕೊಳ್ಳಿ. ಇಲ್ಲವಾದರೆ, ಅದು ವರ್ಗಾವಣೆ ಪ್ರಕ್ರಿಯೆಯನ್ನು ಇನ್ನಷ್ಟು ವಿಳಂಬಗೊಳಿಸಬಹುದು.

ಇನ್ನು ತೆರಿಗೆಯ ವಿಚಾರ. ನಿಮ್ಮದೇ ಖಾತೆಯಲ್ಲಿರುವ ಷೇರುಗಳನ್ನು ಹೊಸ ಬ್ರೋಕರ್ ಸಂಸ್ಥೆಗೆ ವರ್ಗಾವಣೆ ಮಾಡಿದಾಗ ತೆರಿಗೆ ಕಟ್ಟಬೇಕಾಗಿಲ್ಲ. ಕಾರಣ ನೀವು ಯಾವುದೇ ಅನ್ಯ ವ್ಯಕ್ತಿಗೆ ಮಾರಾಟ ಮಾಡುತ್ತಿಲ್ಲ. ಇಲ್ಲಿ ನಿಮ್ಮ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಷೇರುಗಳ ವರ್ಗಾವಣೆ ಆಗುತ್ತದಷ್ಟೆ. ಇನ್ನೂ ಒಂದು ಅಂಶ ಇಲ್ಲಿ ಗಮನಿಸಬೇಕಾದುದೆಂದರೆ, ಮೂಲತಃ ಎಲ್ಲ ಬ್ರೋಕರ್‌ಗಳು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಅಥವಾ ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ ಲಿಮಿಟೆಡ್‌ನಲ್ಲಿ (ಸಿಡಿಎಸ್‌ಎಲ್) ನಮ್ಮ ಖಾತೆ ತೆರೆಯಲು ನೆರವಾಗುವ ಮಧ್ಯವರ್ತಿಗಳಷ್ಟೇ. ನಮ್ಮ ಎಲ್ಲ ಹಣದ ವ್ಯವಹಾರ ಷೇರು ಬ್ರೋಕರ್‌ಗಳ ಮುಖಾಂತರ ನಡೆಯುತ್ತದಷ್ಟೆ. ಹೀಗಾಗಿ ಮೇಲಿನ ಡಿಪಾಸಿಟರಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಇದು ಬ್ಯಾಂಕ್ ಖಾತೆಯನ್ನು ಒಂದು ಶಾಖೆಯಿಂದ ಇನ್ನೊಂದು ಶಾಖೆಗೆ ವರ್ಗಾಯಿಸಿದಂತೆ. ಈ ಬಗ್ಗೆ ಹೆಚ್ಚಿನ ಮಾಹಿತಿಗೆ ನಿಮ್ಮ ಬ್ರೋಕಿಂಗ್ ಸಂಸ್ಥೆಯೊಡನೆ ವಿಚಾರಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001, ಇ-ಮೇಲ್:businessdesk@prajavani.co.in

ವರ್ಗ 'ವ್ಯಾಪಾರ': ಮಾತಿಗೆ ಕಿಚ್ಚು

ಒಂದನೇ ಪುಟದಿಂದ..

ಈ ಉತ್ತರದಿಂದ ಸಮಾಧಾನಗೊಳ್ಳದ ಯತ್ನಾಳ, 'ಎಲ್ಲ ವ್ಯಾಪಾರ ಮಾಡಿಕೊಂಡಿದ್ದೀರಿ' ಎಂದು ಹೇಳಿದರು.

ಈ ಮಾತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೆರಳಿಸಿತು. 'ವ್ಯಾಪಾರ ಮಾಡ್ತಿದ್ದೀವಿ ಎನ್ನುತ್ತೀರಿ. ಏನ್ ಮಾತಾಡ್ತಾ ಇದ್ದೀರಿ. ಜವಾಬ್ದಾರಿಯಿಂದ ಮಾತಾಡಿ. ನೀವು ಮಾತ್ರ ಹರಿಶ್ಚಂದ್ರರಾ, ಅವರು ಹರಿಶ್ಚಂದ್ರರಲ್ವಾ, ಸುಮ್ಮನೇ ಏನೇನೋ ಮಾತಾಡಬೇಡಿ' ಎಂದು ಏರಿದ ಧ್ವನಿಯಲ್ಲಿ ತರಾಟೆಗೆ ತೆಗೆದುಕೊಂಡರು.

ಸಿದ್ದರಾಮಯ್ಯ ಅವರನ್ನು ಬೆಂಬಲಿಸಿ ಕಾಂಗ್ರೆಸ್ ಸದಸ್ಯರು ಎದ್ದು ನಿಂತು ಯತ್ನಾಳ ಅವರ ವಿರುದ್ಧ ಮಾತಿನ ಪ್ರಹಾರ ನಡೆಸಿದರು. ಇದಕ್ಕೆ ಪ್ರತಿಯಾಗಿ ಬಿಜೆಪಿ ಸದಸ್ಯರೂ ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯ ಅವರಿಗೆ ಪ್ರತಿಕ್ರಿಯಿಸಿದ ಬಸವರಾಜ ಬೊಮ್ಮಾಯಿ ಅವರು, 'ಯತ್ನಾಳ ಎತ್ತಿರುವ ಪ್ರಶ್ನೆಗೆ ಉತ್ತರ ಕೊಡಿ. ಅದನ್ನು ಬಿಟ್ಟು ಎಲ್ಲರನ್ನು ಹೆದರಿಸುವ ಅಗತ್ಯವಿಲ್ಲ. ಏನ್ ಮಾಡ್ತಾರೆ ನೋಡೇ ಬಿಡೋಣ. ಅಧಿಕಾರ ಶಾಶ್ವತ ಅಲ್ಲ' ಎಂದು ಏರಿದ ಧ್ವನಿಯಲ್ಲಿ ಹೇಳಿದರು.

'ನೀವು ಹೇಳಿದ ಆಫೀಸರ್ ಹಾಕಲ್ಲ ಏನು ಮಾಡ್ತೀರಾ ಮಾಡ್ಕೊಳ್ಳಿ' ಎಂದು ಬೈರತಿ ಅವರು ಹೇಳಿದಾಗ ಬಿಜೆಪಿ ಸದಸ್ಯರು ಈ ಮಾತುಗಳಿಗೆ ಕ್ಷಮೆ ಕೋರುವಂತೆ ಧರಣಿ ನಡೆಸಿದರು. ಗದ್ದಲ ಹೆಚ್ಚಾದಾಗ ಕಲಾಪವನ್ನು ಮುಂದೂಡಿದರು.

> ವ್ಯಾಪಾರ– ವಹಿವಾಟು ಎಲ್ಲ ನಿಮ್ಮ ಕಾಲದಲ್ಲಿ ನಡೆಯುತ್ತಿತ್ತು. ವ್ಯಾಪಾರ ಮಾಡುವ ದರ್ದು ನಮಗೆ ಇಲ್ಲ, ಯತ್ನಾಳ ನೀನು ಚೀಪ್ ಆಗಿ ಮಾತನಾಡಬೇಡ. ಏಯ್ ಕೂತ್ಕೊ ಸುಮ್ಮನೆ. ನೀನು ಕರೆದಾಗ ಆ ಅಧಿಕಾರಿ ಬಂದಿಲ್ಲ ಅಂದರೆ, ಅವನನ್ನು ತೆಗೆದು ಹಾಕಬೇಕಾ?
>
> **ಬೈರತಿ ಸುರೇಶ್,** ಸಚಿವ

> ಯಾವುದೇ ಹುದ್ದೆಗೆ ಯಾರನ್ನು ಬೇಕಾದರೂ ನೇಮಿಸುವ ಅಧಿಕಾರ ಸರ್ಕಾರದ್ದು. ಸಿ.ಎಂ ಹುದ್ದೆಗೆ ₹2500 ಕೋಟಿ, ಮಂತ್ರಿ ಹುದ್ದೆಗೆ ₹100 ಕೋಟಿ ಡೀಲ್ ಆಗಿದೆ ಎಂದು ಹೇಳಿದ್ದಿರಿ. ಏಯ್ ಕೂತ್ಕೊಳ್ಳಯ್ಯ, ನಾಲಿಗೆ ಬಿಗಿ ಹಿಡಿದು ಮಾತನಾಡಬೇಕು. ನಿಮ್ಮ ಸಿಎಂ ಸುಮ್ಮನಿದ್ದರು. ನಾನಾಗಿದ್ದರೆ 24 ಗಂಟೆಯಲ್ಲಿ ಉಚ್ಚಾಟನೆ ಮಾಡ್ತಿದ್ದೆ
>
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

> ನಿಮ್ಮಂತ ಭ್ರಷ್ಟರ ಪಕ್ಷಕ್ಕೆ ಯಾರು ಸೇರುತ್ತಾರೆ. ಭ್ರಷ್ಟಾಚಾರದ ಬಂಡೆ ನೀನು. ನನ್ನ ಉಚ್ಚಾಟನೆ ಮಾಡುತ್ತೇನೆ ಅಂತ ಹೇಳೋಕೆ ಇವರು ಯಾರು? ನಮ್ಮ ಪಕ್ಷದವರೇನಲ್ಲ. ನಾನೇನು ಅವರ ಪಕ್ಷದಲ್ಲಿದ್ದೀನಾ
>
> **ಬಸನಗೌಡ ಪಾಟೀಲ ಯತ್ನಾಳ,** ಬಿಜೆಪಿ ಶಾಸಕ

ಆನ್‌ಲೈನ್ ಆಟಕ್ಕೆ 28 % ತೆರಿಗೆ

ಒಂದನೇ ಪುಟದಿಂದ...

ಆನ್‌ಲೈನ್ ಆಟಗಳ ಇಡೀ ಮೊತ್ತಕ್ಕೆ ತೆರಿಗೆ ವಿಧಿಸುವುದು ಇಡೀ ಆನ್‌ಲೈನ್ ಆಟ ಉದ್ಯಮವನ್ನು ಕೊಲ್ಲುವುದಕ್ಕೆ ಸಮ ಎಂದು ಉದ್ಯಮದ ಪ್ರತಿನಿಧಿಗಳು ಹೇಳಿರುವ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ, 'ನಾವು ಯಾವುದೇ ಉದ್ಯಮವನ್ನು ಕೊಲ್ಲುವ ಕೆಲಸ ಮಾಡುತ್ತಿಲ್ಲ' ಎಂದು ನಿರ್ಮಲಾ ಉತ್ತರಿಸಿದರು. ಅಲ್ಲದೆ, ಆಟ ಹಾಗೂ ಜೂಜಿಗೆ ಇತರ ಅವಶ್ಯಕ ಉದ್ಯಮ ವಲಯಕ್ಕೆ ನೀಡಿದಂತಹ ಪ್ರಾಧಾನ್ಯ ನೀಡಲಾಗದು ಎಂದು ಹೇಳಿದರು.

'ಹೀಗಾಗಿ, ಮಂಡಳಿಯ ಸಭೆಯಲ್ಲಿ ನೈತಿಕ ಪ್ರಶ್ನೆಗಳ ಬಗ್ಗೆಯೂ ಚರ್ಚೆಯಾಗಿದೆ' ಎಂದು ಹೇಳಿದರು.

ಆನ್‌ಲೈನ್ ಆಟವು ಕೌಶಲವನ್ನು ಆಧರಿಸಿದೆಯೋ ಅಥವಾ ಅದು ಅದೃಷ್ಟದ ಬಲದ ಮೇಲೆ ನಡೆಯುವಂಥದ್ದೋ ಎಂಬ ವ್ಯತ್ಯಾಸ ನೋಡದೆ ಈ ಪ್ರಮಾಣದ ತೆರಿಗೆ ವಿಧಿಸಲು ಮಂಡಳಿಯು ನಿರ್ಧರಿಸಿದೆ.

ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲು ಬಳಸುವ ಔಷಧ ಹಾಗೂ ಅತ್ಯಂತ ಅಪರೂಪದ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಬಳಸುವ ಕೆಲವು ಔಷಧಗಳನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿಡಲು ಮಂಗಳವಾರದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ನಿರ್ಮಲಾ ಅವರು ಹೇಳಿದರು.

ಖಾಸಗಿ ಕಂಪನಿಗಳು ಉಪಗ್ರಹ ಉಡಾವಣೆ ಸೇವೆ ನೀಡಿದಾಗ ಅದಕ್ಕೆ ಜಿಎಸ್‌ಟಿಯಿಂದ ವಿನಾಯಿತಿ ನೀಡಲು ತೀರ್ಮಾನಿಸಲಾಗಿದೆ.

ಹೆಚ್ಚಲಿದೆ ಆನ್‌ಲೈನ್ ಆಟಗಳಿಗೆ ಕೊಡಬೇಕಿರುವ ಮೊತ್ತ

ನವದೆಹಲಿ (ರಾಯಿಟರ್ಸ್): ಆನ್‌ಲೈನ್ ಆಟಗಳ ವಿಚಾರದಲ್ಲಿ, ಆಟ ಆಡಲು ಕಂಪನಿಗಳು ಬಳಕೆದಾರರಿಂದ ಸಂಗ್ರಹಿಸುವ ಪೂರ್ಣ ಮೊತ್ತದ ಮೇಲೆ ಶೇ 28ರಷ್ಟು ತೆರಿಗೆ ಜಾರಿಗೆ ಬರಲಿದೆ. ಇದರಿಂದಾಗಿ, ಆಟ ಆಡಲು ಪಾವತಿ ಮಾಡಬೇಕಿರುವ ಮೊತ್ತವು ಹೆಚ್ಚಾಗಲಿದೆ. ಇದು ಆನ್‌ಲೈನ್ ಆಟಗಳ ಉದ್ಯಮಕ್ಕೆ ಹಿನ್ನಡೆ ಎಂದು ಅರ್ಥೈಸಲಾಗಿದೆ.

ದೇಶದ ಆನ್‌ಲೈನ್ ಆಟಗಳ ಉದ್ಯಮದಲ್ಲಿ ವಿದೇಶಿ ಕಂಪನಿಗಳು ಕೂಡ ಹೂಡಿಕೆ ಮಾಡಿವೆ. ಟೈಗರ್ ಗ್ಲೋಬಲ್ ಕಂಪನಿಯು ಆನ್‌ಲೈನ್ ಆಟಗಳ ನವೋದ್ಯಮ ಡ್ರೀಮ್11ನಲ್ಲಿ ಹಣ ತೊಡಗಿಸಿದೆ.

ತೆರಿಗೆ ಏರಿಕೆ ಹೊರೆಯನ್ನು ಆಟ ಆಡುವವರ ಮೇಲೆ ವರ್ಗಾಯಿಸಬೇಕಾಗುತ್ತದೆ ಎಂದು ಉದ್ಯಮದ ಪ್ರತಿನಿಧಿಗಳು ಹೇಳಿದ್ದಾರೆ. 'ಹೆಚ್ಚಿನ ತೆರಿಗೆಯ ಕಾರಣದಿಂದಾಗಿ ಕಂಪನಿಗಳ ಹಣಕಾಸಿನ ಮೇಲೆ ಪರಿಣಾಮ ಉಂಟಾಗಲಿದೆ' ಎಂದು ಇಂಡಿಯಾಪ್ಲೇಯ್ಸ್ ಆ್ಯಪ್‌ನ ಸಿಒಒ ಆದಿತ್ಯ ಶಾ ಹೇಳಿದ್ದಾರೆ. 'ಈ ಏರಿಕೆಯು ಅಸಾಂವಿಧಾನಿಕ, ಅತಾರ್ಕಿಕ' ಎಂದು ಅಖಿಲ ಭಾರತ ಗೇಮಿಂಗ್ ಒಕ್ಕೂಟದ ಸಿಇಒ ರೋಲ್ಯಾಂಡ್ ಲ್ಯಾಂಡರ್ಸ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಇಮ್ರಾನ್ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಚುನಾವಣಾ ಆಯೋಗ ಮತ್ತು ಅದರ ಮುಖ್ಯಸ್ಥರನ್ನು ನಿಂದಿಸಿದ ಪ್ರಕರಣದಲ್ಲಿ ಮಾಜಿ ಪ್ರಧಾನಿ ಇಮ್ರಾನ್ ಖಾನ್, ಮಾಹಿತಿ ಮತ್ತು ಪ್ರಸಾರ ಖಾತೆಯ ಮಾಜಿ ಸಚಿವ ಫವಾದ್ ಚೌಧರಿ ವಿರುದ್ಧ ಆಯೋಗವು ಮಂಗಳವಾರ ಜಾಮೀನುರಹಿತ ಬಂಧನದ ವಾರಂಟ್ ಹೊರಡಿಸಿದೆ.

ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳೆದ ವರ್ಷವೇ ದೂರು ದಾಖಲಿಸಿದ್ದ ಆಯೋಗವು ಪಾಕಿಸ್ತಾನ ತೆಹ್ರೀಕ್–ಇ–ಇನ್ಸಾಫ್ (ಪಿಟಿಐ) ಮುಖ್ಯಸ್ಥ ಇಮ್ರಾನ್, ಪಕ್ಷದ ನಾಯಕರಾದ ಚೌಧರಿ ಹಾಗೂ ಅಸದ್ ಉಮರ್ ವಿರುದ್ಧ ಕಾನೂನು ಕ್ರಮದ ಪ್ರಕ್ರಿಯೆ ಆರಂಭಿಸಿತ್ತು.

ಹೆಲಿಕಾಪ್ಟರ್ ಪತನ: ಆರು ಮಂದಿ ಸಾವು

ಕಠ್ಮಂಡು (ಪಿಟಿಐ): ಹಿಮಾಲಯದ ಮೌಂಟ್ ಎವರೆಸ್ಟ್ ಶಿಖರದ ಬಳಿ ಖಾಸಗಿ ಹೆಲಿಕಾಪ್ಟರ್ ಪತನಗೊಂಡಿದ್ದು, ಮೆಕ್ಸಿಕೊದ ಕುಟುಂಬವೊಂದರ ಐವರು ಸದಸ್ಯರು ಸೇರಿದಂತೆ ಒಟ್ಟು ಆರು ಜನರು ಮೃತಪಟ್ಟಿದ್ದಾರೆ.

ನೇಪಾಳದ ಸೊಲುಖುಂಬು ಜಿಲ್ಲೆಯ ಸುರ್ಕೆ ವಿಮಾನನಿಲ್ದಾಣದಿಂದ ಮನಂಗ್ ಏರ್ ಎನ್‌ಎ–ಎಂವಿ ಹೆಲಿಕಾಪ್ಟರ್ ಬೆಳಿಗ್ಗೆ 10.04ಕ್ಕೆ ಹೊರಟಿತ್ತು. ಇದಾದ ಸ್ವಲ್ಪ ಸಮಯದಲ್ಲೇ ಸಂಪರ್ಕ ಕಡಿದುಕೊಂಡಿತು ಎಂದು ತ್ರಿಭುವನ್ ಅಂತರರಾಷ್ಟ್ರೀಯ ವಿಮಾನನಿಲ್ದಾಣದ (ಟಿಐಎ) ವ್ಯವಸ್ಥಾಪಕ ಜ್ಞಾನೇಂದ್ರ ತಿಳಿಸಿದರು.

ಭಾರತ ಮೂಲದ ಗೀತಾ ರಾವ್ ನೇಮಕ


ವಾಷಿಂಗ್ಟನ್ (ಪಿಟಿಐ): ಜಾಗತಿಕವಾಗಿ ಮಹಿಳಾ ಸಂಬಂಧಿತ ವಿಷಯಗಳ ರಾಯಭಾರಿಯಾಗಿ ಭಾರತ ಮೂಲದ ಅಮೆರಿಕದ ನಿವಾಸಿ ಗೀತಾ ರಾವ್ ಗುಪ್ತಾ ಅವರನ್ನು ಅಮೆರಿಕ ನೇಮಿಸಿದೆ. ಗೀತಾ ಅವರಿಗೆ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಪ್ರಮಾಣವಚನ ಬೋಧಿಸಿದರು.

ಇವರ ನೇಮಕ ಪ್ರಸ್ತಾವವನ್ನು ಅಮೆರಿಕದ ಸೆನೆಟ್ ಇದೇ ವರ್ಷದ ಮೇ ತಿಂಗಳಲ್ಲಿ 51–47 ಮತಗಳಿಂದ ಅಂಗೀಕರಿಸಿತ್ತು.

'ಮಹಿಳೆಯರು ಇಂದು ವಿಶ್ವದಾದ್ಯಂತ ಅಸಮಾನತೆ ಎದುರಿಸುತ್ತಿದ್ದಾರೆ. ಅವರ ಘನತೆಗೆ ಧಕ್ಕೆಯಾಗುವ ಬೆಳವಣಿಗೆಗಳು, ಆಕೆ ಪೂರ್ಣ ಪ್ರಮಾಣದಲ್ಲಿ ಆರ್ಥಿಕತೆಯಲ್ಲಿ ಭಾಗಿ ಆಗುವುದನ್ನು ತಡೆಯುತ್ತಿವೆ' ಎಂದು ಗೀತಾ ಅಭಿಪ್ರಾಯಪಟ್ಟರು.



ಹಿಮಾಚಲ ಪ್ರದೇಶದಲ್ಲಿ ಕಳೆದ ಮೂರು ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಕುಲ್ಲುವಿನಲ್ಲಿ ಬಿಯಾಸ್ ನದಿ ಉಕ್ಕಿ ಹರಿಯುತ್ತಿದೆ



ಮಂಡಿ ನಗರದಲ್ಲಿ ಮಳೆ ನೀರಿನಲ್ಲಿ ಕೊಚ್ಚಿ ಬಂದ ಅವಶೇಷಗಳಲ್ಲಿ ಮಂಗಳವಾರ ವಾಹನಗಳು ಸಿಲುಕಿದ್ದವು



ಗಂಗಾ ನದಿ ನೀರನ್ನು ಹೊತ್ತ ಶಿವನ ಭಕ್ತರು (ಕನ್ವರ್ ಯಾತ್ರಿಗಳು) ಹರಿದ್ವಾರದಲ್ಲಿ ಮಂಗಳವಾರ ಸುರಿವ ಮಳೆಯಲ್ಲೇ ಸಾಗಿದರು —ಪಿಟಿಐ ಚಿತ್ರಗಳು

ಉತ್ತರ ಭಾರತದಲ್ಲಿ ಮಳೆ; ಮೃತರ ಸಂಖ್ಯೆ 57ಕ್ಕೆ • ಪ್ರಧಾನಿ ಮೋದಿಯಿಂದ ಪರಿಸ್ಥಿತಿ ಅವಲೋಕನ

ಹಿಮಾಚಲ ಪ್ರದೇಶ ಹೆಚ್ಚು ಬಾಧಿತ

ನವದೆಹಲಿ (ಪಿಟಿಐ): ಉತ್ತರ ಭಾರತದ ಹಲವೆಡೆ ಮಂಗಳವಾರವೂ ಮಳೆಯಾಗಿದೆ. ಹಲವು ನದಿಗಳು ತುಂಬಿ ಹರಿಯುತ್ತಿದ್ದು, ಭೂಕುಸಿತದಿಂದಾಗಿ ಅವಘಡಗಳು ಸಂಭವಿಸಿವೆ. ಮಂಗಳವಾರ ವಿವಿಧೆಡೆ 20 ಮಂದಿ ಸಾವಿಗೀಡಾಗಿದ್ದು, ಈವರೆಗೆ ಒಟ್ಟು 57 ಮಂದಿ ಮೃತಪಟ್ಟಿದ್ದಾರೆ. ಹಿಮಾಚಲ ಪ್ರದೇಶ ಹೆಚ್ಚು ಬಾಧಿತವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಹಿರಿಯ ಸಚಿವರೊಂದಿಗೆ ಮಾತನಾಡಿ, ಧಾರಾಕಾರ ಮಳೆ ಹಿನ್ನೆಲೆಯಲ್ಲಿ ದೆಹಲಿ ಹಾಗೂ ಇತರ ರಾಜ್ಯಗಳಲ್ಲಿ ಉದ್ಭವಿಸಿರುವ ಪರಿಸ್ಥಿತಿ ಕುರಿತು ಮಾಹಿತಿ ಪಡೆದಿದ್ದಾರೆ ಎಂದು ಪ್ರಧಾನ ಮಂತ್ರಿ ಕಚೇರಿ (ಪಿಎಂಒ) ಹೇಳಿದೆ.

ಮಳೆ ಬಾಧಿತ ರಾಜ್ಯಗಳಿಗೆ ಪಿಎಂ ಕೇರ್ಸ್ ಫಂಡ್‌ನಿಂದ ಪರಿಹಾರ ಬಿಡುಗಡೆ ಮಾಡುವಂತೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದ್ದಾರೆ.

ಹವಾಮಾನ ಇಲಾಖೆಯು ಹಿಮಾಚಲ ಪ್ರದೇಶದಲ್ಲಿ ಸೋಮವಾರ 'ರೆಡ್ ಅಲರ್ಟ್' ಘೋಷಿಸಿತ್ತು. ಭಾರಿ ಮಳೆಯಾದ ಹಿನ್ನೆಲೆಯಲ್ಲಿ ಮಂಗಳವಾರ ಹಲವೆಡೆ ಭೂಕುಸಿತವಾಗಿದೆ. ಮನೆಗಳು ಸಹ ಕುಸಿದಿದ್ದು, ಜನರು ಪರದಾಡುತ್ತಿದ್ದಾರೆ.

ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಅವರೊಂದಿಗೆ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡಿ, ಪರಿಹಾರ ಮತ್ತು ರಕ್ಷಣಾ ಕಾರ್ಯ ಕುರಿತು ಮಾಹಿತಿ ಪಡೆದರು ಎಂದು ಮೂಲಗಳು ಹೇಳಿವೆ.

ಪಂಜಾಬ್, ಹರಿಯಾಣದಲ್ಲಿ ಕೂಡ ಬೆಳಿಗ್ಗೆಯಿಂದಲೇ ಮಳೆ ಬೀಳುತ್ತಿತ್ತು. ಹರಿಯಾಣ ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್ ಅವರು ಅಧಿಕಾರಿಗಳ ಸಭೆ ನಡೆಸಿ, ಪರಿಸ್ಥಿತಿ ಅವಲೋಕಿಸಿದರು.

ಮಧ್ಯಪ್ರದೇಶದ ಜಬಲ್ಪುರ ಜಿಲ್ಲೆಯ ಭೇಡಘಾಟ್ ಸಮೀಪ ನರ್ಮದಾನದಿಯಲ್ಲಿನಡುಗಡ್ಡೆಯಲ್ಲಿನಾಲ್ವರುಸಿಕ್ಕಿಹಾಕಿಕೊಂಡಿದ್ದರು. ಎನ್‌ಡಿಆರ್‌ಎಫ್ ಸಿಬ್ಬಂದಿ ಸತತ 13 ಗಂಟೆಗಳ ಕಾರ್ಯಾಚರಣೆ ನಡೆಸಿ ನಾಲ್ವರನ್ನು ರಕ್ಷಿಸಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ ಕಂಡುಬಂದ ದಿಢೀರ್ ಪ್ರವಾಹದಿಂದಾಗಿ ಜೋಶಿಮಠ-ಮಲಾರಿ ರಸ್ತೆ ಮೇಲೆ ನೀರು ನಿಂತು, ಸಂಚಾರಕ್ಕೆ ಅಡ್ಡಿಯಾಯಿತು. ದಿಢೀರ್ ಪ್ರವಾಹ ಉಂಟಾಗಲು ಕಾರಣಗಳ ಬಗ್ಗೆ ಯಾವುದೇ ಅಧಿಕೃತ ಹೇಳಿಕೆ ಹೊರಬಿದ್ದಿಲ್ಲ.

ಬೆಟ್ಟಗಳಲ್ಲಿ ಮಣ್ಣು-ಬಂಡೆಗಳು ಕುಸಿದು ನೀರಿನ ಹರಿವಿಗೆ ಕೆಲಕಾಲ ತಡೆಯುಂಟಾಗಿ, ನಂತರ ನೀರು ಧುಮುಕಿರುವುದು ದಿಢೀರ್ ಪ್ರವಾಹಕ್ಕೆ ಕಾರಣವಾಗಿರಬಹುದು ಎಂದು ಹೇಳಲಾಗುತ್ತಿದೆ. ಮೇಲ್ಭಾಗದಲ್ಲಿರುವ ಜಲಾನಯನ ಪ್ರದೇಶದಲ್ಲಿ ಹಿಮಬಂಡೆಗಳು ಕರಗಿದ್ದರಿಂದ ಈ ದಿಢೀರ್ ಪ್ರವಾಹ ಉಂಟಾಗಿರಬಹುದು ಎಂದೂ ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಈ ಪ್ರದೇಶದಲ್ಲಿ ಅನುಷ್ಠಾನಗೊಳ್ಳುತ್ತಿರುವ ಜಲವಿದ್ಯುತ್ ಯೋಜನೆಗಳ ಬಗ್ಗೆ ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ. ಈ ಯೋಜನೆಗಳಿಂದಾಗಿ ಭೂಕುಸಿತವಾಗಿ, ಪ್ರವಾಹದ ತೀವ್ರತೆ ಹೆಚ್ಚಬಹುದು ಎಂಬ ಆತಂಕವನ್ನು ಜನರು ವ್ಯಕ್ತಪಡಿಸಿದ್ದಾರೆ.

ಭೂಕುಸಿತ..ಸಂಪರ್ಕ ಕಡಿತ..

- ನಿರಂತರ ಮಳೆಯಿಂದಾಗಿ ಶಿಮ್ಲಾದಲ್ಲಿ ನೀರು ಪೂರೈಕೆಯಲ್ಲಿ ಭಾರಿ ವ್ಯತ್ಯಯವಾಗಿದೆ. ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.
- ಉತ್ತರಾಖಂಡದ ಉತ್ತರಕಾಶಿಯಲ್ಲಿ ಐವರು ಯಾತ್ರಿಗಳು ಮೃತಪಟ್ಟಿದ್ದಾರೆ. ಮೃತರು ಮಧ್ಯಪ್ರದೇಶದವರು. ಉತ್ತರ ಪ್ರದೇಶ, ರಾಜಸ್ಥಾನ ಹಾಗೂ ಪಂಜಾಬ್‌ನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.
- ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ ಜುಮ್ಮಾಗಡ ನದಿಗೆ ನಿರ್ಮಿಸಿದ್ದ ಸೇತುವೆ ಪ್ರವಾಹದಲ್ಲಿ ಕೊಚ್ಚಿ ಹೋಗಿದೆ. ಭಾರತ ಮತ್ತು ಟಿಬೆಟ್ ಸಂಪರ್ಕಿಸಿರುವ ರಸ್ತೆ ಸಂಪೂರ್ಣ ಹಾಳಾಗಿದ್ದು, ಗಡಿಯಲ್ಲಿನ 12ಕ್ಕೂ ಹೆಚ್ಚು ಗ್ರಾಮಗಳಿಗೆ ಸಂಪರ್ಕ ಕಡಿತವಾಗಿದೆ
- ಪಂಜಾಬ್‌ನ ಪಟಿಯಾಲ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಪರಿಹಾರ ಮತ್ತು ರಕ್ಷಣಾ ಕಾರ್ಯಕ್ಕೆ ಸೇನೆಯ ನೆರವು ಪಡೆಯಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ

ಲೆಫ್ಟಿನೆಂಟ್ ಗವರ್ನರ್– ಎಎಪಿ ಜಟಾಪಟಿ

ದೆಹಲಿ ಮಳೆ: ನೀಗದ ಸಂಕಷ್ಟ

ನವದೆಹಲಿ (ಪಿಟಿಐ): ಮಳೆಯ ಆರ್ಭಟದಿಂದಾಗಿ ದೆಹಲಿಯಲ್ಲಿ ಯಮುನಾ ನದಿ ಮಂಗಳವಾರವೂ ಉಕ್ಕಿ ಹರಿದಿದ್ದು, ಅನೇಕ ವಸತಿ ಪ್ರದೇಶಗಳಲ್ಲಿ 2-3 ಅಡಿಗಳಷ್ಟು ನೀರು ನಿಂತ ಕಾರಣ ಜನರು ಸಂಕಷ್ಟ ಅನುಭವಿಸುವಂತಾಗಿದೆ.

ಅಪಾಯದ ಮಟ್ಟ 205.33 ಮೀಟರ್ ಗಡಿ ದಾಟಿ ನದಿ ಹರಿಯುತ್ತಿದ್ದ ಕಾರಣ, ತಗ್ಗುಪ್ರದೇಶಗಳಲ್ಲಿ ವಾಸಿಸುತ್ತಿರುವವರನ್ನು ಸ್ಥಳಾಂತರಿಸಲಾಗಿದೆ. ಹಳೆ ಯಮುನಾ ಸೇತುವೆ ಮೇಲೆ ವಾಹನ ಮತ್ತು ರೈಲುಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅಧಿಕಾರಿಗಳ ಸಭೆ ನಡೆಸಿ, ಯಮುನಾ ನದಿಯಲ್ಲಿ ನೀರಿನ ಮಟ್ಟ ಹೆಚ್ಚಳವಾಗುತ್ತಿರುವುದು ಹಾಗೂ ನಗರದ ವಿವಿಧೆಡೆ ನೀರು ನಿಂತು ಉಂಟಾಗಿರುವ ಸಮಸ್ಯೆ ಕುರಿತು ಚರ್ಚಿಸಿದರು.

ಜಟಾಪಟಿ: ಭಾರಿ ಮಳೆಯಿಂದಾಗಿ ದೆಹಲಿಯಲ್ಲಿ ಉಂಟಾಗಿರುವ ಸಮಸ್ಯೆ ವಿಚಾರವಾಗಿ ಆಡಳಿತಾರೂಢ ಆಮ್ ಆದ್ಮಿ ಪಕ್ಷ (ಎಎಪಿ) ಹಾಗೂ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ನಡುವೆ ಶುರುವಾಗಿದೆ. 'ನಗರದ ಒಳಚರಂಡಿಗಳನ್ನು ಸಮರ್ಪಕವಾಗಿ ಸ್ವಚ್ಛಗೊಳಿಸಿಲ್ಲ. ಹೀಗಾಗಿಯೇ ಮಳೆ ಬಂದಾಗ ನೀರು ನಿಲ್ಲುವಂತಹ 'ವಾರ್ಷಿಕ ವಿಧಿ'ಯನ್ನು ನಗರ ಎದುರಿಸುವಂತಾಗಿದೆ' ಎಂದು ಸಕ್ಸೇನಾ ಹೇಳಿದ್ದಾರೆ. ಸಕ್ಸೇನಾ ಅವರ ಹೇಳಿಕೆಯನ್ನು ಖಂಡಿಸಿರುವ ದೆಹಲಿ ಜಲ ಸಚಿವ ಸೌರಭ್ ಭಾರದ್ವಾಜ್, 'ಒಳಚರಂಡಿಗಳಲ್ಲಿ ಹೂಳು ತೆಗೆಯಲಾಗಿದೆ, ಯಮುನಾ ನದಿಯನ್ನು ಸ್ವಚ್ಛಗೊಳಿಸಲಾಗಿದೆ ಎಂದು ಸಕ್ಸೇನಾ ಈ ಹಿಂದೆ ಹೇಳಿದ್ದರು. ಈಗ ಅವರೇ ಆರೋಪ ಮಾಡುತ್ತಿದ್ದಾರೆ' ಎಂದಿದ್ದಾರೆ.



ದೆಹಲಿಯಲ್ಲಿ ತುಂಬಿ ಹರಿಯುತ್ತಿರುವ ಯಮುನಾ ನದಿಯಲ್ಲಿ ಮಂಗಳವಾರ ಮಕ್ಕಳು ಆಟವಾಡಿದರು —ಪಿಟಿಐ ಚಿತ್ರ

ರೈಲುಗಳ ಸಂಚಾರ: ಸಚಿವ ವೈಷ್ಣವ್ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರಿ ಮಳೆಯಿಂದಾಗಿ ಉತ್ತರ ಭಾರತ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ರೈಲುಗಳ ಸಂಚಾರ ವ್ಯತ್ಯಯವಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿವೈಷ್ಣವ್ ಮಂಗಳವಾರ ಸಭೆ ನಡೆಸಿ ಪರ್ಯಾಲೋಚಿಸಿದರು.

ಈ ಸಂಬಂಧ 'ರೇಲ್ ಭವನ'ದಲ್ಲಿ ಸ್ಥಾಪಿಸಿರುವ ನಿಯಂತ್ರಣ ಕೊಠಡಿಗೆ ಭೇಟಿ ನೀಡಿದ ಸಚಿವ ವೈಷ್ಣವ್, ಪರಿಸ್ಥಿತಿ ಎದುರಿಸಲು ಮಾಡಿಕೊಂಡಿರುವ ಸಿದ್ಧತೆಗಳನ್ನು ಪರಿಶೀಲಿಸಿದರು.

'ಸಚಿವರು ವಿವಿಧ ರೈಲ್ವೆ ವಲಯಗಳ ಉನ್ನತ ಅಧಿಕಾರಿಗಳೊಂದಿಗೆ ವರ್ಚುವಲ್‌ಆಗಿ ಸಭೆ ನಡೆಸಿ, ಮಾಹಿತಿ ಪಡೆದರು' ಎಂದು ರೈಲ್ವೆ ವಕ್ತಾರ ತಿಳಿಸಿದ್ದಾರೆ.



ಅಶ್ವಿನಿ ವೈಷ್ಣವ್

ಮುನ್ನೆಚ್ಚರಿಕೆ ಕ್ರಮವಾಗಿ ಜಮ್ಮು, ಪಂಜಾಬ್, ಹರಿಯಾಣ ಮತ್ತು ಉತ್ತರಾಖಂಡ-ಕ್ಕೆ ಸಂಪರ್ಕಿಸುವ ಹಲವು ರೈಲುಗಳ ಸಂಚಾರವನ್ನು ರದ್ದುಪಡಿಸಲಾಗಿದೆ.

ರಕ್ಷಣೆಗೆ ಹೊರಟಿದ್ದ ಹೆಲಿಕಾಪ್ಟರ್ ವಾಪಸ್

ಶಿಮ್ಲಾ (ಪಿಟಿಐ): ಅಪಾಯದ ಸನ್ನಿವೇಶದಲ್ಲಿ ಸಿಲುಕಿ ಅತಂತ್ರರಾಗಿರುವ ಪ್ರವಾಸಿಗರನ್ನು ಕರೆತರಲು ಚಂದ್ರತಾಲ್ ಪ್ರದೇಶಕ್ಕೆ ಹೊರಟಿದ್ದ ಹೆಲಿಕಾಪ್ಟರ್ ಪ್ರತಿಕೂಲ ಹವಾಮಾನದಿಂದಾಗಿ ವಾಪಸ್ ಬಂದಿದೆ ಎಂದು ಪೊಲೀಸ್ ಮಹಾನಿರ್ದೇಶಕ ಸತ್ವಂತ್ ಅತ್ವಾಲ್ ಮಂಗಳವಾರ ತಿಳಿಸಿದ್ದಾರೆ.

ಮೋಡಗಳು ಈಗ ಚದುರುತ್ತಿರುವ ಕಾರಣ ಮತ್ತೊಮ್ಮೆ ಪ್ರಯತ್ನಿಸುತ್ತಿದ್ದೇವೆ ಎಂದು ಟ್ವೀಟ್ ಮಾಡಿದ್ದಾರೆ.

'ಭುಂತರ್‌ನಿಂದ ಮಧ್ಯಾಹ್ನ 12ಗಂಟೆಗೆ ಹೆಲಿಕಾಪ್ಟರ್ ಹೊರಟಿತ್ತು. ಆದರೆ ಪ್ರತಿಕೂಲ ಹವಾಮಾನ ಮತ್ತು ದಟ್ಟ ಮೋಡ ಕವಿದಿದ್ದರಿಂದ ವಾಪಸ್ ಕರೆಸಲಾಯಿತು. ಅತಂತ್ರರಾಗಿರುವ ಪ್ರವಾಸಿಗರು ಧೈರ್ಯದಿಂದ ಇರಬೇಕು. ರಕ್ಷಣೆಗೆ ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ.

ಭಾರಿ ಮಳೆ ಸುರಿಯುತ್ತಿರುವ ಕಾರಣ ಸುಮಾರು 300 ಪ್ರವಾಸಿಗರು ಸಮುದ್ರಮಟ್ಟದಿಂದ 14,100 ಅಡಿ ಎತ್ತರದಲ್ಲಿರುವ ಚಂದ್ರತಾಲ್ ಶಿಬಿರದಲ್ಲಿ ಸಿಲುಕಿದ್ದಾರೆ. ಅಧಿಕಾರಿಗಳ ಪ್ರಕಾರ, ಚಂದ್ರತಾಲ್ ಮತ್ತಿತರ ಪ್ರದೇಶಗಳಲ್ಲಿ ಸುಮಾರು 800 ಮಂದಿ ಅತಂತ್ರರಾಗಿದ್ದಾರೆ.

ಅಮರನಾಥ ಯಾತ್ರೆ ಪುನರಾರಂಭ

ಜಮ್ಮು (ಪಿಟಿಐ): 'ಮೂರು ದಿನದಿಂದ ಸ್ಥಗಿತಗೊಳಿಸಲಾಗಿದ್ದ ಅಮರನಾಥ ಯಾತ್ರೆಯನ್ನು ಜಮ್ಮುವಿನ ಶಿಬಿರದಿಂದ ಮಂಗಳವಾರ ಮಧ್ಯಾಹ್ನ ಪುನರಾರಂಭಗೊಳಿಸಲಾಗಿದೆ' ಅಧಿಕಾರಿಗಳು ತಿಳಿಸಿದರು.

ಜಮ್ಮು- ಶ್ರೀನಗರ ಹೆದ್ದಾರಿಯ ರಾಂಬನ್ ವಿಭಾಗದಲ್ಲಿ ರಸ್ತೆ ರಿಪೇರಿ ಕೆಲಸ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಕಳೆದ ಮೂರು ದಿನದ ಹಿಂದೆ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿತ್ತು.

'ನಿರಂತರ ಮಳೆಯಿಂದಾಗಿ ರಸ್ತೆಗೆ ಹಾನಿಯಾಗಿತ್ತು. ಈಗ ಅದನ್ನು ಸರಿಪಡಿಸಲಾಗಿದೆ. ಭಕ್ತರ ಹೊಸ ಗುಂಪು ಈಗ ಅಮರನಾಥ ಗುಹಾಲಯದ ದರ್ಶನ ಪಡೆಯಬಹುದಾಗಿದೆ' ಎಂದು ಅವರು ಹೇಳಿದರು.

ಅಮರನಾಥ ದರ್ಶನವನ್ನು ಸ್ಥಗಿತಗೊಳಿಸಿದ್ದರಿಂದ ಜಮ್ಮು ಹಾಗೂ ಇತರೆಡೆಗಳಲ್ಲಿ ಸುಮಾರು 15,000 ಭಕ್ತರು ಸಿಲುಕಿಕೊಂಡಿದ್ದಾರೆ. ಅವರೆಲ್ಲರಿಗೂ ದರ್ಶನಕ್ಕೆ ಹೋಗಲು ಅನುವು ಮಾಡಿಕೊಡಲಾಗಿದೆ. ಕಾಜಿಗುಂಡ್‌ನಲ್ಲಿ ಸಿಲುಕಿದ್ದವರಿಗೆ ಜಮ್ಮುವಿನೆಡೆಗೆ ಪ್ರಯಾಣಿಸಲು ಅನುಮತಿ ನೀಡಲಾಗಿದೆ' ಎಂದೂ ಅವರು ಮಾಹಿತಿ ನೀಡಿದರು.



ಜಮ್ಮುವಿನ ಮೂಲ ಶಿಬಿರದಲ್ಲಿರುವ ಯಾತ್ರಾರ್ಥಿಗಳು —ಪಿಟಿಐ ಚಿತ್ರ

ಪಂಚಾಯಿತಿ ಚುನಾವಣೆ, ಟಿಎಂಸಿ ಮುನ್ನಡೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ವಿವಿಧ ಪಂಚಾಯಿತಿಗಳಿಗೆ ನಡೆದ ಚುನಾವಣೆಯಲ್ಲಿ ಆಡಳಿತ ಪಕ್ಷ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪ್ರಾಬಲ್ಯ ಮೆರೆದಿದೆ. ಬಿಜೆಪಿ 2ನೇ ಸ್ಥಾನದಲ್ಲಿದೆ. ಕಾಂಗ್ರೆಸ್ ಮತ್ತು ಎಡರಂಗದ ಗೆಲುವಿನ ಸಾಧನೆ ನೀರಸವಾಗಿದೆ.

ಮಂಗಳವಾರ ರಾತ್ರಿ 11.30ರ ವರೆಗಿನ ಫಲಿತಾಂಶದ ಪ್ರಕಾರ, ತೃಣಮೂಲ ಕಾಂಗ್ರೆಸ್ ಒಟ್ಟು 30,391 ಸ್ಥಾನಗಳನ್ನು ಪಡೆದಿದ್ದು, ಬಿಜೆಪಿ 8,239 ಸ್ಥಾನಗಳಲ್ಲಿ ಮಾತ್ರ ಗೆಲುವು ಸಾಧಿಸಿದೆ. ಕಾಂಗ್ರೆಸ್ 2,158 ಹಾಗೂ ಎಡ (ಸಿಪಿಎಂ, ಸಿಪಿಐ, ಎಐಎಫ್‌ಬಿ, ಆರ್‌ಎಸ್‌ಪಿ) ಪಕ್ಷಗಳು 2,534 ಸ್ಥಾನಗಳನ್ನು ಪಡೆದಿವೆ. ಕಾಂಗ್ರೆಸ್ ಮತ್ತು ಎಡಪಕ್ಷಗಳು ಒಟ್ಟಾರೆ 4,692 ಸ್ಥಾನಗಳಲ್ಲಿ ಗೆಲುವು ಸಾಧಿಸಿವೆ.

'ಮತಪತ್ರಗಳ ಎಣಿಕೆ ಪ್ರಗತಿಯಲ್ಲಿದೆ. ಇನ್ನೂ 2 ದಿನ ಎಣಿಕೆ ನಡೆಯಬಹುದು' ಎಂದು ರಾಜ್ಯ ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

ಗ್ರಾಮ ಪಂಚಾಯಿತಿಗಳ 63,229 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಎಡರಂಗವು 2,595 ಸ್ಥಾನ ಗೆದ್ದಿದೆ. ಈ ಪೈಕಿ ಸಿಪಿಎಂ ಪಕ್ಷವೇ 1,424 ಸ್ಥಾನ ಗೆದ್ದಿದ್ದು, 969 ಕಡೆ ಮುನ್ನಡೆ ಸಾಧಿಸಿದೆ. ಕಾಂಗ್ರೆಸ್ ಪಕ್ಷ ಕೇವಲ 2,094 ಸ್ಥಾನ ಗೆದ್ದಿದ್ದು, 693 ಕಡೆ ಮುನ್ನಡೆಯನ್ನು ಕಾಯ್ದುಕೊಂಡಿದೆ.

ಉಳಿದಂತೆ, ಇತರೆ ಪಕ್ಷಗಳು 476 ಕಡೆ ಗೆದ್ದಿದ್ದು, 208 ಕಡೆ ಮುನ್ನಡೆಯಲ್ಲಿವೆ. ಟಿಎಂಸಿ ಬಂಡಾಯ ಅಭ್ಯರ್ಥಿಗಳು 1,060 ಸ್ಥಾನ ಗೆದ್ದುಕೊಂಡಿದ್ದು, 466 ಕಡೆ ಮುನ್ನಡೆಯಲ್ಲಿದ್ದಾರೆ. 785 ಕಡೆ ಸಮಾನಮತ ಗಳಿಸಿದ್ದು, ಫಲಿತಾಂಶ 'ಟೈ' ಆಗಿದೆ.

ಅಲ್ಲದೆ, ಆಡಳಿತಪಕ್ಷ ಟಿಎಂಸಿ ಪಂಚಾಯಿತಿ ಸಮಿತಿಗಳ 2,612 ಸ್ಥಾನಗಳನ್ನು ಈವರೆಗೆ ಗೆದ್ದಿದ್ದು, 627 ಕಡೆ ಮುನ್ನಡೆಯಲ್ಲಿದೆ. ಬಿಜೆಪಿ 275 ಸ್ಥಾನ ಪಡೆದಿದ್ದು, 149 ಕಡೆ ಮುನ್ನಡೆಯಲ್ಲಿದೆ. ಸಿಪಿಎಂ 163 ಮತ್ತು ಕಾಂಗ್ರೆಸ್ 150 ಸ್ಥಾನಗಳನ್ನು ಗೆದ್ದಿವೆ. ಪಂಚಾಯಿತಿ ಸಮಿತಿಗಳ 9,728 ಸ್ಥಾನಗಳಿಗೆ ಚುನಾವಣೆ ನಡೆದಿತ್ತು.

ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಟಿಎಂಸಿ ಪ್ರಾಬಲ್ಯ ಮೆರೆದಿದ್ದು, ಫಲಿತಾಂಶ ಪ್ರಕಟವಾದ ಎಲ್ಲ 18 ಸ್ಥಾನಗಳನ್ನು ಗೆದ್ದುಕೊಂಡಿದೆ. 64 ಕಡೆ ಮುನ್ನಡೆಯಲ್ಲಿದೆ. ಜಿಲ್ಲಾ ಪರಿಷತ್‌ನ 928 ಸ್ಥಾನಗಳಿಗೆ ಚುನಾವಣೆ ನಡೆದಿತ್ತು.

ಜುಲೈ 8ರಂದು ಮತದಾನ ನಡೆದಿತ್ತು. ವಿವಿಧ ಜಿಲ್ಲೆಗಳಲ್ಲಿ ಹಿಂಸಾಚಾರ ಕೃತ್ಯಗಳು ನಡೆದು ಸುಮಾರು 15 ಜನರು ಮೃತಪಟ್ಟಿದ್ದರು.



ಪಶ್ಚಿಮ ಬಂಗಾಳದಲ್ಲಿ ಪಂಚಾಯಿತಿಗಳ ಚುನಾವಣೆ ಫಲಿತಾಂಶ ಹೊರಬಿದ್ದ ಹಿಂದೆಯೇ ಟಿಎಂಸಿ ಬೆಂಬಲಿಗರು ಗುಲಾಲು ಹಚ್ಚಿ ಸಂಭ್ರಮಿಸಿದರು —ಪಿಟಿಐ ಚಿತ್ರ

> **ಬಂಗಾಳಕ್ಕೆ ಇಬ್ಬರು ಶತ್ರುಗಳಿದ್ದಾರೆ. ಒಂದು ಹಿಂಸಾಚಾರ ಮತ್ತೊಂದು ಭ್ರಷ್ಟಾಚಾರ. ಇಡೀ ಬಂಗಾಳ ರಾಜಕೀಯ ಲೆಕ್ಕಿಸದೇ ಇವುಗಳ ವಿರುದ್ಧ ಹೋರಾಡಬೇಕಿದೆ**
> **ಡಾ. ಸಿ.ವಿ ಆನಂದ ಬೋಸ್,** ರಾಜ್ಯಪಾಲರು, ಪಶ್ಚಿಮ ಬಂಗಾಳ

'ಮಮತಾ ನಿಷ್ಕರುಣಿ'

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಪಂಚಾಯಿತಿ ಚುನಾವಣೆ ದಿನದಂದು ನಡೆದಿದ್ದ ಹಿಂಸಾಚಾರದಲ್ಲಿ ಕನಿಷ್ಠ 45 ಮಂದಿ ಮೃತಪಟ್ಟಿದ್ದಾರೆ ಎಂದು ಬಿಜೆಪಿ ಪ್ರತಿಪಾದಿಸಿದೆ. 'ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನಿಷ್ಕರುಣಿ' ಎಂದೂ ಟೀಕಿಸಿದೆ.

'ಮಾಧ್ಯಮ ವರದಿಗಳ ಪ್ರಕಾರ, ಬಾಂಬ್ ದಾಳಿ, ನಕಲಿ ಮತದಾನ ನಡೆದಿದೆ. ಮಮತಾ ಬ್ಯಾನರ್ಜಿ ಅವರು ಮೌನವಾಗಿದ್ದರು. ಅವರು ಮಮತಾ ಅಲ್ಲ, ನಿರ್ಮಮತಾ (ನಿಷ್ಕರುಣಿ). ಚುನಾವಣೆ ದಿನದಂದು ಅಲ್ಲಿ ನಡೆದಿದ್ದು, 'ದಾದಾಗಿರಿಯ ರಾಜಕಾರಣ' ಎಂದು ಬಿಜೆಪಿ ವಕ್ತಾರ ಸಂಬೀತ್ ಪಾತ್ರಾ ಟೀಕಿಸಿದರು.

'ನನಗೆ ನಿರ್ದೇಶಿಸುವ ಅಧಿಕಾರ 'ಸುಪ್ರೀಂ'ಗಿಲ್ಲ'

'ಅನರ್ಹತೆಗೆ ಕಾಲಮಿತಿ ಇಲ್ಲ'

ಮುಂಬೈ (ಪಿಟಿಐ): 'ಶಾಸಕರ ಅನರ್ಹತೆ ಬಗ್ಗೆ ನಿರ್ಧಾರ ಕೈಗೊಳ್ಳಲು ಸುಪ್ರೀಂ ಕೋರ್ಟ್ ನನಗೆ ಯಾವುದೇ ಕಾಲಮಿತಿ ನಿಗದಿಪಡಿಸಿಲ್ಲ. ಅಂತಹ ಅಧಿಕಾರವೂ ಅದಕ್ಕಿಲ್ಲ' ಎಂದು ಮಹಾರಾಷ್ಟ್ರದ ಸ್ಪೀಕರ್ ರಾಹುಲ್ ನಾರ್ವೇಕರ್ ಹೇಳಿದ್ದಾರೆ.

ಶಾಸಕರ ಅನರ್ಹತೆ ಅರ್ಜಿ ಕುರಿತಂತೆ ಸ್ಪೀಕರ್ ಅವರೇ ನಿಗದಿತ ಅವಧಿಯೊಳಗೆ ನಿರ್ಧಾರ ಕೈಗೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಈಗಾಗಲೇ ಹೇಳಿದೆ.

ಈ ನಡುವೆಯೇ ಮುಖ್ಯಮಂತ್ರಿ ಏಕನಾಥ ಶಿಂದೆ ಸೇರಿದಂತೆ ಅವರ ಬಣದ 16 ಶಾಸಕರ ಅನರ್ಹತೆ ಪ್ರಕ್ರಿಯೆಗೆ ಸ್ಪೀಕರ್ ವಿಳಂಬ ಧೋರಣೆ ತಳೆದಿದ್ದಾರೆ. ತ್ವರಿತವಾಗಿ ಪ್ರಕ್ರಿಯೆ ಪೂರ್ಣಗೊಳಿಸಲು ಅವರಿಗೆ ಸೂಚಿಸಬೇಕು ಎಂದು ಶಿವಸೇನಾದ(ಯುಬಿಟಿ) ಮುಖ್ಯ ವಿಪ್ ಆಗಿರುವ ಶಾಸಕ ಸುನಿಲ್ ಪ್ರಭು ಅವರು ಕಳೆದ ವಾರ 'ಸುಪ್ರೀಂ'ಗೆ ಸಲ್ಲಿಸಿರುವ ಅರ್ಜಿಯಲ್ಲಿ ಕೋರಿದ್ದಾರೆ.

ಈ ಬಗ್ಗೆ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ನಾರ್ವೇಕರ್, 'ಜನತಂತ್ರ ವ್ಯವಸ್ಥೆಯಲ್ಲಿ ನ್ಯಾಯಾಂಗ ಮತ್ತು ಶಾಸಕಾಂಗ ಎರಡೂ ಪ್ರತ್ಯೇಕವಾಗಿವೆ. ಸ್ಪೀಕರ್ ಕ್ರಮ ತೆಗೆದುಕೊಳ್ಳುತ್ತಾರೆ ಎಂದಷ್ಟೇ ಕೋರ್ಟ್ ಹೇಳಬಹುದು. ತ್ವರಿತವಾಗಿ ಕ್ರಮಕೈಗೊಳ್ಳುವಂತೆ ಸ್ಪೀಕರ್‌ಗೆ ನಿರ್ದೇಶಿಸುವ ಅಧಿಕಾರ ಅದಕ್ಕಿಲ್ಲ. ಒಂದು ವೇಳೆ ಸೂಚಿಸಿದರೂ ಅದನ್ನು ತಿರಸ್ಕರಿಸುವ ಅಧಿಕಾರ ಸ್ಪೀಕರ್‌ಗೆ ಇದೆ' ಎಂದು ಸ್ಪಷ್ಟಪಡಿಸಿದರು.

ಉದ್ಧವ್‌ಗೆ ಕಲ್ಲೇಟಿನ ಉತ್ತರ: ಬಿಜೆಪಿ

ನಾಗ್ಪುರ (ಪಿಟಿಐ): 'ಉದ್ಧವ್ ಠಾಕ್ರೆ ಅವರು ಫಡಣವೀಸ್ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಗ್ಗೆ ಅವಮಾನಕರವಾಗಿ ಮಾತನಾಡುವುದನ್ನು ಕೂಡಲೇ ನಿಲ್ಲಿಸಬೇಕು. ಇಲ್ಲವಾದರೆ ಅವರಿಗೆ ಕಲ್ಲೇಟಿನ ಮೂಲಕ ಉತ್ತರ ನೀಡುತ್ತೇವೆ' ಎಂದು ಮಹಾರಾಷ್ಟ್ರದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ ಬಾವನಕುಲೆ ಎಚ್ಚರಿಸಿದ್ದಾರೆ.

'ನಮ್ಮ ಹೋರಾಟದಿಂದ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟರೆ ಅದಕ್ಕೆ ಬಿಜೆಪಿ ಹೊಣೆಯಲ್ಲ' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

370ನೇ ವಿಧಿ ರದ್ದತಿ: ಆ.2ರಿಂದ ಅರ್ಜಿಗಳ ನಿತ್ಯ ವಿಚಾರಣೆ

ಶ್ರೀನಗರ (ಪಿಟಿಐ): ಈ ಹಿಂದಿನ ಜಮ್ಮು-ಕಾಶ್ಮೀರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡಲು ಜಾರಿಗೊಳಿಸಿದ್ದ 370ನೇ ವಿಧಿ ರದ್ದುಗೊಳಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಆಗಸ್ಟ್ 2ರಿಂದ ಪ್ರತಿ ದಿನ ನಡೆಸುವುದಾಗಿ ಸುಪ್ರೀಂಕೋರ್ಟ್ ಮಂಗಳವಾರ ಹೇಳಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಸಂಜಯಕಿಶನ್ ಕೌಲ್, ಸಂಜೀವ್ ಖನ್ನಾ, ಬಿ.ಆರ್.ಗವಾಯಿ ಹಾಗೂ ಸೂರ್ಯಕಾಂತ ಅವರಿದ್ದ ಸಂವಿಧಾನ ಪೀಠ ಈ ನಿರ್ಧಾರ ಪ್ರಕಟಿಸಿತು.

'ಆಗಸ್ಟ್ 2ರ ಬೆಳಿಗ್ಗೆ 10.30ಕ್ಕೆ ವಿಚಾರಣೆ ಆರಂಭಿಸಲಾಗುವುದು. ಸೋಮವಾರ ಹಾಗೂ ಶುಕ್ರವಾರ ಹೊರತುಪಡಿಸಿ ಉಳಿದ ದಿನಗಳಲ್ಲಿ ವಿಚಾರಣೆ ನಡೆಸಲಾಗುವುದು' ಎಂದು ನ್ಯಾಯಪೀಠ ಹೇಳಿತು.

ಜುಲೈ 27ರ ಒಳಗಾಗಿ ಲಿಖಿತ ಪ್ರತಿಕ್ರಿಯೆ ಸಲ್ಲಿಸುವಂತೆ ಅರ್ಜಿದಾರರಿಗೆ ಹಾಗೂ ಕೇಂದ್ರ ಸರ್ಕಾರಕ್ಕೆ ಸೂಚಿಸಿದ ನ್ಯಾಯಪೀಠ, ಉತ್ತರ ಸಲ್ಲಿಸುವ ಸಮಯವನ್ನು ಯಾವುದೇ ಕಾರಣಕ್ಕೂ ವಿಸ್ತರಿಸುವುದಿಲ್ಲ ಎಂದು ಸ್ಪಷ್ಟಪಡಿಸಿತು.

ಕೇಂದ್ರ ಸರ್ಕಾರವು 2019ರ ಆಗಸ್ಟ್ 5ರಂದು ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸುವ ಮೂಲಕ ಜಮ್ಮು-ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದಿತ್ತು.

ಕೇಂದ್ರದ ಪ್ರಮಾಣಪತ್ರ: ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿದ ನಂತರ ಜಮ್ಮು-ಕಾಶ್ಮೀರದಲ್ಲಿ ಅಭೂತಪೂರ್ವ ಸ್ಥಿರತೆ ಹಾಗೂ ಅಭಿವೃದ್ಧಿ ಕಂಡುಬಂದಿದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂಕೋರ್ಟ್‌ಗೆ ಸೋಮವಾರ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ತಿಳಿಸಿದೆ.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್: ಪ್ರವೀಣ್‌ಗೆ ಕಂಚು

ಪ್ಯಾರಿಸ್ (ಪಿಟಿಐ): ಭಾರತದ ಪ್ರವೀಣ್ ಕುಮಾರ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಪುರುಷರ ಹೈಜಂಪ್ ಟಿ64 ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದರು. ಈ ಸಾಧನೆ ಮೂಲಕ 2024ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಅರ್ಹತೆ ಪಡೆದುಕೊಂಡರು.

ಸೋಮವಾರ ನಡೆದ ಸ್ಪರ್ಧೆಯಲ್ಲಿ 20 ವರ್ಷದ ಪ್ರವೀಣ್, 2.01 ಮೀ. ಜಿಗಿದು ಮೂರನೇ ಸ್ಥಾನ ಪಡೆದರು. ಪೋಲೆಂಡ್‌ನ ಲೆಪಿಯಾಟೊ ಮಸಿಯೆಜ್ (2.05 ಮೀ) ಮತ್ತು ಬ್ರಿಟನ್‌ನ ಬ್ರೂಮ್ ಎಡ್ವರ್ಡ್ಸ್ ಜೊನಾಥನ್ (2.05 ಮೀ) ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಪಡೆದರು.

ಪ್ರವೀಣ್ ಅವರಿಗೆ ದೊರೆತ ಕಂಚು, ಭಾರತಕ್ಕೆ ಚಾಂಪಿಯನ್‌ಷಿಪ್‌ನ ಮೊದಲ ಪದಕ. ಪ್ರವೀಣ್ ಅವರು ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಬೆಳ್ಳಿಪದಕ ಗೆದ್ದಿದ್ದರು.

ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ವಿವಿಧ ಸ್ಪರ್ಧೆಗಳಲ್ಲಿ ಮೊದಲ ನಾಲ್ಕು ಸ್ಥಾನಗಳನ್ನು ಪಡೆಯುವವರು 2024ರ ಪ್ಯಾರಾಲಿಂಪಿಕ್ಸ್‌ಗೆ ಅರ್ಹತೆ ಗಳಿಸುವರು.



ಪ್ರವೀಣ್ ಕುಮಾರ್ ಟ್ವಿಟರ್ ಚಿತ್ರ

ದೇವಧರ್ ಟ್ರೋಫಿ: ಮಯಂಕ್ ನಾಯಕ

ಚೆನ್ನೈ (ಪಿಟಿಐ): ಮಯಂಕ್ ಅಗರ ವಾಲ್ ದೇವಧರ್ ಟ್ರೋಫಿಯಲ್ಲಿ ಆಡುವ ದಕ್ಷಿಣ ವಲಯ ತಂಡದ ನಾಯಕರಾಗಿದ್ದಾರೆ. ತಂಡದಲ್ಲಿ ಸಚಿನ್ ತೆಂಡೂಲ್ಕರ್ ಪುತ್ರ ಅರ್ಜುನ್ ಸ್ಥಾನ ಪಡೆದಿದ್ದಾರೆ. ಈ ಅಂತರ ವಲಯ ಏಕದಿನ ಪಂದ್ಯಗಳ ಟೂರ್ನಿ ಪುದುಚೇರಿಯಲ್ಲಿ 24 ರಿಂದ ನಡೆಯಲಿದೆ.

ತಂಡ ಹೀಗಿದೆ: ಮಯಂಕ್ ಅಗರವಾಲ್ (ನಾಯಕ), ರೋಹನ್ ಕುನ್ನುಮ್ಮಲ್, ಎನ್.ಜಗದೀಶನ್ (ವಿಕೆಟ್ ಕೀಪರ್), ರೋಹಿತ್ ರಾಯುಡು, ಕೆ.ಬಿ.ಅರ್ಜುನ್ ಕಾರ್ತಿಕ್, ದೇವದತ್ತ ಪಡಿಕ್ಕಲ್, ರಿಕಿ ಭುಯಿ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್, ಕೌಶಿಕ್ ವಿ., ಮೋಹಿತ್ ರೆಡ್ಕರ್, ಸಿಜಿಮೋನ್ ಜೋಸೆಫ್, ಅರ್ಜುನ್ ತೆಂಡೂಲ್ಕರ್ ಮತ್ತು ಸಾಯಿ ಕಿಶೋರ್.

ಏಷ್ಯನ್ ಅಥ್ಲೆಟಿಕ್ ಕೂಡ ಇಂದಿನಿಂದ • ಮದ್ದು ಸೇವನೆ: ಇಬ್ಬರು ಹೊರಕ್ಕೆ

ತೊಡಕುಗಳ ನಡುವೆಯೂ ಸಾಧನೆ ಭರವಸೆ

ಬ್ಯಾಂಕಾಕ್ (ಪಿಟಿಐ): ಉದ್ದೀಪನ ಮದ್ದು ಸೇವನೆ ಪ್ರಕರಣವು, ಬುಧವಾರ ಆರಂಭವಾಗುವ ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡದ ಉತ್ಸಾಹಕ್ಕೆ ಕೊಂಚ ಹಿನ್ನಡೆ ತಂದಿದೆ ನಿಜ, ಇದರ ಹೊರತಾಗಿಯೂ ಷಾಟ್‌ಪಟ್ ಪಟು ತಜಿಂದರ್‌ಪಾಲ್ ತೂರ್ ಮತ್ತು ಲಾಂಗ್‌ಜಂಪರ್ ಮುರಳಿ ಶ್ರೀಶಂಕರ್ ನೇತೃತ್ವದ ತಂಡ, ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದೆ.

ಷಾಟ್‌ಪಟ್ ಸ್ಪರ್ಧಿ ಕರಣ್‌ವೀರ್ ಸಿಂಗ್ ಮತ್ತು 400 ಮೀ. ಓಟಗಾರ್ತಿ ಅಂಜಲಿ ದೇವಿ ಅವರು ಕೂಟಕ್ಕೆ ಆಯ್ಕೆಯಾಗಿದ್ದ 54 ಮಂದಿಯ ಮೂಲ ತಂಡದಿಂದ ಹೊರಬಿದ್ದಿದ್ದಾರೆ. ಗಾಯಾಳಾಗಿ ಮೂರು ವರ್ಷಗಳ ಕಾಲ ಅಥ್ಲೆಟಿಕ್ಸ್‌ನಿಂದ ದೂರವುಳಿದಿದ್ದ ಅಂಜಲಿ, ಕಳೆದ ತಿಂಗಳು ಭುವನೇಶ್ವರದಲ್ಲಿ ನಡೆದ ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್ ಮೂಲಕ ಸಕ್ರಿಯ ಕಣಕ್ಕೆ ಮರಳಿದ್ದು, 400 ಮೀ. ಓಟವನ್ನು 51.48 ಸೆ.ಗಳಲ್ಲಿ ಕ್ರಮಿಸುವ ಮೂಲಕ ಅತ್ಯಮೋಘ ಪ್ರದರ್ಶನ ನೀಡಿದ್ದರು.

ಈಗ ಬ್ಯಾಂಕಾಕ್‌ನಲ್ಲಿರುವ ಭಾರತ ಅಥ್ಲೆಟಿಕ್ ಫೆಡರೇಷನ್‌ನ ಹಿರಿಯ ಅಧಿಕಾರಿಯೊಬ್ಬರು ಅಂಜಲಿ ದೇವಿ, ಮದ್ದು ಪರೀಕ್ಷೆಯಲ್ಲಿ ಸಿಲುಕಿರುವುದನ್ನು ಪಿಟಿಐಗೆ ದೃಢಪಡಿಸಿದ್ದಾರೆ. ಪುರುಷರ 400 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಮುಹಮ್ಮದ್ ಅನಾಸ್ ಯಾಹ್ಯಾ ಅವರೂ ತಂಡದಿಂದ ಹೊರಬಿದ್ದಿದ್ದಾರೆ. ಆದರೆ ಕಾರಣ ನಿಗೂಢವಾಗಿದೆ. ಅವರನ್ನು ಕೈಬಿಟ್ಟಿರುವುದಕ್ಕೆ ಫೆಡರೇಷನ್ ಇದುವರೆಗೆ ಅಧಿಕೃತ ಕಾರಣ ನೀಡಿಲ್ಲ. ಜೂನ್ 22ರಂದು ಪ್ರಕಟಿಸಿರುವ ತಂಡದಲ್ಲಿ ಅವರ ಹೆಸರಿತ್ತು.

ಗಾಯಾಳಾಗಿರುವ ಕಾರಣ ಲಾಂಗ್‌ಜಂಪ್ ಸ್ಪರ್ಧಿ ಜೆಸ್ವಿನ್ ಅಲ್ಡ್ರಿನ್, ಟ್ರಿಪಲ್ ಜಂಪರ್ ಪ್ರವೀಣ್ ಚಿತ್ರವೇಲ್ ಮತ್ತು ಜಾವೆಲಿನ್ ಥ್ರೊ ಸ್ಪರ್ಧಿ ರೋಹಿತ್ ಯಾದವ್ ಅವರೂ ಏಷ್ಯಾದ ಈ ಪ್ರಮುಖ ಕೂಟದ ಕಣದಲ್ಲಿಲ್ಲದಿರುವುದು ತಂಡಕ್ಕೆ ಹಿನ್ನಡೆಯಾಗಿದೆ. ಚಿತ್ರವೇಲ್, ಈ ವರ್ಷದ ಏಷ್ಯಾದ ಅತ್ಯುತ್ತಮ ಪ್ರದರ್ಶನ ದಾಖಲಿಸಿದ್ದಾರೆ. 2019ರಲ್ಲಿ ನಡೆದ ಈ ಹಿಂದಿನ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಎರಡು ಚಿನ್ನ, ಏಳು ಬೆಳ್ಳಿ ಮತ್ತು ಏಳು ಕಂಚಿನ ಪದಕ ಸಹಿತ 16 ಪದಕಗಳನ್ನು ಗೆದ್ದುಕೊಂಡಿತ್ತು. ಇದು ಭಾರತವನ್ನು ಪದಕ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೆ ತಂದುನಿಲ್ಲಿಸಿತ್ತು.

ಇಲ್ಲಿ ಉತ್ತಮ ಪ್ರದರ್ಶನ ನೀಡುವ ಮೂಲಕ 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವ ಯತ್ನದಲ್ಲೂ ಕೆಲವು ಸ್ಪರ್ಧಿಗಳಿದ್ದಾರೆ.

ಚಿನ್ನದ ಮೇಲೆ ಕಣ್ಣು: ಕಳೆದ ತಿಂಗಳು ಲಾಂಗ್‌ಜಂಪ್‌ನಲ್ಲಿ 8.81 ಮೀ. ದೂರ ಜಿಗಿಯುವ ಮೂಲಕ ಈ ಋತುವಿನಲ್ಲಿ ವಿಶ್ವದ ಎರಡನೇ tally. ಉತ್ತಮ ಸಾಧನೆ ದಾಖಲಿಸಿರುವ ಶ್ರೀಶಂಕರ್ ಚಿನ್ನದ ಪೈಪೋಟಿಯಲ್ಲಿರುವ ಅಗ್ರ ಅಥ್ಲೀಟುಗಳಲ್ಲಿ ಒಬ್ಬರಾಗಿದ್ದಾರೆ. ಕಳೆದ ತಿಂಗಳು, ಪ್ರತಿಷ್ಠಿತ ಡೈಮಂಡ್ ಲೀಗ್‌ನ ಪ್ಯಾರಿಸ್ ಲೆಗ್‌ನಲ್ಲಿ ಮೂರನೇ ಸ್ಥಾನ ಗಳಿಸಿದ್ದು ಅವರಲ್ಲಿ ವಿಶ್ವಾಸ ಮೂಡಿಸಿದೆ.

ಜೂನ್‌ನಲ್ಲಿ ಅಂತರ ರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ ಷಾಟ್‌ಪಟ್‌ಅನ್ನು 21.77 ಮೀ. ದೂರ ಎಸೆದಿದ್ದ ಏಷ್ಯನ್ ದಾಖಲೆ ವೀರ, ಹಾಲಿ ಚಾಂಪಿಯನ್ ತಜಿಂದರ್ ಪಾಲ್ ತೂರ್ ಚಿನ್ನ ಗೆಲ್ಲುವ ನೆಚ್ಚಿನ ಸ್ಪರ್ಧಿ ಆಗಿದ್ದಾರೆ. ಅವರ ಹಾಲಿ ಚಾಂಪಿಯನ್ ಕೂಡ. 'ಅವರು ಚಿನ್ನ ಗೆಲ್ಲುವ ಅವಕಾಶ ಉಜ್ವಲವಾಗಿದೆ' ಎಂದು ಚೀಫ್ ಕೋಚ್ ರಾಧಾಕೃಷ್ಣನ್ ನಾಯರ್ ಹೇಳಿದರು. 2019ರ ಆವೃತಿಯಲ್ಲಿ ಅವರು 20.22 ಮೀ. ಎಸೆದು ಚಿನ್ನ ಗೆದ್ದಿದ್ದರು. 'ನನ್ನ ತರಬೇತಿ ನಿರೀಕ್ಷಿತ ಹಾದಿಯಲ್ಲಿದ್ದು, ಬ್ಯಾಂಕಾಕ್‌ನಲ್ಲಿ ಸಾಧನೆ ಸುಧಾರಿಸುವ ವಿಶ್ವಾಸದಲ್ಲಿದ್ದೇನೆ' ಎಂದು ತೂರ್ ಹೇಳಿದ್ದಾರೆ.

ಜಾವೆಲಿನ್‌ನಲ್ಲಿ ಯಾದವ್ ಅವರು ಮೊಣಕೈ ನೋವಿನಿಂದ ಹಿಂದೆ ಸರಿದರೂ, ಭಾರತವು ಕನ್ನಡಿಗ ಡಿ.ಪಿ.ಮನು ಮೂಲಕ ಪದಕದ ನಿರೀಕ್ಷೆಯಲ್ಲಿದೆ. ಅವರು ಈ ವರ್ಷಾರಂಭದಲ್ಲಿ 84.33 ಮೀ. ಸಾಧನೆ ದಾಖಲಿಸಿದ್ದಾರೆ. ಬುಡಾಪೆಸ್ಟ್‌ನಲ್ಲಿ ಮುಂದಿನ ತಿಂಗಳು ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಸಜ್ಜಾಗುತ್ತಿರುವ ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಇಲ್ಲಿ ಭಾಗವಹಿಸುತ್ತಿಲ್ಲ.



ಮುರಳಿ ಶ್ರೀಶಂಕರ್

ಮ್ಯಾಸ್ಕಟ್ 'ಹನುಮಾನ್'

ಬ್ಯಾಂಕಾಕ್ (ಪಿಟಿಐ): ಭಾರತದಲ್ಲಿ ಹೆಚ್ಚು ಆರಾಧನೆಗೊಳಗಾಗುವ ದೇವರಲ್ಲಿ ಒಬ್ಬರಾದ ವೀರ ಹನುಮಾನ್, ಬುಧವಾರ ಆರಂಭವಾಗುವ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮ್ಯಾಸ್ಕಟ್ ಆಗಿದ್ದಾರೆ.

'ರಾಮನ ಸೇವೆಯ ಜೊತೆಗೆ ವೇಗ, ಶಕ್ತಿ, ಧೈರ್ಯ, ಜ್ಞಾನವನ್ನು ಪ್ರತಿನಿಧಿಸುವ ಹನುಮಂತನ ಗುಣಗಳಲ್ಲಿ ಪರಮನಿಷ್ಠೆ ಮತ್ತು ಭಕ್ತಿ ಅತಿ ಪ್ರಮುಖ' ಎಂದು ಏಷ್ಯನ್ ಅಥ್ಲೆಟಿಕ್ ಫೆಡರೇಷನ್ ತನ್ನ ವೆಬ್‌ಸೈಟ್‌ನಲ್ಲಿ ವಿವರಿಸಿದೆ.

ವಿಂಡೀಸ್ ವಿರುದ್ಧ ಟೆಸ್ಟ್ ಇಂದಿನಿಂದ: ಕೊಹ್ಲಿ, ರೋಹಿತ್‌ಗೆ ಲಯ ಕಂಡುಕೊಳ್ಳುವ ಸವಾಲು

ಯಶಸ್ವಿ ಜೈಸ್ವಾಲ್ ಮೇಲೆ ಗಮನ

ರೋಸೊ (ಡೊಮಿನಿಕಾ) (ಎಎಫ್‌ಪಿ/ ಪಿಟಿಐ): ಪರಿವರ್ತನೆಗೆ ತೆರೆದುಕೊಳ್ಳುವ ಹಾದಿಯಲ್ಲಿರುವ ಭಾರತ ತಂಡ, ಬುಧವಾರ ಆರಂಭವಾಗುವ ಎರಡು ಟೆಸ್ಟ್‌ಗಳ ಸರಣಿಯ ಮೊದಲ ಪಂದ್ಯದಲ್ಲಿ ಯುವ ಆಟಗಾರ ಯಶಸ್ವಿ ಜೈಸ್ವಾಲ್ ಅವರಿಗೆ ಅವಕಾಶ ನೀಡುವ ಸಾಧ್ಯತೆ ನಿಚ್ಚಳವಾಗಿದೆ. ಇನ್ನೊಂದೆಡೆ, ಏಕದಿನ ವಿಶ್ವಕಪ್‌ಗೆ ಸ್ಥಾನ ಕಳೆದುಕೊಂಡ ಆಘಾತದಲ್ಲಿರುವ ವೆಸ್ಟ್ ಇಂಡೀಸ್ ತಂಡ, ವಿಶ್ವ ಕ್ರಿಕೆಟ್‌ಗೆ ತಾನಿನ್ನೂ ಪ್ರಸ್ತುತ ಎಂಬುದನ್ನು ಸಾಬೀತುಪಡಿಸುವ ಸವಾಲು ಎದುರಿಸುತ್ತಿದೆ.

ಚೇತೇಶ್ವರ ಪೂಜಾರ ಅವರನ್ನು ಕೈಬಿಟ್ಟ ನಂತರ ಆ ಸ್ಥಾನದಲ್ಲಿ ಮುಂಬೈನ ಎಡಗೈ ಆಟಗಾರ ಜೈಸ್ವಾಲ್ ಪದಾರ್ಪಣೆ ಮಾಡುವ ಅವಕಾಶ ಹೆಚ್ಚಾಗಿದೆ. ದೇಶೀಯ ಟೂರ್ನಿಗಳಲ್ಲಿ 21 ವರ್ಷದ ಜೈಸ್ವಾಲ್ ಈಗಾಗಲೇ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ. ಅವರು ಆರಂಭ ಆಟಗಾರನ ಸ್ಥಾನದಲ್ಲಿ ಆಡುವುದರಿಂದ ಶುಭಮನ್ ಗಿಲ್ ಅವರು ಪೂಜಾರ ಅವರಿಂದ ತೆರವಾಗಿರುವ ಮೂರನೇ ಕ್ರಮಾಂಕದಲ್ಲಿ ಆಡಬಹುದು. ಅನುಭವಿಗಳಾದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಅಜಿಂಕ್ಯ ರಹಾನೆ ಮಧ್ಯಮ ಕ್ರಮಾಂಕದಲ್ಲಿ ಇದ್ದರೂ, ಅವರು ಭಿನ್ನ ಸವಾಲುಗಳನ್ನು ಎದುರಿಸುತ್ತಿದ್ದಾರೆ.

ನಾಯಕ ರೋಹಿತ್ ಶರ್ಮಾ ಲಯಕ್ಕೆ ಮರಳಲು ಪರದಾಡುತ್ತಿದ್ದಾರೆ. ಈ ಸರಣಿಯಲ್ಲಿ ಉಪಯುಕ್ತ ಇನಿಂಗ್ಸ್‌ಗಳನ್ನು ಆಡಿದರಷ್ಟೇ ದೀರ್ಘ ಮಾದರಿಯ ಕ್ರಿಕೆಟ್‌ನಲ್ಲಿ ಅವರು ಮುಂದುವರಿಯಬಹುದು. ಕೊಹ್ಲಿ ಅವರಿಂದ ದೊಡ್ಡ ಇನಿಂಗ್ಸ್‌ಗಳು ಬರಬೇಕಾಗಿವೆ. ಆಫ್ ಸ್ಟಂಪ್ ಆಚೆ ಹೋಗುವ ಚೆಂಡನ್ನು ನಿಭಾಯಿಸಲು ಅವರು ಎಡವುತ್ತಿದ್ದಾರೆ. ಅವರ ವೈಫಲ್ಯ ಮುಂದುವರಿದರೆ, ಅವರಿಗೆ ಮತ್ತು ಪೂಜಾರ ಅವರಿಗೆ ಬೇರೆ ಬೇರೆ ಮಾನದಂಡ ಏಕೆ ಎಂಬ ಪ್ರಶ್ನೆ ಎದುರಾಗಲಿದೆ.

ಕೇಮಾರ್ ರೋಚ್ (261 ವಿಕೆಟ್), ಶಾನನ್ ಗೇಬ್ರಿಯಲ್ (164 ವಿಕೆಟ್), ಅಲ್ಜಾರಿ ಜೋಸೆಫ್ ಮತ್ತು ಜೇಸನ್ ಹೋಲ್ಡರ್ ಅವರ ದಾಳಿಯನ್ನು ಪ್ರವಾಸಿ ತಂಡದ ಬ್ಯಾಟರ್‌ಗಳು ಹೇಗೆ ಎದುರಿಸುತ್ತಾರೆ ಎಂಬ ಕುತೂಹಲವಿದೆ. ಆದರೆ ಭಾರತದ ವೇಗದ ಬೌಲಿಂಗ್ ವಿಭಾಗ ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಶಮಿ ಅನುಪಸ್ಥಿತಿಯಲ್ಲಿ ಮೊನಚನ್ನು ಕಳೆದುಕೊಂಡಿದೆ. ಹೀಗಾಗಿ 19 ಟೆಸ್ಟ್‌ಗಳ ಅನುಭವಿ ಮೊಹಮ್ಮದ್ ಸಿರಾಜ್ ಅವರೇ ವೇಗದ ದಾಳಿಯ ನೇತೃತ್ವ ವಹಿಸುವರು.

ವೆಸ್ಟ್ ಇಂಡೀಸ್ ಮಧ್ಯಮ ಕ್ರಮಾಂಕದಲ್ಲಿ ಸ್ಥಳೀಯ ಆಟಗಾರ ಅಲಿಕ್ ಅಥನೇಝ್ ಅವರಿಗೆ ಚೊಚ್ಚಲು ಟೆಸ್ಟ್ ಆಡುವ ಅವಕಾಶ ನೀಡಬಹುದು ಎನ್ನುವ ನಿರೀಕ್ಷೆಯಲ್ಲಿ ಅಭಿಮಾನಿಗಳಿದ್ದಾರೆ.

ವೆಸ್ಟ್ ಇಂಡೀಸ್ ನೆಚ್ಚಿನ ತಂಡವಲ್ಲ ಮತ್ತು ಭಾರತದ ದಾಳಿ ನಿಭಾಯಿಸುವಲ್ಲಿ ಆ ತಂಡದ ಬ್ಯಾಟರ್‌ಗಳ ಸಾಮರ್ಥ್ಯದ ಬಗ್ಗೆ ಪ್ರಶ್ನೆಗಳಿದ್ದರೂ, ತಂಡದ ಮೆಂಟರ್ ಆಗಿರುವ ಬ್ಯಾಟಿಂಗ್ ದಂತಕಥೆ ಲಾರಾ ಅವರು ಭರವಸೆ ಕಳೆದುಕೊಂಡಿಲ್ಲ. 'ಯುವ ಮತ್ತು ಅನನುಭವಿಗಳಿಂದ ಕೂಡಿರುವ ತವರಿನ ತಂಡ, ಈ ಭಾಗದಲ್ಲಿ ಕವಿದಿರುವ ವಿಷಣ್ಣ ಪರಿಸ್ಥಿತಿಯಲ್ಲಿ ಆಶಾಕಿರಣ ಆಗಬಲ್ಲದು' ಎಂಬ ವಿಶ್ವಾಸ ಹೊಂದಿದ್ದಾರೆ. ವೆಸ್ಟ್ ಇಂಡೀಸ್ ಆಟಗಾರರು, ಆರ್. ಅಶ್ವಿನ್ (474 ವಿಕೆಟ್) ಮತ್ತು ರವೀಂದ್ರ ಜಡೇಜಾ (268) ಅವರ ಸ್ಪಿನ್ ದಾಳಿಯನ್ನು ಹೇಗೆ ನಿಭಾಯಿಸುವರು ಎಂಬುದೂ ಕುತೂಹಲಕರ.

ವೆಸ್ಟ್ ಇಂಡೀಸ್, ಟೆಸ್ಟ್ ಪಂದ್ಯವೊಂದರಲ್ಲಿ ಕೊನೆಯ ಬಾರಿ ಭಾರತವನ್ನು ಸೋಲಿಸಿದ್ದು 2002ರಲ್ಲಿ. ಭಾರತ ಇದನ್ನು ವಿಸ್ತರಿಸುವ ಹುಮ್ಮಸ್ಸಿನಲ್ಲಿದೆ. ಎರಡೂ ತಂಡಗಳಿಗೆ ಇದು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಹೊಸ ಆವೃತ್ತಿಯ ಆರಂಭ ಎನಿಸಲಿದೆ.



ಅಭ್ಯಾಸದ ವೇಳೆ ಕಾಣಿಸಿಕೊಂಡ ಕೊಹ್ಲಿ (ಎಡಚಿತ್ರ). ಇಶಾನ್ ಮತ್ತು ಸಿರಾಜ್ –ಬಿಸಿಸಿಐ ಟ್ವಿಟರ್ ಚಿತ್ರ


ಯಶಸ್ವಿ

ಭಾರತ–ವಿಂಡೀಸ್ ಬಲಾಬಲ

	ಟೆಸ್ಟ್	ಭಾರತ ಜಯ	ಡ್ರಾ	ವಿಂಡೀಸ್ ಜಯ
ಒಟ್ಟು	98	22	46	30
ವಿಂಡೀಸ್ ನೆಲದಲ್ಲಿ	51	9	26	16

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಋತುರಾಜ್ ಗಾಯಕವಾಡ್, ವಿರಾಟ್ ಕೊಹ್ಲಿ, ಯಶಸ್ವಿ ಜೈಸ್ವಾಲ್, ಅಜಿಂಕ್ಯ ರಹಾನೆ, ಕೆ.ಎಸ್.ಭರತ್ (ವಿಕೆಟ್ ಕೀಪರ್), ಇಶಾನ್ ಕಿಶಾನ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜಾ, ಶಾರ್ದೂಲ್ ಠಾಕೂರ್, ಅಕ್ಷರ್ ಪಟೇಲ್, ಸಿರಾಜ್, ಮುಕೇಶ್ ಕುಮಾರ್, ಉನದ್ಕತ್ ಮತ್ತು ನವದೀಪ್ ಸೈನಿ.
ವೆಸ್ಟ್ ಇಂಡೀಸ್: ಕ್ರೇಗ್ ಬ್ರಾತ್‌ವೇಟ್ (ನಾಯಕ) ಜರ್ಮೇನ್ ಬ್ಲ್ಯಾಕ್‌ವುಡ್, ಜೋಶುವಾ ಡ ಸಿಲ್ವ (ವಿಕೆಟ್ ಕೀಪರ್), ಅಲಿಕ್ ಅಥನೇಝ್, ರಖೀಮ್ ಕಾರ್ನ್‌ವಾಲ್, ಶಾನನ್ ಗೇಬ್ರಿಯಲ್, ಜೇಸನ್ ಹೋಲ್ಡರ್, ಅಲ್ಜಾರಿ ಜೋಸೆಫ್, ರೇಮನ್ ರೀಫರ್, ಕೇಮಾರ್ ರೋಚ್, ತೇಜನಾರಾಯಣ ಚಂದರಪಾಲ್, ಕಿರ್ಕ್ ಮೆಕೆಂಝಿ ಮತ್ತು ಜೊಮೆಲ್ ವಾರಿಕನ್.
ಪಂದ್ಯ ಆರಂಭ: ರಾತ್ರಿ 7.30 (ಭಾರತೀಯ ಕಾಲಮಾನ) ನೇರಪ್ರಸಾರ: ಡಿಡಿ ಸ್ಪೋರ್ಟ್ಸ್, ಫ್ಯಾನ್‌ಕೋಡ್ ಆ್ಯಪ್

ತಾರೆಗಳ ಮುಖಾಮುಖಿ

ದುಲೀಪ್ ಟ್ರೋಫಿ ಫೈನಲ್: ದಕ್ಷಿಣ– ಪಶ್ಚಿಮ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಗಾರು ಮಳೆಯಲ್ಲಿ ಮಿಂದೇಳುತ್ತಿರುವ ಉದ್ಯಾನನಗರಿಯ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಿಂಚು ಹರಿಸಲು ಕ್ರಿಕೆಟ್ ತಾರೆಗಳು ಸಿದ್ಧರಾಗಿದ್ದಾರೆ.

ಬುಧವಾರ ಇಲ್ಲಿ ಆರಂಭವಾಗಲಿರುವ ದುಲೀಪ್ ಟ್ರೋಫಿ ಫೈನಲ್‌ನಲ್ಲಿ ದಕ್ಷಿಣ ವಲಯ ಮತ್ತು ಪಶ್ಚಿಮ ವಲಯ ಮುಖಾಮುಖಿಯಾಗಲಿವೆ. ಭಾರತ ತಂಡಕ್ಕೆ ಮರಳಲು ಕಾತರದಲ್ಲಿರುವ ಖ್ಯಾತನಾಮರು ಈ ಎರಡೂ ತಂಡಗಳಲ್ಲಿಯೂ ಇದ್ದಾರೆ. ಆಯ್ಕೆ ಸಮಿತಿಯ ಗಮನ ಸೆಳೆಯಲು ಸಿದ್ಧರಾಗಿದ್ದಾರೆ.

ದಕ್ಷಿಣ ವಲಯ ತಂಡದಲ್ಲಿ ಟೆಸ್ಟ್ ಪರಿಣತ ಹನುಮವಿಹಾರಿ, ಮಯಂಕ್ ಅಗರವಾಲ್ ಮತ್ತು ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಕಣಕ್ಕಿಳಿಯಲಿದ್ದಾರೆ. ಇಲ್ಲಿಯೇ ನಡೆದಿದ್ದ ಸೆಮಿಫೈನಲ್‌ನಲ್ಲಿ ಮಯಂಕ್ ದಕ್ಷಿಣ ತಂಡದ ಗೆಲುವಿನ ರೂವಾರಿಯಾಗಿದ್ದರು.

ಕನ್ನಡದ ಜೋಡಿ ವಿದ್ವತ್ ಕಾವೇರಪ್ಪ ಮತ್ತು ವೈಶಾಖ ವಿಜಯಕುಮಾರ್ ಅವರು ತಮ್ಮ ವೇಗದ ಬೌಲಿಂಗ್ ಮೂಲಕ ಉತ್ತರ ವಲಯಕ್ಕೆ ಬಿಸಿ ಮುಟ್ಟಿಸಿದ್ದರು. ಇಬ್ಬರೂ ವೇಗಿಗಳು ಐದು ವಿಕೆಟ್‌ಗಳ ಗೊಂಚಲು ಕೂಡ ಗಳಿಸಿದ್ದರು.

ಹಾಲಿ ಚಾಂಪಿಯನ್ ಪಶ್ಚಿಮ ವಲಯದಲ್ಲಿಯೂ ತಾರೆಗಳ ದಂಡು ಇದೆ. ಸೌರಾಷ್ಟ್ರದ ಚೇತೇಶ್ವರ್ ಪೂಜಾರ, ಮಿಸ್ಟರ್ 360 ಡಿಗ್ರಿ ಖ್ಯಾತಿಯ ಸೂರ್ಯಕುಮಾರ್ ಯಾದವ್, ಆರಂಭಿಕ ಬ್ಯಾಟರ್ ಪೃಥ್ವಿ ಶಾ, ಭಾರತ ತಂಡದ ಕದ ತಟ್ಟುತ್ತಿರುವ ದೇಶಿ ಹೀರೊ ಸರ್ಫರಾಜ್ ಖಾನ್, ಐಪಿಎಲ್ ಹೀರೊ ತುಷಾರ್ ದೇಶಪಾಂಡೆ ಇದ್ದಾರೆ. ನಾಲ್ಕರ ಘಟ್ಟದಲ್ಲಿ ಪೂಜಾರ ಶತಕ ದಾಖಲಿಸಿದ್ದರು.

ಹೋದ ಸಲವೂ ಫೈನಲ್‌ನಲ್ಲಿ ಈ ತಂಡಗಳು ಮುಖಾಮುಖಿಯಾಗಿದ್ದಾಗ ಪಶ್ಚಿಮ ವಲಯವು ಜಯಿಸಿತ್ತು. 34 ಸಲ ಫೈನಲ್ ತಲುಪಿರುವ ದಾಖಲೆ ಹೊಂದಿರುವ ಪಶ್ಚಿಮ ತಂಡವು 19 ಸಲ ಚಾಂಪಿಯನ್ ಆಗಿದೆ. ಈ ಬಾರಿಯೂ ತನ್ನ ವಿಜಯದ ಓಟ ಮುಂದುವರಿಸುವ ಛಲದಲ್ಲಿದೆ.

ದಕ್ಷಿಣ ವಲಯ ತಂಡವು 14ನೇ ಬಾರಿ ಕಿರೀಟ ಧರಿಸುವ ಗುರಿಯಿಟ್ಟುಕೊಂಡಿದೆ. ಆದರೆ ಎಡಗೈ ವೇಗಿ ಅರ್ಜಾನ್ ನಾಗವಸವಾಲಾ, ಚಿಂತನ್ ಗಜ ಮತ್ತು ಧರ್ಮೇಂದ್ರಸಿಂಹ ಜಡೇಜ ಅವರ ಪರಿಣಾಮಕಾರಿ ದಾಳಿಯನ್ನು ದಕ್ಷಿಣದ ಬ್ಯಾಟರ್‌ಗಳು ಸಮರ್ಥವಾಗಿ ಎದುರಿಸಬೇಕಿದೆ. ಆರ್. ಸಮರ್ಥ್, ಹನುಮವಿಹಾರಿ ತಮ್ಮ ಲಯಕ್ಕೆ ಕುದುರಿಕೊಳ್ಳುವುದು ಮುಖ್ಯ.

ಮಳೆಯಿಂದಾಗಿ ಬಹುತೇಕ ಸಮಯ ಆಟ ನಷ್ಟವಾಗಿದ್ದ ಸೆಮಿಫೈನಲ್‌ನಲ್ಲಿ ದಕ್ಷಿಣ ವಲಯ ತಂಡವು ರೋಚಕ ಜಯ ಸಾಧಿಸಿತ್ತು. ಅಂತಿಮ ಪಂದ್ಯದಲ್ಲಿಯೂ ಮಳೆಯ ಆಟವೇ ಹೆಚ್ಚು ನಡೆಯುವ ಮುನ್ಸೂಚನೆಗಳಿವೆ. ನಾಲ್ಕರ ಘಟ್ಟದಲ್ಲಿ ಆಡಿದಂತಹ ಛಲದ ಆಟವನ್ನು ಆಡಿದರೆ ಮಾತ್ರ ದಕ್ಷಿಣ ವಲಯಕ್ಕೆ ಜಯ ಒಲಿಯಬಹುದು.

ತಂಡಗಳು: ದಕ್ಷಿಣ ವಲಯ: ಹನುಮ ವಿಹಾರಿ (ನಾಯಕ), ಮಯಂಕ್ ಅಗರವಾಲ್, ವಿ.ಕೌಶಿಕ್, ರಿಕಿ ಭುಯ್ (ವಿಕೆಟ್ ಕೀಪರ್), ಆರ್. ಸಮರ್ಥ್, ವಾಷಿಂಗ್ಟನ್ ಸುಂದರ್, ಸಚಿನ್ ಬೇಬಿ, ಸುಯಶ್ ಪ್ರಭುದೇಸಾಯಿ, ಸಾಯಿ ಕಿಶೋರ್, ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್, ಕೆ.ವಿ. ಶಶಿಕಾಂತ್, ದರ್ಶನ್ ಮಿಸಾಲ್, ಎನ್. ತಿಲಕ್ ವರ್ಮಾ.
ಪಶ್ಚಿಮ ವಲಯ: ಪ್ರಿಯಾಂಕ್ ಪಾಂಚಾಲ್ (ನಾಯಕ), ಚೇತೇಶ್ವರ್ ಪೂಜಾರ, ಸೂರ್ಯಕುಮಾರ್ ಯಾದವ್, ಹರ್ವಿಕ್ ದೇಸಾಯಿ (ವಿಕೆಟ್ ಕೀಪರ್), ಪೃಥ್ವಿ ಶಾ, ಹಿತ್ ಪಟೇಲ್ (ವಿಕೆಟ್‌ಕೀಪರ್), ಸರ್ಫರಾಜ್ ಖಾನ್, ಅರ್ಪಿತ್ ವಸವಡಾ, ಅತಿಥ್ ಶೇಠ್, ಶಮ್ಸ್ ಮುಲಾನಿ, ಕೇದಾರ್ ಜಾಧವ್, ಧರ್ಮೇಂದ್ರಸಿಂಹ ಜಡೇಜ, ತುಷಾರ್ ದೇಶಪಾಂಡೆ, ಚಿಂತನ್ ಗಜ, ಅರ್ಜಾನ್ ನಾಗವಸವಾಲಾ.
ಪಂದ್ಯ ಆರಂಭ: ಬೆಳಿಗ್ಗೆ 9.30 ರಿಂದ


ಚೇತೇಶ್ವರ್ ಪೂಜಾರ ಮತ್ತು ಮಯಂಕ್ ಅಗರವಾಲ್ ಮಂಗಳವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭೇಟಿಯಾದರು –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ

ಮುಖ್ಯಾಂಶಗಳು

- ಸೆಮಿಫೈನಲ್‌ನಲ್ಲಿ ಎರಡು ಅರ್ಧಶತಕ ಗಳಿಸಿದ್ದ ಮಯಂಕ್ ಅಗರವಾಲ್
- ವಿದ್ವತ್ ಕಾವೇರಪ್ಪ, ವೈಶಾಖ್ ಮೇಲೆ ಕಣ್ಣು
- ಅಬ್ಬರಿಸುವ ನಿರೀಕ್ಷೆಯಲ್ಲಿ ಸರ್ಫರಾಜ್ ಖಾನ್

ಶ್ವಾಂಟೆಕ್‌ಗೆ ಆಘಾತ; ಸೆಮಿಗೆ ಸ್ವಿಟೊಲಿನಾ

ಲಂಡನ್ (ಎಎಫ್‌ಪಿ/ ರಾಯಿಟರ್ಸ್): ವಿಶ್ವದ ಅಗ್ರಮಾನ್ಯ ಆಟಗಾರ್ತಿ ಇಗಾ ಶ್ವಾಂಟೆಕ್‌ಗೆ ಆಘಾತ ನೀಡಿದ ಉಕ್ರೇನ್‌ನ ಎಲಿನಾ ಸ್ವಿಟೊಲಿನಾ, ವಿಂಬಲ್ಡನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು.

ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ ಸ್ವಿಟೊಲಿನಾ ಮಂಗಳವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯವನ್ನು 7–5, 6–7, 6–2 ರಿಂದ ಗೆದ್ದು ಅಚ್ಚರಿಗೆ ಕಾರಣರಾದರು.

ಕಳೆದ ಅಕ್ಟೋಬರ್‌ನಲ್ಲಿ ಮಗಳಿಗೆ ಜನ್ಮ ನೀಡಿದ್ದ ಸ್ವಿಟೊಲಿನಾ, ಈ ವರ್ಷದ ಏಪ್ರಿಲ್‌ನಲ್ಲಷ್ಟೇ ಕಣಕ್ಕೆ ಮರಳಿದ್ದರು. 2019 ರಲ್ಲಿ ಇಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ಅವರು, ನಾಲ್ಕರಘಟ್ಟದ ಪಂದ್ಯದಲ್ಲಿ ಮಾರ್ಕೆತ ವೊಂದ್ರೊಸೋವಾ ಅವರ ಸವಾಲು ಎದುರಿಸಲಿದ್ದಾರೆ.

ಮಂಗಳವಾರ ನಡೆದ ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ಜೆಕ್ ರಿಪಬ್ಲಿಕ್‌ನ ವೊಂದ್ರೊಸೋವಾ 6–4, 2–6, 6–4 ರಿಂದ ಅಮೆರಿಕದ ಜೆಸ್ಸಿಕಾ ಪೆಗುಲಾ ವಿರುದ್ಧ ಗೆದ್ದರು.

ಫೆಡರರ್ ದಾಖಲೆ ಸರಿಗಟ್ಟಿದ ಜೊಕೊವಿಚ್: ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ರಷ್ಯಾದ ಆಂಡ್ರೆ ರುಬ್ಲೆವ್ ಅವರನ್ನು 4–6, 6–1, 6–4, 6–3 ರಿಂದ ಮಣಿಸಿದ ಸರ್ಬಿಯದ ನೊವಾಕ್ ಜೊಕೊವಿಚ್, ಸೆಮಿಫೈನಲ್ ಪ್ರವೇಶಿಸಿದರು. ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ 46ನೇ ಬಾರಿ ಸೆಮಿ ಪ್ರವೇಶಿಸಿದ್ದು, ಸ್ವಿಟ್ಜರ್‌ಲೆಂಡ್‌ನ ರೋಜರ್ ಫೆಡರರ್ ಅವರ ದಾಖಲೆ ಸರಿಗಟ್ಟಿದರು.

ಸರ್ಬಿಯದ ಆಟಗಾರ ಸೆಮಿಯಲ್ಲಿ ಇಟಲಿಯ ಯಾನಿಕ್ ಸಿನೆರ್ ಅವರನ್ನು ಎದುರಿಸುವರು. ಇನ್ನೊಂದು ಎಂಟರಘಟ್ಟದ ಪಂದ್ಯದಲ್ಲಿ ಸಿನೆರ್ 6-4, 3-6, 6-2, 6-2 ರಿಂದ ರಷ್ಯಾದ ರೋಮನ್ ಸಫಿಯುಲಿನ್ ವಿರುದ್ಧ ಗೆದ್ದರು.

ಕ್ವಾರ್ಟರ್‌ಗೆ ಅಲ್ಕರಾಜ್: ಸ್ಪೇನ್‌ನ ಕಾರ್ಲೊಸ್ ಅಲ್ಕರಾಜ್ ಅವರು ಸೋಮವಾರ ತಡರಾತ್ರಿ ನಡೆದ ಪಂದ್ಯದಲ್ಲಿ 3-6, 6-3, 6-3, 6-3 ರಿಂದ ಇಟಲಿಯ ಮಟೆಯೊ ಬೆರೆಟಿನಿ ಅವರನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಎಂಟರಘಟ್ಟದ ಪಂದ್ಯದಲ್ಲಿ ಅವರು ಡೆನ್ಮಾರ್ಕ್‌ನ ಹೋಲ್ಗರ್ ರೂನ್ ವಿರುದ್ಧ ಸೆಣಸಾಟ ನಡೆಸುವರು. ರೂನ್, ನಾಲ್ಕನೇ ಸುತ್ತಿನಲ್ಲಿ 3-6, 7-6, 7-6, 6-3 ರಿಂದ ಬಲ್ಗೇರಿಯದ ಗ್ರಿಗೊರ್ ದಿಮಿತ್ರೊವ್ ಅವರನ್ನು ಸೋಲಿಸಿದರು.

ಕ್ವಾರ್ಟರ್‌ಗೆ ಬೋಪಣ್ಣ

ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿ 7-5, 4-6, 7-6 ರಲ್ಲಿ ರೀಸ್ ಸ್ಟಾಲ್ಡರ್– ಡೇವಿಡ್ ಪೆಲ್ ವಿರುದ್ಧ ಗೆದ್ದು ಪುರುಷರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಕನ್ನಡದಲ್ಲೇ ಪೋಸ್ಟ್: ಬೋಪಣ್ಣ ಅವರನ್ನು 'ವಿಂಬಲ್ಡನ್' ತನ್ನ ಅಧಿಕೃತ ಟ್ವಿಟರ್ ಖಾತೆಯಲ್ಲಿ ಕನ್ನಡದಲ್ಲೇ ಟ್ವೀಟ್ ಮಾಡಿ ವಿಶೇಷವಾಗಿ ಅಭಿನಂದಿಸಿದೆ. ವಿಂಬಲ್ಡನ್ ಸಾಮಾಜಿಕ ಮಾಧ್ಯಮಗಳಲ್ಲಿ ರೋಹನ್ ಅವರ ಚಿತ್ರವನ್ನು ಹಾಕಿ 'ಭಾರತದ ಸೂಪರ್ ಸ್ಟಾರ್' ಎಂದು ಕೊಂಡಾಡಿದೆ.


ಸ್ವಿಟೊಲಿನಾ ಗೆಲುವಿನ ಸಂಭ್ರಮ –ಎಎಫ್‌ಪಿ ಚಿತ್ರ

ಮಿಂಚಿದ ದೀಪ್ತಿ, ಶಫಾಲಿ; ಭಾರತಕ್ಕೆ ಸರಣಿ

ಮೀರ್‌ಪುರ (ಪಿಟಿಐ): ಸ್ಪಿನ್ನರ್‌ಗಳಾದ ದೀಪ್ತಿ ಶರ್ಮಾ ಮತ್ತು ಶಫಾಲಿ ವರ್ಮಾ ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಭಾರತ ಮಹಿಳಾ ತಂಡ, ಎರಡನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ 8 ರನ್‌ಗಳ ಗೆಲುವು ಸಾಧಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಹರ್ಮನ್‌ಪ್ರೀತ್ ಕೌರ್ ಬಳಗ, ನಿಗದಿತ ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 95 ರನ್ ಕಲೆಹಾಕಿತು. ಟಿ20 ಪಂದ್ಯದಲ್ಲಿ ಬಾಂಗ್ಲಾ ವಿರುದ್ಧ ಭಾರತದ ಕನಿಷ್ಠ ಮೊತ್ತ ಇದು.

ಆದರೆ ಬ್ಯಾಟಿಂಗ್ ವೈಫಲ್ಯವನ್ನು ಬೌಲಿಂಗ್‌ನಲ್ಲಿ ಮರೆಮಾಚಿದ ಭಾರತ, ಎದುರಾಳಿ ತಂಡವನ್ನು 87 ರನ್‌ಗಳಿಗೆ ಕಟ್ಟಿಹಾಕುವಲ್ಲಿ ಯಶಸ್ವಿಯಾಯಿತು. ಈ ಗೆಲುವಿನ ಮೂಲಕ ಭಾರತ, ಮೂರು ಪಂದ್ಯಗಳ ಸರಣಿಯಲ್ಲಿ 2–0 ರಿಂದ ಮುನ್ನಡೆ ಸಾಧಿಸಿತು. ಸರಣಿಯ ಕೊನೆಯ ಪಂದ್ಯ ಗುರುವಾರ ನಡೆಯಲಿದೆ.

ಯುವ ಸ್ಪಿನ್ನರ್‌ಗಳಾದ ಮಿನ್ನು ಮಣಿ (4-1-9-2) ಮತ್ತು ಅನುಷಾ ಬಾರೆಡ್ಡಿ (20ಕ್ಕೆ 1) ಅವರು ಎದುರಾಳಿ ತಂಡಕ್ಕೆ ಆರಂಭಿಕ ಆಘಾತ ನೀಡಿದರೆ, ಅನುಭವಿಗಳಾದ ದೀಪ್ತಿ (12ಕ್ಕೆ 3) ಮತ್ತು ಶಫಾಲಿ (15ಕ್ಕೆ 3) ಅವರು 19 ಮತ್ತು 20ನೇ ಓವರ್‌ನಲ್ಲಿ ಪರಿಣಾಮಕಾರಿ ದಾಳಿ ಸಂಘಟಿಸಿದರು.

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 95 (ಸ್ಮೃತಿ ಮಂದಾನ 13, ಶಫಾಲಿ ವರ್ಮಾ 19, ಯಸ್ತಿಕಾ ಭಾಟಿಯಾ 11, ದೀಪ್ತಿ ಶರ್ಮಾ 10, ಅಮನ್‌ಜ್ಯೋತ್ ಕೌರ್ 14, ಸುಲ್ತಾನಾ ಖಾತೂನ್ 21ಕ್ಕೆ 3, ಫಹೀಮಾ ಖಾತೂನ್ 16ಕ್ಕೆ 2)

ಬಾಂಗ್ಲಾದೇಶ 20 ಓವರ್‌ಗಳಲ್ಲಿ 87 (ನಿಗಾರ್ ಸುಲ್ತಾನಾ 38, ಶೋರ್ನ ಅಖ್ತರ್ 7, ದೀಪ್ತಿ ಶರ್ಮಾ 12ಕ್ಕೆ 3, ಶಫಾಲಿ ವರ್ಮಾ 15ಕ್ಕೆ 3, ಮಿನ್ನು ಮಣಿ 9ಕ್ಕೆ 2) **ಫಲಿತಾಂಶ:** ಭಾರತಕ್ಕೆ 8 ರನ್‌ಗಳ ಗೆಲುವು